ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/–
ಕನ್ನಡ–ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ–06 • ಸಂಚಿಕೆ–12 • ಏಪ್ರಿಲ್ 2025



ರೂ. 28/– BAAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ ಸಂಪುಟ–06 • ಸಂಚಿಕೆ–12 • ಏಪ್ರಿಲ್ 2025

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations,** Bangalore

ಪತ್ರಗಳು

ಮಾನ್ಯರೆ,

ಬಾಪು ಪ್ರಪಂಚ ಮಾರ್ಚ್ ಸಂಚಿಕೆ ವೈವಿಧ್ಯಮಯ ಲೇಖನಗಳಿಂದ ಕೂಡಿದೆ. ಕಸ್ತೂರ್ ಬಾ, ಕಡಿದಾಳ್ ಮಂಜಪ್ಪ, ಸಮಾಜ ಸೇವೆಯಲ್ಲಿ ಸಮರ್ಪಣಾ ಸಂಸ್ಥೆ, ಗಾಂಧಿ ಏಕೆ ರಾಷ್ಟ್ರಪಿತ... ಹೀಗೆ ಎಲ್ಲವೂ ಮೆಚ್ಚುಗೆಯ ಲೇಖನಗಳಾಗಿವೆ .

ಗಾಂಧಿ ಸಿನಿಮಾ ಕ್ಲಬ್ ಚಟುವಟಿಕೆಗಳ ಬಗ್ಗೆ ಕುತೂಹಲವಿದೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗಾಂಧಿ ಪ್ರಣೀತ ಸಂಸ್ಥೆಗಳ ಸಮನ್ವಯ ವೇದಿಕೆಯಾಗಲಿ.

ಮೋಹನ, ಬೆಂಗಳೂರು

* * *

ಮಾನ್ಯರೆ,

ಕರ್ನಾಟಕದ ಕಸ್ತೂರ್ ಬಾ ಎಂದೇ ಹೆಸರಾಗಿರುವ ಯಶೋದರಮ್ಮ ದಾಸಪ್ಪನವರ ಬಗ್ಗೆ ಲೇಖನ ಪ್ರಕಟಿಸಿ. ಅವರು ಕರ್ನಾಟಕದಲ್ಲಿ ಸ್ಥಾಪಿಸಿದ ಅರಸೀಕೆರೆಯ ಕಸ್ತೂರ್ ಬಾ ಆಶ್ರಮದ ಉನ್ನತಿ ಓದಿ ಸಂತೋಷವಾಯಿತು.

ಮಹಾದೇವ್, ಅರಸೀಕೆರೆ

* * *

ಮಾನ್ಯರೆ,

ಬಾಪು ಪ್ರಪಂಚ ಪತ್ರಿಕೆಯನ್ನು ಆಸಕ್ತ ಶಾಲಾ ಕಾಲೇಜುಗಳಿಗೆ ಕಳುಹಿಸಲು ನಾವು ನೆರವಾಗುತ್ತೇವೆ. ಯುವ ಪೀಳಿಗೆಗೆ ಗಾಂಧಿ ಮತ್ತು ಅವರ ವಿಚಾರಗಳು ಈ ಮೂಲಕ ಪರಿಚಯವಾಗಲಿ

ಎನ್ ಸಿ ಪಟೇಲ್, ಪ್ರಗತಿಪರ ತೋಟಗಾರಿಕಾ ಕೃಷಿಕರು
ಬೆಂಗಳೂರು ಹೊರ ವಲಯ



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು https://gandhibhavan.in ಜಾಲತಾಣದಲ್ಲಿ ವೀಕ್ಷಿಸಿ.

ಪತ್ರಿಕೆಯ ಬಗ್ಗೆ
ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com



ಉಪ್ಪಿನ ಸತ್ಯಾಗ್ರಹ: ದಂಡಿ ಯಾತ್ರೆ

ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯಕ್ಕಾಗಿ ಕರೆ ಕೊಡುವ ನಿರ್ಣಯವನ್ನು ಮಂಡಿಸಿ ಅನುಮೋದನೆ ಪಡೆದಿದ್ದ ಗಾಂಧಿ, ಲಾಹೋರ್‌ನಿಂದ ವಾಪಸಾದ ನಂತರ ಮುಂದಿನ ಕಾರ್ಯಕ್ರಮದ ಬಗ್ಗೆ ಯೋಚಿಸತೊಡಗಿದ್ದರು. ಜಾಗತಿಕ ಆರ್ಥಿಕ ಹಿಂಜರಿತದ ಪರಿಣಾಮವಾದ ಬೆಲೆ ಏರಿಕೆಯಿಂದ ದೇಶ, ನಿರ್ದಿಷ್ಟವಾಗಿ ರೈತರು ಮತ್ತು ಕಾರ್ಮಿಕರು ಕಂಗೆಟ್ಟು ಸರ್ಕಾರದ ವಿರುದ್ಧ ಅವರನ್ನು ಪ್ರಚೋದಿಸುವುದು ಸುಲಭವಾಗಿತ್ತಾದರೂ ದೇಶದ ವಾತಾವರಣದಲ್ಲಿ ವೈರ ಮತ್ತು ಹಿಂಸೆ ತುಂಬಿಕೊಂಡಿತ್ತು. ಒಂದು ಕಡೆ ಹಿಂದೂ-ಮುಸ್ಲಿಮರ ಸಂಬಂಧ ಹದಗೆಟ್ಟು ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್‌ನ ನಾಯಕರು ಇದನ್ನು ತಮ್ಮ ವಿಭಜನಕಾರಿ ರಾಜಕೀಯಕ್ಕೆ ಬಳಸಿಕೊಳ್ಳುವ ಪ್ರಯತ್ನಗಳನ್ನು ಮಾಡುತ್ತಿದ್ದರೆ, ಎಚ್‌ಆರ್‌ಸಿಎ ಪಡೆಯ ಭಗತ್ ಸಿಂಗ್ ಮತ್ತವರ ಯುವ ಕ್ರಾಂತಿಕಾರಿಗಳು ಮತ್ತು ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಹಿಂಸೆಯ ಮೂಲಕ ಪ್ರಭುತ್ವವನ್ನು ಬೆದರಿಸಿ ಓಡಿಸುವ ಪ್ರಯತ್ನಗಳಲ್ಲಿ ತೊಡಗಿದ್ದರು. ಕಾಂಗ್ರೆಸ್‌ನಲ್ಲೇ ಸುಭಾಷ್ ಚಂದ್ರ ಬೋಸರು ಆಗಾಗ್ಗೆ ಸೇನಾ ಸಮವಸ್ತ್ರದಲ್ಲಿ ಕಾಣಿಸಿಕೊಂಡು ಕಾಂಗ್ರೆಸ್ ಯುವಸದಸ್ಯರ ಸ್ಫೂರ್ತಿ ಕೇಂದ್ರವಾಗತೊಡಗಿದ್ದರು. ಆಗ ಕಾಂಗ್ರೆಸ್ ಕೂಡ ಒಡೆದ ಮನೆಯಾಗಿತ್ತು. ಜೊತೆಗೆ ಗಾಂಧಿಗೆ ಅಸಹಕಾರ ಸತ್ಯಾಗ್ರಹದಲ್ಲಿ ಸಂಭವಿಸಿದ ಮತ್ತು ಈ ಸತ್ಯಾಗ್ರಹವನ್ನು ಸ್ಥಗಿತಗೊಳಿಸಲು ಕಾರಣವಾಗಿದ್ದ ಹಿಂಸಾಕೃತ್ಯಗಳ ಕಹಿ ನೆನಪೂ ಇತ್ತು. ಈ ಹಿನ್ನಲೆಯಲ್ಲಿ ಅವರು 'ಯಂಗ್ ಇಂಡಿಯಾ'ದ 1930ರ ಮೊದಲ ಸಂಚಿಕೆಯಲ್ಲಿ ಅಹಿಂಸೆಯ ಅನಿವಾರ್ಯತೆಯ ಬಗ್ಗೆ ಬರೆಯುತ್ತಾ, ಬ್ರಿಟಿಷ್ ವಿರೋಧಿ ಹಿಂಸೆಯನ್ನು ಪ್ರತಿಪಾದಿಸುವವರು ಸ್ವಾತಂತ್ರ್ಯದ ನಂತರ ಒಂದಲ್ಲ ಒಂದು ಕಾರಣದ ಮೇಲೆ ದೇಶದ ಜನರ ವಿರುದ್ಧವೂ ಹಿಂಸೆಯನ್ನು ಪ್ರತಿಪಾದಿಸುವ ಎಲ್ಲ ಸಾಧ್ಯತೆಗಳಿವೆ ಎಂದು ಎಚ್ಚರಿಸಿ ಬರೆದ ಲೇಖನಕ್ಕೆ, ಭಗತ್‌ಸಿಂಗ್ ಮತ್ತು ಗೆಳೆಯರು ಬರೆದ ಉತ್ತರ ಅವರನ್ನು ಆಘಾತಗೊಳಿಸಿತ್ತು. ಅವರು ಸ್ನೇಹಿತರಿಗಾಗಿ ಅಗತ್ಯ ಬಿದ್ದರೆ ಪ್ರಾಣ ಕೊಡುವುದೂ, ವೈರಿಯನ್ನು ಸಾಧ್ಯವಾದರೆ ಕೊಲ್ಲುವುದೂ ಮಾನವನ ಸಹಜ ವರ್ತನೆಯಾಗಿದೆ. ಇದನ್ನು ಅರಿಯುವುದು ಯಾರಿಗೂ ಕಷ್ಟವಾಗಬಾರದು ಎಂದು ಅವರು ಬರೆದಿದ್ದರು.

ಪಂಜರದೊಳಗಿನ ಸಿಂಹ

ಹೀಗಾಗಿ ಗಾಂಧಿ ಬಹು ಎಚ್ಚರಿಕೆಯಿಂದ ತಮ್ಮ ಮುಂದಿನ ಕಾರ್ಯಕ್ರಮವನ್ನು ರೂಪಿಸಬೇಕಿತ್ತು. 1930 ರ ಜನವರಿ 18 ರಂದು ಸಬರ್ಮತಿ ಆಶ್ರಮಕ್ಕೆ ಬಂದ ಗುರುದೇವ ಟ್ಯಾಗೋರರು ಗಾಂಧಿಯವರನ್ನು 'ಮುಂದೇನು?' ಎಂದು ಕೇಳಿದಾಗ, ಅವರು ತಾವು ಹಗಲೂ ರಾತ್ರಿ ಯೋಚಿಸಿದರೂ ಈ ಕತ್ತಲೆಯಲ್ಲಿ ಏನೂ ಹೊಳೆಯುತ್ತಿಲ್ಲ ಎಂದು ಉತ್ತರಿಸಿದ್ದರು.

ಗಾಂಧಿಯವರಿಗೆ ಮುಂದಿನ ಕಾರ್ಯಾಚರಣೆಗೆ ನಿಜವಾದ ಹುಮ್ಮಸ್ಸು ನೀಡಿದ ಸಂಗತಿ ಎಂದರೆ, ಲಾಹೋರ್ ಕಾಂಗ್ರೆಸ್‌ನಲ್ಲಿ ನಿರ್ಧರಿಸಿದಂತೆ, ಪ್ರತಿ ಜನವರಿಯ ಕೊನೆಯ ಭಾನುವಾರ ಸ್ವಾತಂತ್ರ್ಯದ ಪ್ರತಿಜ್ಞೆ ಸ್ವೀಕರಿಸಿ ಆಚರಿಸಲು



ನಿರ್ಧರಿಸಲಾಗಿದ್ದ ಸ್ವಾತಂತ್ರ್ಯ ದಿನಾಚರಣೆ, ಆ ಜನವರಿ 26ರಂದು ದೇಶದ ವಿವಿಧ ಭಾಗಗಳಲ್ಲಿ ಅಪಾರ ಜನಬೆಂಬಲದೊಂದಿಗೆ ಕಾಂಗ್ರೆಸ್‌ನ ತ್ರಿವರ್ಣ ಧ್ವಜದ ಆರೋಹಣದ ಮೂಲಕ ಯಶಸ್ವಿಯಾಯಿತು ಎಂಬ ಸುದ್ದಿ ಬೇರೆ ಬೇರೆ ಊರುಗಳಿಂದ ಬಂದದ್ದು. ಈ ಸುದ್ದಿಗಳ ಪ್ರಕಾರ ಎಲ್ಲ ಹಿನ್ನೆಲೆಗಳಿಂದ ಬಂದಿದ್ದ ಅಪಾರ ಸಂಖ್ಯೆಯ ಜನ, ಗಾಂಧಿ ಸೂಚಿಸಿದ್ದಂತೆ ಜನರನ್ನು ಹಲವು ನೆಲೆಗಳಿಂದ ಸೂರೆ ಮಾಡುತ್ತಿದ್ದ ಬ್ರಿಟಿಷ್ ಸರ್ಕಾರದ ವಿರುದ್ಧದ ಹೋರಾಟವನ್ನು ಶಿಸ್ತು, ಸಂಯಮ ಮತ್ತು ಶಾಂತಿ ಪಾಲನೆಯ ಮೂಲಕವೇ ನಡೆಸುವ ಪ್ರತಿಜ್ಞೆ ಕೈಗೊಂಡಿದ್ದರು. ಕೆಲವರು ಆ ದಿನವನ್ನು ನೂಲುವ, ಅಸ್ಪೃಶ್ಯರ ಜೊತೆ ಒಡನಾಡುವ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಆಚರಿಸಿದ್ದರು.

ವೈಸ್‌ರಾಯ್‌ಗೆ ನೀಡಿದ ಕಾರ್ಯಸೂಚಿ–ಉಪ್ಪಿನ ಮೇಲೆ ಬಿದ್ದ ಕಣ್ಣು!

ಗಾಂಧಿ ಕೊನೆಗೂ ಹೋರಾಟವನ್ನು ಆರಂಭಿಸುವ ನಿಶ್ಚಯ ಮಾಡಿದರು. ಇದಕ್ಕೆ ಪೀಠಿಕೆಯಾಗಿ 'ಯಂಗ್ ಇಂಡಿಯಾ'ದ ಜನವರಿ ಕೊನೆಯ ಸಂಚಿಕೆಯಲ್ಲಿ, ವೈಸ್‌ರಾಯ್ ಮುಂದೆ, ಪಾನ ನಿರೋಧ, ಕಂದಾಯ ಕಡಿತ, ಉಪ್ಪಿನ ಮೇಲಿನ ತೆರಿಗೆ ರದ್ದತಿ, ಆಮದು ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ, ಸೇನಾ ವೆಚ್ಚ ಮತ್ತು ಅಧಿಕಾರಿಗಳ ಸಂಬಳ–ಭತ್ಯೆಗಳ ಕಡಿತ ಮತ್ತು ರೂಪಾಯಿ–ಪೌಂಡ್ ವಿನಿಮಯ ದರದ ನ್ಯಾಯೋಚಿತ ಪರಿಷ್ಕಾರಗಳು ಸೇರಿದಂತೆ ಹನ್ನೊಂದು ಬೇಡಿಕೆಗಳನ್ನಿರಿಸಿದರು. ಇವನ್ನು ಪೂರೈಸಿದಲ್ಲಿ ಸತ್ಯಾಗ್ರಹದ ಮಾತಾಡದೆ ಕಾಂಗ್ರೆಸ್, ಮುಕ್ತ ಮಾತುಕತೆಗೆ ಅವಕಾಶವಿರುವ ಯಾವುದೇ ಸಮ್ಮೇಳನದಲ್ಲಿ ಭಾಗವಹಿಸಲು ಸಿದ್ಧ ಎಂದು ಪ್ರಕಟಿಸಿದರು.

ಇದಕ್ಕೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಾರದಾದಾಗ ಗಾಂಧಿ ಕಾಯಿದೆ ಭಂಗ ಚಳುವಳಿಗೆ ಸಿದ್ಧರಾದರು. ಇದರ ಚರ್ಚೆಗಾಗಿ ಫೆಬ್ರುವರಿ 15ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಕರೆಯಲಾಯಿತು. ಅಲ್ಲಿ ಅವರಿಗೆ ಹಲವರು ಹಲವು ಸಲಹೆಗಳನ್ನು ನೀಡಿದರು. ಗಾಂಧಿ ಉಪ್ಪಿನ ಮೇಲಿನ ತೆರಿಗೆ ವಿರುದ್ಧ ಸತ್ಯಾಗ್ರಹದ ಪ್ರಸ್ತಾಪ ಮಾಡಿದಾಗ ಹಲವರು ನಕ್ಕು ಅದನ್ನು ತಿರಸ್ಕರಿಸಿದರು. ಇದರ ಬದಲಿಗೆ, ಸುಭಾಷರು ಪರ್ಯಾಯ ಸರ್ಕಾರ ರಚನೆಯನ್ನು ಪ್ರಕಟಿಸೋಣ ಎಂದರೆ, ವಲ್ಲಭಭಾಯಿ ಪಟೇಲರು ಕರ, ಭೂಕಂದಾಯ ನಿರಾಕರಣೆಯನ್ನು ಸೂಚಿಸಿದರು. ಬಜಾಜರು ವೈಸ್‌ರಾಯ್ ಮನೆಗೆ ಮೆರವಣಿಗೆ ಹೋಗಿ ಧರಣಿ ಕೂರೋಣ ಎಂದರೆ, ರಾಜಾಜಿ ಪಾನನಿರೋಧ ಚಳುವಳಿ ಅತ್ಯುತ್ತಮ ಎಂದರು. ಆದರೆ ಗಾಂಧಿ ಇವೆಲ್ಲವನ್ನೂ ಮೀರಿದ, ಎಲ್ಲ ಜಾತಿ ಮತ ಪಂಥಗಳ ಜನರನ್ನೂ ಒಳಗೊಳ್ಳುವ ಒಂದು ಸಮಗ್ರ ಕಾರ್ಯಕ್ರಮದ ಹೊಳಹು ಕಾಣುತ್ತಿದ್ದರು. ಅದು ಉಪ್ಪಿನ ಸುತ್ತಲೇ ಗಿರಕಿ ಹೊಡೆಯುತ್ತಿತ್ತು. ಕೊನೆಗೆ ಕಾರ್ಯಕಾರಿ ಸಮಿತಿ ಗಾಂಧಿಯವರ ಪ್ರಸ್ತಾಪವನ್ನು ಅರ್ಧ ಮನಸ್ಸಿನಿಂದಲೇ ಆದರೂ ಒಪ್ಪಿತು.

ಉಪ್ಪು, ಜಾತಿ ಮತ ವರ್ಗಗಳ ಭೇದವಿಲ್ಲದ ಎಲ್ಲರ ನಿತ್ಯ ಬಳಕೆಯ ವಸ್ತುವಾಗಿತ್ತು. ಅದು ವಿಶೇಷವಾಗಿ ಬಡವರ ಕನಿಷ್ಠ ಮಸಾಲೆ ಪದಾರ್ಥವಾಗಿತ್ತು. ಆದರೆ ಅದರ ಮೇಲೆ ಏಕಸ್ವಾಮ್ಯ ಹೊಂದಿದ್ದ ಸರ್ಕಾರ, ಬಡವರು ತೆರಲಾರದಷ್ಟು ತೆರಿಗೆ ವಿಧಿಸಿತ್ತು. ಹಾಗೆ ನೋಡಿದರೆ ಬಹುಕಾಲದಿಂದಲೂ ಈ ಉಪ್ಪಿನ ಮೇಲಿನ ತೆರಿಗೆಯ ವಿಷಯ ಗಾಂಧಿಯವರ ಮನಸ್ಸನ್ನು ಬಾಧಿಸುತ್ತಿತ್ತು. ಬ್ರಿಟಿಷ್ ಸಂಸತ್ತಿನ ಕೆಲ ಸದಸ್ಯರೇ, ಭಾರತದಲ್ಲಿ ಉಪ್ಪಿನ ತೆರಿಗೆಯನ್ನು ನಾಚಿಕೆಗೇಡಿನ ವಿಷಯ

ಎಂದು ಕರೆದಿದ್ದರು. ಉಪ್ಪಿನ ಅಕ್ರಮ ತಯಾರಿಗಾಗಿ ರೈತನೊಬ್ಬನನ್ನು ಬಂಧಿಸಿದ ಇಂಗ್ಲಿಷ್ ಅಧಿಕಾರಿಯೊಬ್ಬ, ತಾನು ಕಾನೂನು ಪ್ರಕಾರ ಕೈಗೊಂಡಿರುವೆನಾದರೂ ಈ ಕ್ರಮ ಅನೈತಿಕ ಮತ್ತು ಪಾಪಕರ ಎಂದು ದಾಖಲಿಸಿದ್ದನ್ನು ಅವರು ಗಮನಿಸಿದ್ದರು. ಗಾಳಿ ನೀರಿನಷ್ಟೇ ನಿಸರ್ಗದತ್ತವಾಗಿರುವ ಈ ವಸ್ತುವಿನ ಮೇಲೆ ಸರ್ಕಾರದ ಒಡೆತನ ಮತ್ತು ತೆರಿಗೆ ಅನ್ಯಾಯದ್ದು ಎಂದು ಗಾಂಧಿಗೂ ಅನಿಸಿತ್ತು.



ಮಹಾಯಾತ್ರೆಗೆ ಪೂರ್ವ ಸಿದ್ಧತೆ

ಈ ಕಾರ್ಯಕ್ರಮವನ್ನು ಅಂತಿಮಗೊಳಿಸುವ ಮುನ್ನ ಅವರು ಸಾಕಷ್ಟು ಪೂರ್ವ ಸಿದ್ಧತೆ ನಡೆಸಿದ್ದರು. ಉಪ್ಪು ಇಲಾಖೆಯ ನಿವೃತ್ತ ಅಧಿಕಾರಿಯೊಂದಿಗೆ ಸಮಾಲೋಚಿಸಿ ಉಪ್ಪಿನ ಲಭ್ಯತೆಯ ಜಾಗಗಳು, ಉಪ್ಪಿನ ತಯಾರಿಕೆ, ಅದರ ಮುಖ್ಯ ಕೇಂದ್ರಗಳು, ದಾಸ್ತಾನು ವ್ಯವಸ್ಥೆಯ ವಿವರಗಳೆಲ್ಲವನ್ನೂ ತಿಳಿದುಕೊಂಡು, ಅದಕ್ಕೆ ತಕ್ಕಂತೆ ಸತ್ಯಾಗ್ರಹದ ಕಾರ್ಯಕ್ರಮದ ವಿವರ ಸಿದ್ಧಪಡಿಸಿದ್ದರು. ಈ ವಿವರಗಳೇ ಈ ಸತ್ಯಾಗ್ರಹದ ಸ್ವರೂಪವನ್ನು ನಿರ್ಧರಿಸಿತೆಂದು ಹೇಳಬೇಕು. ಉಪ್ಪಿನ ಕಾನೂನನ್ನು ಮುರಿಯಲು ಪ್ರಶಸ್ತವಾದ ಸ್ಥಳವನ್ನು, ತಮ್ಮ ಶಿಷ್ಯರಾದ ರವಿಶಂಕರ ವ್ಯಾಸ್ ಮತ್ತು ಮೋಹನಲಾಲ್ ಪಾಂಡ್ಯರ ಮೂಲಕ ಪಡೆದ ಮಾಹಿತಿಯ ಮೂಲಕ ನಿರ್ಧರಿಸಿದರು. ಅದು ದಕ್ಷಿಣ ಗುಜರಾತ್‌ನ ಸೂರತ್ ಬಳಿಯ ಅರಬ್ಬಿ ಸಮುದ್ರದ ತಡಿಯ, ದಂಡಿ ಎಂಬ ಹಳ್ಳಿಯಾಗಿತ್ತು. ಅಲ್ಲಿ ಸಮುದ್ರದ ಅಲೆಗಳು ವಾಪಸ್ ಹೋಗುವಾಗ ನೈಸರ್ಗಿಕ ಉಪ್ಪಿನ ಉಂಡೆಗಳನ್ನು ಬಿಟ್ಟು ಹೋಗುತ್ತವೆ ಎಂಬ ಮಾಹಿತಿ ಪಡೆಯಲಾಗಿತ್ತು. ಆ ಹಳ್ಳಿ ಅಹಮದಾಬಾದ್‌ನಿಂದ ಸುಮಾರು 280 ಕಿ.ಮೀ. ದೂರವಿದ್ದುದರಿಂದ ಸತ್ಯಾಗ್ರಹವನ್ನು ಒಂದು ತೀರ್ಥಯಾತ್ರೆಯಂತೆಯೇ ಕಲ್ಪಿಸಿಕೊಳ್ಳಲಾಯಿತು. ಈ ಯಾತ್ರೆ ಬ್ರಿಟಿಷ್ ಪ್ರಭುತ್ವ ವಿರೋಧಿ ಹೋರಾಟದ ಉದ್ದೇಶಗಳನ್ನೂ, ಸತ್ಯಾಗ್ರಹದ ಅರ್ಥವನ್ನೂ ಅತ್ಯಂತ ಹೆಚ್ಚು ಜನರಿಗೆ ತಲುಪಿಸುವ ಮತ್ತು ಇದು ಇಡೀ ದೇಶದ ಜನರ ಗಮನವನ್ನು ಸೆಳೆಯುವಂತಹ ಪರಿಣಾಮಕಾರಿ ರೀತಿಯಲ್ಲಿ ಆಯೋಜಿಸುವ ನಿರ್ಧಾರ ಮಾಡಲಾಯಿತು. ಹಾಗಾಗಿ ಯಾತ್ರೆಯನ್ನು ಯಾವ, ಎಂತಹ ಹಳ್ಳಿ–ಪಟ್ಟಣಗಳ ಮೂಲಕ ನಡೆಸಬೇಕೆಂಬ ಎಚ್ಚರಿಕೆಯ ಆಧಾರದ ಮೇಲೆ ಮಾರ್ಗವನ್ನು ನಿರ್ಧರಿಸಲಾಯಿತು. ಸರ್ಕಾರದ ಅಧಿಕಾರಿಗಳು ತ್ವರಿತವಾಗಿ ಮತ್ತು ಸುಲಭವಾಗಿ ತಲುಪಲಾಗದ ಮತ್ತು ಗಾಂಧಿಯವರ ರಚನಾತ್ಮಕ ಕಾರ್ಯಕ್ರಮಗಳ ಪ್ರಚಾರಕ್ಕೆ ಹದವಾಗಿ ಕಂಡ ಸ್ಥಳಗಳಿಗೆ ಪ್ರಾಶಸ್ತ್ಯ ನೀಡಲಾಗಿತ್ತು.



ದಂಡಿ ಯಾತ್ರೆಯ ಘೋಷಣೆ

ಮಾರ್ಚ್ 5ರಂದು ಸಬರ್ಮತಿ ನದಿ ತೀರದಲ್ಲಿ ಸೇರಿದ್ದ ಆಶ್ರಮದ ಪ್ರಾರ್ಥನಾ ಸಭೆಯಲ್ಲಿ, ಉಪ್ಪಿನ ಮೇಲಿನ ತೆರಿಗೆ ರದ್ದತಿಗಾಗಿ ಸಂಬಂಧಿತ ಕಾನೂನು ಮುರಿಯುವ ಉದ್ದೇಶದ ದಂಡಿ ಯಾತ್ರೆಯ ಕಲ್ಪನೆಯನ್ನು ಸಾರ್ವಜನಿಕವಾಗಿ ಪ್ರಕಟಿಸಿದರು.



ಮಾರ್ಚ್ 12ರ ನಸುಕಿನಲ್ಲಿ ಸುಮಾರು ನೂರು ಜನ ಆಶ್ರಮವಾಸಿಗಳ ತಂಡದೊಂದಿಗೆ ತಾವು ಯಾತ್ರೆಯನ್ನು ಆರಂಭಿಸುವುದಾಗಿ ಅವರು ಘೋಷಿಸಿದರು. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ (ಏಪ್ರಿಲ್ 13) ವರ್ಷಾಚರಣೆಗಾಗಿ ಆಯೋಜಿಸಲಾಗಿರುವ ರಾಷ್ಟ್ರೀಯ ಸಪ್ತಾಹದ ಆರಂಭದ ದಿನ ಅಂದರೆ, ಏಪ್ರಿಲ್ 6ರಂದು ಅವರು ದಂಡಿ ಮುಟ್ಟಿ ಕಾನೂನು ಮುರಿಯುವ ಹಾಗೆ ಇಡೀ ಯಾತ್ರೆಯನ್ನು ವಿನ್ಯಾಸಗೊಳಿಸಲಾಗಿತ್ತು. ಅದಕ್ಕೆ ಒಂದು ವಾರದ ಮುನ್ನ ದೇಶಾದ್ಯಂತ ರಾಷ್ಟ್ರೀಯ ಸಪ್ತಾಹ ಆಚರಣೆಯನ್ನು ಆರಂಭಿಸಿ ಈ ಕಾನೂನುಭಂಗ ಚಳುವಳಿಗೆ ಹುರುಪು ತುಂಬಬೇಕೆಂದೂ ಅವರು ಜನರಿಗೆ ಕರೆಕೊಟ್ಟರು.


ಗಾಂಧಿ, ಯಾತ್ರೆಯ ಮಾರ್ಗದ ಸಕಲ ವಿವರಗಳನ್ನೂ ತಂಗುವ ಜಾಗಗಳನ್ನೂ ಆಶ್ರಮವಾಸಿಗಳ ಆಯ್ದ ಸದಸ್ಯರ ತಂಡದೊಂದಿಗೆ ಚರ್ಚಿಸಿ ಅಂತಿಮಗೊಳಿಸಿದರು. ಹಾಗೇ ಈ ವಿವರಗಳನ್ನು ಗುಜರಾತಿ ವೃತ್ತಪತ್ರಿಕೆಗಳ ಮೂಲಕ ಪ್ರಚಾರ ಮಾಡಿದರು. ತಮ್ಮ ಪಾದಯಾತ್ರೆಯ ತಂಡ ತಂಗುವ ಊರಿನವರು, ತಮಗೆ ಮಸಾಲೆ ಇಲ್ಲದ ಸರಳ ಆಹಾರ ಮತ್ತು ಮಲಗಲು ಸ್ವಚ್ಛವಾದ ಜಾಗ ಒದಗಿಸಿದರೆ ಸಾಕೆಂದು ಕೋರಿದರು. ಗುಜರಾತ್ ವಿದ್ಯಾಪೀಠದ ಆಧ್ಯಾಪಕರು ಮತ್ತು ವಿದ್ಯಾರ್ಥಿಗಳ ಹದಿನೆಂಟು ಜನರ ಒಂದು ತಂಡವನ್ನು ರಚಿಸಿ, ತಮ್ಮ ಯಾತ್ರೆಯ ತಂಡ ಒಂದು ಊರನ್ನು ಮುಟ್ಟುವ ಮುನ್ನ ಆ ಊರಿನ ಜನಸಂಖ್ಯೆ, ಜಾತಿ ಮತ, ಕಸುಬು, ಶಿಕ್ಷಣ ವ್ಯವಸ್ಥೆ, ಅಸ್ಪೃಶ್ಯರ ಸಂಖ್ಯೆ ಮತ್ತು ಅವರ ಸ್ಥಿತಿಗತಿಗಳು ಇತ್ಯಾದಿ ವಿವರಗಳ ತಲುಪಿಸುವ ಹೊಣೆಯನ್ನು ಅದಕ್ಕೆ ವಹಿಸಿದರು. ಜೊತೆಗೆ ಈ ತಂಡಕ್ಕೆ ಪಾದಯಾತ್ರೆಯ ತಂಡದ ಊಟ, ವಿಶ್ರಾಂತಿ ಮತ್ತು ಪ್ರಾರ್ಥನೆಗಾಗಿ ಮಾಡಲಾಗಿರುವ ವ್ಯವಸ್ಥೆಯನ್ನು ಪರಿಶೀಲಿಸುವ ಹೊಣೆಯನ್ನೂ ನೀಡಲಾಗಿತ್ತು.

ಆಶ್ರಮದೊಳಗೆ ಮತ್ತು ಹೊರಗೆ ಹೀಗೆ ಎರಡೂ ಕಡೆಗಳಿಂದ ಗಾಂಧಿ ಜೊತೆ ಯಾತ್ರಿಕರಾಗಲು ಹಲವರು ಬಯಸಿದರಾದರೂ ಗಾಂಧಿ, ತಮಗೆ ವ್ಯಕ್ತಿಗತ ಪರಿಚಯವಿದ್ದ ಮತ್ತು ಸುದೀರ್ಘ ಯಾತ್ರೆಯ ಕಷ್ಟಗಳನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಸಹಿಸಬಲ್ಲವರೆಂದು ತಮಗೆ ಅನಿಸಿದ 78 ಜನರನ್ನು ಆರಿಸಿದರು. ಆಶ್ರಮದ ಹೆಂಗಸರೂ, ಮಕ್ಕಳೂ ಯಾತ್ರೆಗೆ ಸಿದ್ಧವೆಂದು ಹೇಳಿದರಾದರೂ ಗಾಂಧಿ ಒಪ್ಪಿಗೆ ನೀಡಲಿಲ್ಲ. ಆದರೆ ದಾರಿ ಮಧ್ಯೆ ಯಾರು ಬೇಕಾದರೂ ಸೇರಿಕೊಂಡು ತಮಗೆ ಸಾಧ್ಯವಾದಷ್ಟು ದೂರ ತಂಡದೊಂದಿಗೆ ಹೆಜ್ಜೆ ಹಾಕಬಹುದೆಂದೂ, ಆದರೆ ಅಂಥವರಿಗೆ ಯಾವುದೇ ನಿಶ್ಚಿತ ವ್ಯವಸ್ಥೆ ಇರುವುದಿಲ್ಲವೆಂದೂ ತಿಳಿಸಿದರು. ಆಯ್ದ ಪಾದಯಾತ್ರಿ ತಂಡಕ್ಕೆ ಅವರು ಕೆಲವು ಮಾರ್ಗದರ್ಶನ ಸೂತ್ರಗಳನ್ನು ಬೋಧಿಸಿದರು. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಯಾತ್ರೆಯ ಸಂದರ್ಭದಲ್ಲಿ ಒದಗಬಹುದಾದ ಎಲ್ಲ ರೀತಿಯ ಯಾತನೆಗಳನ್ನು ಸಹಿಸಬೇಕು, ಯಾವ ಸಂದರ್ಭದಲ್ಲೂ ಪ್ರಚೋದಿತರಾಗದೆ ಸಮಚಿತ್ತವನ್ನು ಕಳೆದುಕೊಳ್ಳಬಾರದು. ಯಾವುದೇ ಕಾರಣಕ್ಕೂ ಶಪಿಸುವುದೂ ಸೇರಿದಂತೆ ಯಾವುದೇ ಹಿಂಸೆಗೆ ಕೈ ಹಾಕಬಾರದು, ಶುಚಿಯಾಗಿರದ ಮತ್ತು ವಿಶ್ವಾಸವಿಲ್ಲದೆ ನೀಡುವ ಆಹಾರವನ್ನು ಸ್ವೀಕರಿಸಬಾರದು, ಬಂಧನಕ್ಕೊಳಗಾದರೆ ಯಾವುದೇ ಹೆಚ್ಚಿನ ಸೌಲಭ್ಯಗಳಿಗೆ ಆಗ್ರಹಿಸದೆ ಸೆರೆಮನೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ತಮ್ಮ ಕುಟುಂಬಗಳಿಗೆ ಕಾಂಗ್ರೆಸ್‌ನಿಂದ ಯಾವುದೇ ಧನಸಹಾಯವನ್ನು ನಿರೀಕ್ಷಿಸಬಾರದು.

ಸರ್ಕಾರದ ತಪ್ಪು ಅಂದಾಜು–ವಲ್ಲಭಭಾಯಿ ಪಟೇಲರ ಬಂಧನ

ಉಪ್ಪಿನ ಸತ್ಯಾಗ್ರಹದ ಸುದ್ದಿ ಕೇಳಿದ ಕೆಲವರು ಅದನ್ನು ಅಪಹಾಸ್ಯ ಮಾಡಿದರು. ಕೆಲವರು ಗಾಂಧಿಗೆ ಉಪ್ಪೇ ಗತಿ ಎಂದರೆ, ಇನ್ನು ಕೆಲವರು ಅವರು ಉಪ್ಪು ತಿಂದು ನೀರು ಕುಡಿಯುವ ದಿನ ದೂರವಿಲ್ಲ ಎಂದರು. ಸರ್ಕಾರದ ಮುಖವಾಣಿಯಂತಿದ್ದ ಕಲ್ಕತ್ತಾದ 'ಸ್ಟೇಟ್ಸ್‌ಮನ್' ಪತ್ರಿಕೆ, ಈಗ ಗಾಂಧಿಯನ್ನು ನೋಡಿ ಜನ ಮುಸಿಮುಸಿ ನಗುತ್ತಿದ್ದಾರೆ ಎಂದು ಕುಹಕವಾಡಿತ್ತು. ವೈಸ್‌ರಾಯ್, ಗಾಂಧಿ ಬರೆದ ಪತ್ರಕ್ಕೆ ಉತ್ತರ ಕೊಡಲಿಲ್ಲವಾದರೂ ಅವರ ಖಾಸಗಿ ಕಾರ್ಯದರ್ಶಿ 'ಈ ಕಾರ್ಯಕ್ರಮದ ಮೂಲಕ ನೀವು ಶಾಂತಿ ಕೆಡಿಸಲು ಪ್ರಯತ್ನಿಸುತ್ತಿರುವುದು ವಿಷಾದಕರ' ಎಂದಷ್ಟೇ ಗಾಂಧಿಯವರಿಗೆ ಸಂದೇಶ ಕಳಿಸಿ ತಿಳಿಸಿದ್ದ. ಇದಕ್ಕೆ ಕಾರಣ, 'ಉಪ್ಪಿನ ವಿಷಯವನ್ನು ಯಾರೂ ಗಂಭೀರವಾಗಿ ಪರಿಗಣಿಸಲಾರರು ಮತ್ತು ಇದಕ್ಕೆ ಈ ಹಿಂದೆ ಈ ವಿಷಯದ ಬಗ್ಗೆ ನಡೆದಿದ್ದ ಚರ್ಚೆ ಎಲ್ಲಿಗೂ ಮುಟ್ಟದೆ ತಣ್ಣಗಾಗಿತ್ತು. ಇದರಿಂದ ಹೆಚ್ಚೆಂದರ ಸರ್ಕಾರದ ಆದಾಯಕ್ಕೆ ಸ್ವಲ್ಪ ಕಾಲ ಸಂಚಕಾರ ಆಗಬಹುದಷ್ಟೆ' ಎಂದು ಅಧಿಕಾರಿಗಳು ತಮ್ಮ ಒಂದು ಟಿಪ್ಪಣಿಯಲ್ಲಿ ವೈಸ್‌ರಾಯ್‌ಗೆ ತಿಳಿಸಿದ್ದುದು.

ಆದರೆ ಈ ಸತ್ಯಾಗ್ರಹವನ್ನು ರೂಪಿಸಿದ್ದ ಮತ್ತು ಅದಕ್ಕೆ ಜನರಿಂದ ದೊರೆಯಲಾರಂಭಿಸಿದ್ದ ಸ್ಪಂದನವನ್ನು ಗಮನಿಸಿದ್ದ ಗಾಂಧಿ, ಸರ್ಕಾರದ ಕಡೆಯಿಂದ ತೀವ್ರ ಕಾರ್ಯಾಚರಣೆಯನ್ನು



ನಿರೀಕ್ಷಿಸಿದ್ದರು. ಹಾಗಾಗಿಯೇ ಅವರು ಈ ಸಂಬಂಧದ ತಮ್ಮ ಮೊದಲ ಲೇಖನಕ್ಕೆ 'ನಾನು ದಸ್ತಗಿರಿಯಾದರೆ' ಎಂಬ ಶೀರ್ಷಿಕೆಯನ್ನು ನೀಡಿದ್ದುದು. ಅವರು ಯಾತ್ರೆ ಆರಂಭವಾಗುವ ಮುನ್ನವೇ ತಮ್ಮ ಬಂಧನವಾಗಬಹುದೆಂದು ನಿರೀಕ್ಷಿಸಿದ್ದರಲ್ಲದೆ, ತಮ್ಮನ್ನು ಈ ಸತ್ಯಾಗ್ರಹ ನೇಣುಗಂಬಕ್ಕೆ ಒಯ್ಯಬಹುದೆಂದೂ ಅನುಮಾನಿಸಿದ್ದರು. ಹಾಗಾಗಿಯೇ ಈ ಸಮಯದಲ್ಲಿ ಅವರು ತಮ್ಮ ಕೆಲ ಗೆಳೆಯರಿಗೆ ಬರೆದ ಪತ್ರದಲ್ಲಿ ಇದು ತಮ್ಮ ಕೊನೆಯ ಪತ್ರವಾಗಬಹುದೆಂದೂ ಸೂಚಿಸಿದ್ದರು.

ಇದಕ್ಕೆ ತಕ್ಕಂತೆ, ಪಾದಯಾತ್ರೆಯ ಬಗ್ಗೆ ಜನರಿಗೆ ತಿಳುವಳಿಕೆ ನೀಡಲು ಹಳ್ಳಿಗಳ ಪ್ರವಾಸದಲ್ಲಿದ್ದ ವಲ್ಲಭಭಾಯಿ ಪಟೇಲರನ್ನು, ಬೊರ್ಸಾದ್ ಎಂಬ ಹಳ್ಳಿಯಲ್ಲಿ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದ್ದಕ್ಕಾಗಿ ಬಂಧಿಸಿ ಮೂರು ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಈ ಸುದ್ದಿ ಜನರ ನಡುವೆ ತಲ್ಲಣವನ್ನುಂಟು ಮಾಡಿ, ಅಹಮದಾಬಾದ್ ನಗರದ ಹತ್ತಿ ಗಿರಣಿಗಳ ಕಾರ್ಮಿಕರು ಮುಷ್ಕರ ಹೂಡಿದರು. ಅಂದು ಸಂಜೆ ಸಬರ್ಮತಿ ನದಿ ತೀರದಲ್ಲಿ ಸೇರಿದ್ದ ಬೃಹತ್ ಕುಪಿತ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಾ, ಪಟೇಲರ ಬಂಧನದಿಂದ ತಮ್ಮ ಬಲಗೈ ಮುರಿದಂತಾಗಿದೆ ಎನ್ನುತ್ತಾ, ಪಟೇಲರು ಯಾವ ಉದ್ದೇಶಕ್ಕಾಗಿ ಸೆರೆಮನೆ ಸೇರಿದ್ದಾರೋ ಆ ಉದ್ದೇಶವಾದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ದುಡಿಯುವ ಶಪಥ ಮಾಡುವಂತೆ ಕರೆನೀಡಿದರು. ಸಾವಿರಾರು ಜನ ಕೈಯೆತ್ತಿ ತಮ್ಮ ನಾಯಕನಿಗೆ ವಚನವಿತ್ತರು. ಯಾತ್ರೆಯ ಸಮಯದಲ್ಲಿ ತಮ್ಮ ದಸ್ತಗಿರಿಯಾದರೆ ಜವಾಹರಲಾಲ್ ನೆಹರೂ ಚಳುವಳಿಯ ನೇತೃತ್ವ ವಹಿಸುವರೆಂದೂ ಅವರು ಪ್ರಕಟಿಸಿದರು.

1930 ರ ಮಾರ್ಚ್ 12ರಂದು ಎಂದಿನಂತೆ ನಸುಕಿನಲ್ಲಿ ಎದ್ದ ಗಾಂಧಿ ನಿತ್ಯಕರ್ಮಗಳನ್ನು ಮುಗಿಸಿ ಪ್ರಾರ್ಥನೆ ಸಲ್ಲಿಸಿದರು. ನಂತರ ಆಶ್ರಮದಲ್ಲಿ ಸುತ್ತಾಡಿ ಅಸ್ವಸ್ಥರಾಗಿದ್ದ ಮತ್ತು ವಯಸ್ಸಾದ ಆಶ್ರಮವಾಸಿಗಳನ್ನು ಮಾತನಾಡಿಸಿದರು. ನಂತರ ಆಶ್ರಮ ವಾಸಿಗಳನ್ನುದ್ದೇಶಿಸಿ ಮಾತನಾಡುತ್ತಾ ತಾವು ಬಂಧಿಸಲ್ಪಟ್ಟು ಸೆರೆಮನೆ ಸೇರುವ ಸಾಧ್ಯತೆ ಇರುವುದರಿಂದ ಮತ್ತೆ ಆಶ್ರಮಕ್ಕೆ ಬರುವುದು ಬಹುತಡವಾಗಬಹುದು ಅಥವಾ ಬರದೇ ಇರಬಹುದೆಂದು ಹೇಳಿ ಎಲ್ಲಕ್ಕೂ ಸಿದ್ಧವಾಗಿರಬೇಕೆಂದು ಸೂಚಿಸಿದರು. ತದನಂತರ ಸಹ ಪಾದಯಾತ್ರಿಗಳನ್ನು ಕೂಡಿಸಿದರು. ಅವರಲ್ಲಿ 31 ಜನ ಗುಜರಾತ್‌ನವರಾದರೆ, 11 ಜನ ಮಹಾರಾಷ್ಟ್ರದವರಾಗಿದ್ದರು, ಮಿಕ್ಕವರು ಸಂಯುಕ್ತ ಪ್ರಾಂತ್ಯ, ಪಂಜಾಬ್, ಸಿಂಧ್, ಬಂಗಾಳ, ಕೇರಳ ತಮಿಳ್ನಾಡು ಮತ್ತು ಕರ್ನಾಟಕಕ್ಕೆ ಸೇರಿದವರಾಗಿದ್ದರು. ಇವರಲ್ಲಿ ದ.ಆಫ್ರಿಕಾದಿಂದ ಬಂದಿದ್ದ ಗಾಂಧಿಯವರ ಎರಡನೆಯ ಮಗ ಮಣಿಲಾಲ ಮತ್ತು ಹಿರಿಯ ಮಗ ಹರಿಲಾಲನ ಇಪ್ಪತ್ತು ವರ್ಷದ ಮಗ ಕಾಂತಿ ಮತ್ತು ಕರ್ನಾಟಕದ 19 ವರ್ಷ ವಯಸ್ಸಿನ ಮೈಲಾರ ಮಹದೇವ ಅವರೂ ಸೇರಿದ್ದರು. ಮಹದೇವ ದೇಸಾಯಿ ಆಶ್ರಮದ ಜವಾಬ್ದಾರಿಗಳನ್ನು ನೋಡಿಕೊಳ್ಳಲು ಅಲ್ಲಿಯೇ ಉಳಿದರೆ, ಯಾತ್ರೆಯ ಸಂದರ್ಭದಲ್ಲಿ ಅವರ ಜವಾಬ್ದಾರಿಗಳನ್ನು (ಗಾಂಧಿಯವರ ಪತ್ರ ವ್ಯವಹಾರ, ಪತ್ರಿಕಾ ಹೇಳಿಕೆ ಮತ್ತು ಲೇಖನಗಳ ಇಂಗ್ಲಿಷ್ ಅನುವಾದ ಇತ್ಯಾದಿಗಳಿಗಾಗಿ) ವಾಲ್ಜಿ ದೇಸಾಯಿ ಹೊರಟಿದ್ದರು. 61 ವರ್ಷದ ಗಾಂಧಿ ಬಿಟ್ಟರೆ, 35 ವರ್ಷದ ಇವರೇ ಯಾತ್ರಿಗಳಲ್ಲಿ ಹಿರಿಯರು. ಇವರ ಜೊತೆಗೆ

ಆಶ್ರಮದ ಸಂಗೀತ ಉಪಾಧ್ಯಾಯ ನಾರಾಯಣ ಖರೆಯವರೂ ತಂಬೂರಿ ಹಿಡಿದು ಹೊರಟರು. ಎಲ್ಲ ಯಾತ್ರಿಗಳೂ ಖಾದಿ ತೊಟ್ಟಿದ್ದರು. ಗಾಂಧಿಯವರ ತಲೆಯ ಹೊರತಾಗಿ ಎಲ್ಲರ ತಲೆಗಳನ್ನೂ ಗಾಂಧಿ ಟೋಪಿ ಅಲಂಕರಿಸಿತ್ತು. ಹಾಗೇ ಪ್ರತಿಯೊಬ್ಬರ ಹೆಗಲಿನಲ್ಲೂ ಯಾತ್ರೆಯ ಸಮಯಕ್ಕೆ ಅಗತ್ಯವಾದ ವಸ್ತುಗಳಿದ್ದವು. ಒಂದು ತೆಳು ಹಾಸಿಗೆ ಸುರಳಿ, ಒಂದು ಜೊತೆ ಬದಲಿ ಬಟ್ಟೆಗಳು, ನೂಲಲು ಒಂದು ತಕಲಿ, ದಿನಚರಿಯ ಒಂದು ಪುಟ್ಟ ಪುಸ್ತಕ, ಒಂದು ಸೀಸದ ಕಡ್ಡಿ, ಒಂದು ನೀರಿನ ಲೋಟ ಇವುಗಳಲ್ಲಿ ಸೇರಿದ್ದವು. ಗಾಂಧಿಯವರ ಸೊಂಟದಲ್ಲಿ ಮಾತ್ರ ಪುಟ್ಟ ಗಡಿಯಾರ ನೇತಾಡುತ್ತಿತ್ತು.

ಯಾತ್ರೆಯ ಆರಂಭ–ಹಿಂಬಾಲಿಸಿದ ಜನಸ್ತೋಮ

ಬೆಳಗ್ಗೆ ಸರಿಯಾಗಿ ಆರೂವರೆಗೆ ಪಾದಯಾತ್ರೆ ಹೊರಟಿತು. ಕಸ್ತೂರಬಾ, ಗಾಂಧಿಯ ಹಣೆಗೆ ತಿಲಕವಿಟ್ಟು ಕುತ್ತಿಗೆಗೆ ಖಾದಿ ನೂಲಿನ ಹಾರ ತೊಡಿಸಿದರು. ಆಶ್ರಮದ ತರುಣಿಯರು ಮಿಕ್ಕವರ ಹಣೆಗಳಿಗೆ ತಿಲಕವಿಟ್ಟು ನೂಲಿನ ಹಾರ ಹಾಕಿದರು. ಕಾಕಾ ಕಾಲೇಲ್ಕರರು ಗಾಂಧಿಯವರ ಕೈಗೆ ಒಂದು ಬಿದಿರ ಊರುಗೋಲು ನೀಡಿದರು. ಯಾತ್ರೆ ಆಶ್ರಮದಿಂದ ಎಡಕ್ಕೆ ತಿರುಗಿ ತಳಿರು ತೋರಣಗಳಿಂದ ಸಿಂಗರಿಸಲ್ಪಟ್ಟಿದ್ದ ರಸ್ತೆಯ ಇಕ್ಕೆಲಗಳಲ್ಲೂ ಕಿಕ್ಕಿರಿದು ನಿಂತಿದ್ದ ಜನಸ್ತೋಮದ 'ಮಹಾತ್ಮ ಗಾಂಧಿ ಕಿ ಜೈ', 'ವಂದೇ ಮಾತರಂ' ಘೋಷಗಳ ನಡುವೆ ಬಿರಬಿರನೆ ಹೆಜ್ಜೆಗಳನ್ನು ಹಾಕುತ್ತಾ ನಡೆಯಿತು. ಗಾಂಧಿ ನಡೆಯುತ್ತಿದ್ದಾರೋ ಓಡುತ್ತಿದ್ದಾರೋ ಎಂಬುದು ತಿಳಿಯದಂತಹ ವೇಗದಲ್ಲಿ ಮುಂದೆ ಸಾಗಿದ್ದರು. ತಂಡದ ಜೊತೆ ಸ್ವಲ್ಪ ದೂರದವರೆಗೆ ಸಾವಿರಾರು ಜನರೂ ನಡೆದು ಪಾದಯಾತ್ರಿಗಳಲ್ಲಿ ಹುರುಪು ತುಂಬಿದರು.

ಮೊದಲ ದಿನ ಅಸಾಲಿ ಮತ್ತು ಎರಡನೆಯ ದಿನ ಬವೇಜಾ ಎಂಬ ಹಳ್ಳಿಗಳಲ್ಲಿ ತಂಗಿದ ತಂಡ ಮೂರನೆಯ ದಿವಸ ಗಾಂಧಿಯವರಿಗೆ ಉಂಟಾದ ಕಾಲು ನೋವಿನಿಂದ ಸ್ವಲ್ಪ ವಿಶ್ರಮಿಸಿ ಹೊರಟು ಐದನೇ ದಿನದ ತಂಗುದಾಣ ದಭಾನ್ ತಲುಪಿದಾಗ. ಯಾತ್ರೆ 37 ಮೈಲಿಗಳನ್ನು ಸವೆಸಿತ್ತು. ಆ ಹಳ್ಳಿಯ ಮಂದಿರದ ಮಾರ್ಗವಾಗಿ ಅಸ್ಪೃಶ್ಯರ ಕೇರಿಯತ್ತ ಕಾಲು ಹಾಕಿದ ಗಾಂಧಿ, ಅಲ್ಲಿನ ಬಾವಿಯಿಂದ ಸ್ವತಃ ತಾವೇ ನೀರು ಸೇದಿಕೊಂಡು ಸ್ನಾನ ಮಾಡಿ, ಸವರ್ಣೀಯರ ಬಾವಿಯ ಬಳಿ ಗಾಂಧಿಯವರಿಗೆ ನೀರು ಸೇದಿಕೊಡಲು ಆಳೊಬ್ಬನನ್ನು ನೇಮಿಸಿದ್ದ, ಸವರ್ಣೀಯರಿಂದ ತುಂಬಿದ್ದ ಸ್ವಾಗತ ಸಮಿತಿಯ ಸದಸ್ಯರಿಗೆ ಮುಜುಗರ ಉಂಟು ಮಾಡಿದರು. ಯಾತ್ರೆ ಸಮುದ್ರ ದಿಕ್ಕಿನತ್ತ ತಿರುಗಿದಾಗ ಗಾಂಧಿ ಹೆಚ್ಚು ಹುರುಪುಗೊಂಡರು. ಜೊತೆಗೆ ಪ್ರತಿ ಊರಿನಲ್ಲೂ ಸ್ವಾಗತಕ್ಕಾಗಿ ಸೇರುತ್ತಿದ್ದ ನೂರಾರು, ಸಾವಿರಾರು ಜನರ



ಜನಸ್ತೋಮ ತಂಡದ ಉತ್ಸಾಹವನ್ನು ಹೆಚ್ಚಿಸುತ್ತಿತ್ತು. ನಡಿಯಾಡ್‌ನಲ್ಲಿ ಗಾಂಧಿ ಮಾತನ್ನು ಕೇಳಲು ಸೇರಿದ್ದ ಜನರ ಸಂಖ್ಯೆ 45 ಸಾವಿರವನ್ನೂ ಮೀರಿತ್ತೆಂದು ಪತ್ರಿಕೆಗಳು ಅಂದಾಜು ಮಾಡಿದ್ದವು. ಜಾಥಾದ ಜೊತೆಯಲ್ಲೇ ದೇಶೀ, ವಿದೇಶೀ ಪತ್ರಕರ್ತರ ತಂಡವೂ ಕೆಲವೊಮ್ಮೆ ವಾಹನಗಳಲ್ಲಿ, ಕೆಲವೊಮ್ಮೆ ನಡಿಗೆಗಳಲ್ಲೇ ಸಾಗಿತ್ತು.

ನೆಹರೂ–ಕಮಲಾದೇವಿ ಆಗಮನ

ಗಾಂಧಿ ಪ್ರತಿ ಊರಿನಲ್ಲೂ ಸ್ವಾಗತ ತಂಡದಲ್ಲಿ ಅಸ್ಪೃಶ್ಯರನ್ನು ಸೇರಿಸಿಕೊಳ್ಳಲಾಗಿದೆಯೇ ಎಂದು ಕೇಳಿ, ಇಲ್ಲವೆಂದರೆ ಸೇರಿಸಿಕೊಳ್ಳಲು ಆಗ್ರಹಿಸುತ್ತಿದ್ದರು. ಪ್ರತಿ ಊರಿನಲ್ಲಿ ಚರಕ ಎಷ್ಟಿವೆ, ಖಾದಿ ಹಾಕುವವರ ಪ್ರಮಾಣವೆಷ್ಟೆಂದು ಕೇಳಿ ಅದರ ಪ್ರಚಾರ ಮಾಡುತ್ತಿದ್ದರು. ಹಲವು ಊರುಗಳಲ್ಲಿ ಊರ ಪ್ರಮುಖರು ಗುಂಪಾಗಿ ಬಂದು ಸರ್ಕಾರಿ ನೌಕರಿಗೆ ರಾಜೀನಾಮೆ ಘೋಷಿಸುತ್ತಿದ್ದರು. ಕೆಲವೆಡೆ ಅಸ್ಪೃಶ್ಯ ಕುಟುಂಬಗಳು ಬಂದು ಮದ್ಯಪಾನ ತ್ಯಜಿಸುವುದಾಗಿ ಪ್ರಮಾಣ ಮಾಡಿದವು.

ದಂಡಿಯೆಡೆಗಿನ ಯಾತ್ರೆ, ನಂತರ ಆಣಂದ್, ರಾಸ್‌ಗಳನ್ನು ಮುಟ್ಟಿ ಮಹಿ ನದಿಯನ್ನು ದೋಣಿಯಲ್ಲಿ ದಾಟಿ ಭರೂಚ್ ಜಿಲ್ಲೆಯನ್ನು ಪ್ರವೇಶಿಸಿತು. ಅಂದು ಮಾರ್ಚ್ 19, ಜವಾಹರಲಾಲ್ ನೆಹರೂ ಕಾರಿನಲ್ಲಿ ಬಂದು ಗಾಂಧಿಯವರನ್ನು ಮಾತನಾಡಿಸಿಕೊಂಡು, ಅವರ ಪತ್ರ ಮತ್ತು ಲೇಖನಗಳನ್ನು ಹೊತ್ತು ಅಹಮದಾಬಾದ್ ಕಡೆಗೆ ಪ್ರಯಾಣ ಮಾಡಿದರು. ಯಾತ್ರೆ 23ರಂದು ಅಮೋದ್ ಎಂಬ ದೊಡ್ಡ ಊರೊಂದನ್ನು ತಲುಪಿದಾಗ, ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಯೂಸುಫ್ ಮೆಹೋಲಿ ಎಂಬ ಇಬ್ಬರು ಸಮಾಜವಾದಿ ಒಲವಿನ ಯುವತಿ–ಯುವಕರು ಗಾಂಧಿಯನ್ನು ಭೇಟಿ ಮಾಡಲು ಬಂದರು. ಕನ್ನಡತಿ ಕಮಲಾದೇವಿ ಚಳುವಳಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಆಗ್ರಹಿಸಿದಾಗ, ಗಾಂಧಿ ಅವರಿಗೆ ಸ್ವಲ್ಪ ಸಂಯಮದಿಂದ ಕಾದರೆ ಎಲ್ಲ ಸಾಧ್ಯವಾಗುವುದು ಎಂದು ತಿಳಿಸಿದರು. ಕಾರ್ಮಿಕ ಸಂಘಟನೆಯಲ್ಲಿ ತೊಡಗಿದ್ದ ಮೆಹೋಲಿ, ಮುಸ್ಲಿಮರನ್ನು ಮತೀಯ ನಾಯಕರ ಪ್ರಭಾವದಿಂದ ತಪ್ಪಿಸಿ ಚಳುವಳಿಗೆ ತರುವ ಬಗೆಯ ಬಗ್ಗೆ ಕೇಳಿದಾಗ, ಅವರು ಉಪ್ಪಿನ ಪ್ರಶ್ನೆ ಎಲ್ಲರದಾಗಿದ್ದು ಅದರಲ್ಲಿ ಮುಸ್ಲಿಮರು ಭಾಗವಹಿಸುವಂತೆ ಕಾಂಗ್ರೆಸ್ಸಿಗರು ಪ್ರೇರೇಪಿಸಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಮುಸ್ಲಿಮರ ಪ್ರಸ್ತಾಪ ಬರಲು ಒಂದು ಕಾರಣವೂ ಇತ್ತು. ಗಾಂಧಿಯ ಹಳೆಯ ಮುಸ್ಲಿಂ ಗೆಳೆಯ ಜೋಡಿಯಾಗಿದ್ದ ಅಲಿ ಸೋದರರು ಉಪ್ಪಿನ ಸತ್ಯಾಗ್ರಹವನ್ನು ಮುಸ್ಲಿಮರೊಂದಿಗೆ ಸಮಾಲೋಚಿಸದೆ ಆರಂಭಿಸಿರುವ ಬಗ್ಗೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದರಲ್ಲದೆ, ಗಾಂಧಿ ಈಗ ಹಿಂದೂ ಮಹಾಸಭಾದ ಪ್ರಭಾವಕ್ಕೆ ಸಿಕ್ಕಿದ್ದಾರೆಂದು ಆರೋಪಿಸಿ ಉಪ್ಪಿನ ಸತ್ಯಾಗ್ರಹದಲ್ಲಿ ಮುಸ್ಲಿಮರಾರೂ ಭಾಗವಹಿಸದಂತೆ ಕರೆ ಕೊಟ್ಟಿದ್ದರು. ಇದರ ಪರಿಣಾಮವೋ ಎಂಬಂತೆ ಗುಜರಾತ್‌ನ ಹೊರಗೆ ಈ ಸತ್ಯಾಗ್ರಹಕ್ಕೆ ಮುಸ್ಲಿಮರ ಸ್ಪಂದನ ತುಂಬ ನಗಣ್ಯವಾಗಿತ್ತು.

ವೈಸ್‌ರಾಯ್‌ಗೆ ತಪ್ಪು ಮಾಹಿತಿ–ಕಸ್ತೂರಬಾರ ಭೇಟಿ

ಆದರೆ ದೇಶದಾದ್ಯಂತ ಪತ್ರಿಕೆಗಳ ತುಂಬ ಈ ಗಾಂಧಿ ಯಾತ್ರೆಯ ಸುದ್ದಿಯೇ ವಿಜೃಂಭಿಸಿ ಜನರ ಆಸಕ್ತಿ–ಕುತೂಹಲಗಳನ್ನು ಕೆರಳಿಸಿತ್ತು. ಮಾರ್ಚ್ 21ರಂದು ಅಹಮದಾಬಾದ್‌ನಲ್ಲಿ ಸಭೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಈ ಯಾತ್ರಗೆ ಸಿಕ್ಕ ಜನಸ್ಪಂದನದಿಂದ ಚಕಿತವಾದಂತೆ,



ತನ್ನೆಲ್ಲ ಪ್ರಾಂತೀಯ ನಾಯಕರು ಮತ್ತು ಕಾರ್ಯಕರ್ತರಿಗೆ ತಂತಮ್ಮ ಊರುಗಳಲ್ಲಿ ಕಾಯಿದೆ ಭಂಗ ಚಳುವಳಿ ಆರಂಭಿಸಲು ಕರೆ ನೀಡಿತು. ಆದರೆ ಸರ್ಕಾರದ ಪರವಾಗಿದ್ದ ಕೆಲ ಇಂಗ್ಲಿಷ್ ಪತ್ರಿಕೆಗಳು ಗಾಂಧಿ ಯಾತ್ರೆ ಸೋಲುತ್ತಿದೆ, ಹತಾಶೆ ಚಹರೆಗಳು ಕಾಣತೊಡಗಿವೆ. ಜನರ ನಿರಾಸಕ್ತಿ ಹೆಚ್ಚುತ್ತಿದೆ ಎಂದು ವರದಿ ಮಾಡಿ ಸರ್ಕಾರ ಯಾತ್ರೆಯ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದಂತೆ ನೋಡಿಕೊಂಡವು. ಆದರೂ, ಯಾತ್ರೆಗೆ ಹತ್ತಿರದಲ್ಲಿದ್ದು ಪರಿಸ್ಥಿತಿಯನ್ನು ಗಮನಿಸುತ್ತಿದ್ದ ಬಾಂಬೆ ಗವರ್ನರ್ ಸೈಕಸ್, ಗಾಂಧಿಯ ಆರೋಗ್ಯ ಕೆಡುತ್ತಿದೆ ಎಂಬ ಸುದ್ದಿಯಿಂದ ಆತಂಕಿತನಾಗಿ ಅವರನ್ನು ಬಂಧಿಸಲು ವೈಸ್‌ರಾಯ್‌ರ ಅನುಮತಿ ಕೇಳಿದ. ಆದರೆ ಇರ್ವಿನ್‌ರ ಆಪ್ತ ಮಿತ್ರರಾಗಿದ್ದ ಕೇಂದ್ರ ಶಾಸನ ಸಭೆಯ ಅಧ್ಯಕ್ಷ ವಿಠಲಭಾಯಿ ಪಟೇಲ್ ಮತ್ತು ಅದರ ಪ್ರತಿಷ್ಠಿತ ಸದಸ್ಯರಾದ ಎಸ್.ವಿ. ಶ್ರೀನಿವಾಸ ಶಾಸ್ತ್ರಿ ಈ ಯಾತ್ರೆಯೊಂದು ತಮಾಷೆಯಾಗಿದ್ದು, ಗಾಂಧಿ ಹುತಾತ್ಮರಾಗುವ ಪ್ರಯತ್ನದಲ್ಲಿರುವುದರಿಂದ ಸರ್ಕಾರ ಮಧ್ಯಪ್ರವೇಶಿಸಿ ಅವರಿಗೆ ನೆರವಾಗಬಾರದೆಂದು ಸಲಹೆ ನೀಡಿ ಸರ್ಕಾರ ಗಾಂಧಿಯವರನ್ನು ಬಂಧಿಸದಂತೆ ನೋಡಿಕೊಂಡಿದ್ದರು.

ಆದರೆ ಗಾಂಧಿಗೆ, ಸರ್ಕಾರದ ಈ ನಿರ್ಲಕ್ಷ್ಯ ಆಶ್ಚರ್ಯ ಮತ್ತು ಕುತೂಹಲಗಳನ್ನುಂಟು ಮಾಡಿದ್ದವು. ಅವರ ತಂಡದ ಹದಿನೆಂಟು ಸದಸ್ಯರು ಬಳಲಿ ನೆಲಕಚ್ಚಿದ್ದರು. ಸ್ವತಃ ಗಾಂಧಿಯವರ ರಕ್ತದೊತ್ತಡ ಏರುಪೇರಾಗಿ ಹೃದಯ ಬಡಿತಗಳಲ್ಲಿ ವ್ಯತ್ಯಾಸಗಳು ಕಾಣತೊಡಗಿದ್ದವು. ಮಾರ್ಚ್ 25ರಂದು ಕಸ್ತೂರಬಾ ಅಹಮದಾಬಾದ್‌ನಿಂದ ಬಂದು ಪತಿಯ ಆರೈಕೆ ಮಾಡಿದರು. ಬಳಲಿ ನೆಲಕಚ್ಚಿದ್ದವರನ್ನು ಸಂತೈಸಿದರು. ಗಾಂಧಿ ಈ ಅಪಾರ ಬಳಲಿಕೆಗೆ ಕಾರಣ ಅಶುದ್ಧ ನೀರನ್ನು ಕುಡಿದಿರುವುದು ಮತ್ತು ಪ್ರಾರ್ಥನೆಯಲ್ಲಿ ಮನಸ್ಸಿಟ್ಟು ಭಾಗವಹಿಸದಿರುವುದು ಎಂದು ಸೂಚಿಸುತ್ತಾ, ಹೆಚ್ಚೆಚ್ಚು ಬಿಸಿ ನೀರು ಕುಡಿದು ದೇವರಲ್ಲಿ ನಂಬಿಕೆ ಇಟ್ಟು, ದಂಡಿಯ ಕಡೆ ಮುಖ ಮಾಡಿ ನಡೆಯಲು ಸಿದ್ಧರಾಗಲು ಹೇಳಿದರು. ಕಸ್ತೂರಬಾ ಅಂದೇ ಅಹಮದಾಬಾದ್‌ಗೆ ಹಿಂದಿರುಗಿದರು.

ಯಾತ್ರೆ ಮುಂದೆ ಕಿಂ ನದಿಯನ್ನು ಮರದ ಸೇತುವೆಯ ಮೇಲೆ ನಡೆದು ದಾಟಿ ಸೂರತ್ ಜಿಲ್ಲೆ ಪ್ರವೇಶಿತು. ಅಂದು ರಾತ್ರಿ ಕಾಡಿನಲ್ಲಿ ಮೊಕ್ಕಾಂ ಹೂಡಿ ಮುಂದೆ ಹಲವು ಹಳ್ಳಿಗಳನ್ನು ದಾಟಿ ಸೂರತ್ ನಗರದತ್ತ ಹೆಜ್ಜೆ ಹಾಕಿತು. ಏಪ್ರಿಲ್ 1ರಂದು ಸೂರತ್ ನಗರವನ್ನು ತಲುಪಿದ ಗಾಂಧಿ ತಂಡವನ್ನು, ಅಲ್ಲಿ ಭಾರಿ ಜನಸ್ತೋಮ ಕೊಂಬು ಕಹಳೆಗಳೊಂದಿಗೆ ಭವ್ಯ ರೀತಿಯಲ್ಲಿ ಸ್ವಾಗತಿಸಿ ಆತಿಥ್ಯ ನೀಡಿತು. ಅಂದು ಸಂಜೆ ತಾಪಿ ನದಿಯ ಮರಳು ರಾಶಿಯ ಮೇಲೆ ಸೇರಿದ್ದ ಒಂದು ಲಕ್ಷಕ್ಕೂ ಹೆಚ್ಚಿದ್ದ ಜನಸ್ತೋಮ ತಾವಿದ್ದಲ್ಲೇ ಕಾಯ್ದೆ ಮುರಿಯುವಂತೆ ಕರೆಕೊಟ್ಟ ಗಾಂಧಿಯವರ ಭಾಷಣವನ್ನು ಸದ್ದಿಲ್ಲದೆ ಆಲಿಸಿತು. ಆ ಸಭೆಯಲ್ಲಿ ಸುತ್ತಮುತ್ತಲ 170 ಹಳ್ಳಿಗಳ ಸರ್ಕಾರಿ ಪ್ರಮುಖರು ತಮ್ಮ ರಾಜೀನಾಮೆ ಪತ್ರಗಳನ್ನು ಗಾಂಧಿಯವರಿಗೆ ಸಲ್ಲಿಸಿದರು. ಅಂದಿನ ಪೊಲೀಸ್ ವರದಿ, 'ಗಾಂಧಿ ದೈಹಿಕವಾಗಿ ಬಳಲಿದ್ದಂತೆ ಕಂಡರೂ ಮಾನಸಿಕವಾಗಿ ಹುರುಪಿನಿಂದಿದ್ದಾರೆ' ಎಂದು ಬಾಂಬೆ ಗವರ್ನರ್ ಗೆ ವರದಿ ಮಾಡಿತ್ತು.

ನಡಿಗೆಯ ಒಂದು ಕಲಾ ಪ್ರಯೋಗ!

ಸೂರತ್ ಗಡಿ ದಾಟುತ್ತಿದ್ದಂತೆ ಬ್ರಿಟಿಷ್ ಆಡಳಿತ ಪ್ರದೇಶ ಅಂತ್ಯಗೊಂಡು ಗಾಯಕವಾಡರ ಬರೋಡ ಪ್ರಾಂತ್ಯ ಆರಂಭವಾಗಿತ್ತು. ಅಲ್ಲಿನ ಮೊದಲ ಹಳ್ಳಿಯಲ್ಲೇ ಮುಸ್ಲಿಮರು ಗಾಂಧಿಯನ್ನು ಮುತ್ತಿದರು. ಮೌಲ್ವಿಗಳು ಗಾಂಧಿಯ ಬೆನ್ನ ಹಿಂದೆ ನಿಲ್ಲುವ ಪ್ರತಿಜ್ಞೆ ಕೈಗೊಂಡರು. ಮುಂದಿನ ಹಳ್ಳಿಗಳಲ್ಲೂ ಇದೇ ಪುನರಾವರ್ತನೆಯಾಯಿತು. ಗಾಂಧಿ ಏಪ್ರಿಲ್ 3ರ ಸಂಜೆ ಪಾರ್ಸಿಗಳ ಶ್ರೀಮಂತ ಊರು ನವಸಾರಿಯನ್ನು ತಲುಪಿದಾಗ ಅವರಿಗೆ ಎಲ್ಲಿಲ್ಲದ ಉತ್ಸಾಹ. ಏಕೆಂದರೆ ಲಂಡನ್‌ನಲ್ಲಿನ ಅವರ ಯೌವ್ವನದ ದಿನಗಳಲ್ಲೇ ಅವರಲ್ಲಿ, ಅವರಿಗೆ ಗೊತ್ತಿಲ್ಲದಂತೆಯೇ ಬ್ರಿಟಿಷ್ ಸಾಮ್ರಾಜ್ಯಶಾಹಿ ಶೋಷಣೆ ಕುರಿತ ತಮ್ಮ ಆರ್ಥಿಕ ಅಧ್ಯಯನಗಳ ಮೂಲಕ ಬ್ರಿಟಿಷ್ ವಿರೋಧಿ ಹೋರಾಟದ ಕಿಚ್ಚು ಹೊತ್ತಿಸಿದ್ದ ದಾದಾಭಾಯಿ ನವರೋಜಿಯವರ ಹುಟ್ಟೂರು ಅದು. ಇದು ದಂಡಿಗೆ ಮುನ್ನ ಯಾತ್ರೆಯ ಕೊನೆಯ ತಂಗುದಾಣ. ಗಾಂಧಿ ತಂಡಕ್ಕೆ ಇಲ್ಲಿ ಸಿಕ್ಕಿದ ಸ್ವಾಗತದ ಸಂಭ್ರಮ ಮಿಕ್ಕೆಲ್ಲ ಸ್ವಾಗತಗಳನ್ನೂ ಮೀರಿತ್ತು. ಆದರೆ ಗಾಂಧಿ, ಇನ್ನು ಹತ್ತು ಹನ್ನೆರಡು ಮೈಲಿಗಳ ದೂರವಿದ್ದ ದಂಡಿ ತಲುಪಿ ಒಂದು ಸೂರ್ಯ ಮುಳುಗದ ಸಾಮ್ರಾಜ್ಯವೊಂದನ್ನು ಧಿಕ್ಕರಿಸಿ ನಿಲ್ಲುವ ಐತಿಹಾಸಿಕ ಸಾಹಸದ ಅಂತಿಮ ಕ್ಷಣದ ಕಾತುರತೆಯಲ್ಲಿದ್ದರು.

4ರಂದು ನವಸಾರಿಯಿಂದ ಹೊರಟ ಗಾಂಧಿ ತಂಡ, ತನ್ನ ಯಾತ್ರೆಯ ಕೊನೆಯ ಪಾದವನ್ನು ಆರಂಭಿಸಿತ್ತು. ನವಸಾರಿ ಪುರಸಭೆ ಆ ಮಣ್ಣಿನ ರಸ್ತೆಯನ್ನು ಈ ಯಾತ್ರೆಗಾಗಿ ಹದಗೊಳಿಸಿ, ತಂಡ ರಸ್ತೆಯಲ್ಲಿ ಹಾದುಹೋಗುವ ಹೊತ್ತಿಗೆ ಸರಿಯಾಗಿ ನೀರು ಹನಿಸಿ ಮಣ್ಣನ್ನೂ ಗಾಳಿಯನ್ನೂ ತಂಪು ಮಾಡಿತ್ತು. ರಾಮಚಂದ್ರ ಗುಹಾ ತಮ್ಮ 'ಮಹಾತ್ಮ' ಪುಸ್ತಕದಲ್ಲಿ ಉಲ್ಲೇಖಿಸಿರುವ, ಈ ಕೊನೆಯ ಪಾದದ ಯಾತ್ರೆಯನ್ನು ಬಾಂಬೆ ಕ್ರಾನಿಕಲ್ ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಪ್ರತ್ಯಕ್ಷದರ್ಶಿಯೊಬ್ಬನ ಲೇಖನದಿಂದ ಆಯ್ದ ಭಾಗ ಹೀಗಿದೆ: 'ಆಗ ತಾನೆ ಕೆಂಪು ಸೂರ್ಯ ಮೇಲೇಳುತ್ತಿದ್ದ. ಅದರ ಪ್ರಭೆ ಗಾಂಧಿಯ ಮುಖದ ಮೇಲೆ ಬಿದ್ದು ಅವರ ಇಡೀ ಆಕಾರ ಒಂದು ಅಲೌಕಿಕ ಕಳೆ ಪಡೆದಿತ್ತು. ಅವರು ಒಬ್ಬರೇ ಮುಂದೆ ಮುಂದೆ ನಡೆಯುತ್ತಿದ್ದರು. ಅವರ ಕೈಲಿದ್ದ ಕೋಲು ಕೇವಲ ಆಟಿಕೆಯಂತೆ ಅವರ ಕೈಯಲ್ಲಿ ಆಡುತ್ತಿತ್ತು. ಅವರ ಹಿಂದೆ ದೊಡ್ಡ ಜನ ಸಮೂಹವೇ ನಡೆದುಬರುತ್ತಿತ್ತು. ಅವರ ತಂಡ ಅದರಲ್ಲಿ ಲೀನವಾಗಿತ್ತು... ಹಳ್ಳಿ ದಾರಿಯಲ್ಲಿನ ಆ ಗಾಂಧಿ ನಡಿಗೆ ತನ್ನ ಅಂತಿಮ ಗುರಿಯೆಡೆಗೆ ಎಂತಹ ಆವೇಗವನ್ನು ಪಡೆದಿತ್ತು ಎಂದರೆ, ಅವರ ಉಸಿರಿನ ರಭಸ ಆ ವಾತಾವರಣವನ್ನೇ ಜೀವಂತಿಕೆಯಿಂದ ಮಿಡಿಯುವಂತೆ ಮಾಡಿ ಅಲ್ಲೊಂದು ನಡಿಗೆಯ ಕಲಾ ಪ್ರಯೋಗವೇ ನಡೆದಿದೆಯೇನೋ ಎಂಬಂತೆ ಭಾಸವಾಗುತ್ತಾ, ಈ ಮುದುಕ ತಾನೆಂತಹ ಸಹಜ ಕಲಾವಿದ ಎಂಬುದನ್ನು ಸಾಬೀತುಪಡಿಸಿದಂತಿತ್ತು'.



ಸಾಮ್ರಾಜ್ಯವನ್ನು ನಡುಗಿಸಿದ ಒಂದು ಹಿಡಿ ಉಪ್ಪು

5ರಂದು ಗಾಂಧಿ, ದಂಡಿ ಎಂಬ 200 ಮೀನುಗಾರ ಕುಟುಂಬಗಳ ಆ ಕುಗ್ರಾಮವನ್ನು ತಲುಪಿದಾಗ ಅದು ದೂರದೂರುಗಳಿಂದ ಬಂದ ಗಾಂಧಿ ಭಕ್ತರಿಂದ ಮತ್ತು ಜಗತ್ತಿನ ವಿವಿಧ ಭಾಗಗಳಿಂದ ಬಂದಿದ್ದ ಪತ್ರಕರ್ತರಿಂದ ತುಂಬಿ ಗಿಜಿಗುಡುತ್ತಿತ್ತು. ಇವರ ಜೊತೆಗೇ ಸರ್ಕಾರದ ಕಡೆಯಿಂದ ನೂರಾರು ಜನ ಪೊಲೀಸರು, ಗುಪ್ತಚರ ದಳದವರು, ಅಧಿಕಾರಿಗಳು, ಹಳ್ಳಿಯಲ್ಲಿ ಜನ ಜಾಗ ಕೊಡದಿದ್ದರಿಂದ ಊರ ಹೊರಗೆ ಗುಡಾರಗಳಲ್ಲಿ ತಂಗಿದ್ದರು. ಅವರು ಮುನ್ನೆಚ್ಚರಿಕೆಯಾಗಿ ಊರಿನ ಆಸುಪಾಸಿನಲ್ಲಿದ್ದ ಎಲ್ಲ ಉಪ್ಪಿನ ಗುಡ್ಡೆಗಳನ್ನೂ ಕಾಲಿ ಮಾಡಿ ದೂರಕ್ಕೆ ಸಾಗಿಸಿದ್ದರು!

ಆ ಊರಿನಲ್ಲಿ ಗಾಂಧಿ ಆತಿಥ್ಯ, ಸಮುದ್ರ ದಂಡೆಯಲ್ಲಿ ಶುದ್ಧ ಗಾಳಿ ಸೇವನೆಗೆಂದು ಒಂದು ಬಂಗಲೆ ಕಟ್ಟಿಸಿಕೊಂಡು ತಂಗಿದ್ದ ನಿಜಾಮುದ್ದೀನ್ ವಾಸಿಯದ್ದು. ಅಲ್ಲಿ ಗಾಂಧಿ ಮೈಗೆಲ್ಲ ಎಣ್ಣೆ ಹಚ್ಚಿಸಿಕೊಂಡು ಸ್ನಾನ ಮಾಡಿ ವಿಶ್ರಾಂತಿ ಪಡೆದರು. ಅಂದೇ ಒಂದು ಪತ್ರಿಕಾ ಹೇಳಿಕೆ ನೀಡಿ ತಮ್ಮ ಯಾತ್ರೆಗೆ ಧಕ್ಕೆ ತರದ ಸರ್ಕಾರದ ಅಹಿಂಸಾತ್ಮಕ ನಡೆಗಾಗಿ ಅದಕ್ಕೆ ವಂದನೆ ಸಲ್ಲಿಸಿದರು. ಹಾಗೇ ಮುಂದಿನ ಮುಂಜಾನೆ ಆರೂವರೆ ಘಂಟೆಗೆ ತಾವು ಉಪ್ಪು ಕಾಯಿದೆಯನ್ನು ಉಲ್ಲಂಘಿಸುವುದಾಗಿ ಪ್ರಕಟಿಸಿದರು. ಆ ಏಪ್ರಿಲ್ 6, ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ನೆನಪಿನ ರಾಷ್ಟ್ರೀಯ ಸಪ್ತಾಹದ ಆರಂಭದ ದಿನವಾಗಿದ್ದು, ಇದನ್ನು 'ಆತ್ಮವಿಮರ್ಶೆ ಮತ್ತು ಶುದ್ದೀಕರಣ'ದ ದಿನವನ್ನಾಗಿ ಆಚರಿಸಲಾಗುವುದು ಎಂದೂ ಹೇಳಿದರು.

ಏಪ್ರಿಲ್ 6 ರ ಬೆಳಿಗ್ಗೆ ಎದ್ದ ಗಾಂಧಿ, ಕಡಲಿನಲ್ಲೇ ಸ್ನಾನ ಮಾಡಿದರು. ನಂತರ ಸರಿಯಾಗಿ ಆರೂವರೆ ಘಂಟೆಗೆ ತೀರದತ್ತ ಬಂದ ಅವರು, ಬೆಳಗಿನ ಸಮುದ್ರದ ಅಲೆಗಳು ತೂರಿ ಹೋಗಿದ್ದ ಉಪ್ಪಿನ ಒಂದು ಗುಪ್ಪೆಯನ್ನು ಹಿಡಿಗೆ ತೆಗೆದುಕೊಂಡು ನೇರವಾಗಿ ನಿಂತು, ಅಲ್ಲಿ ಅದಕ್ಕಾಗಿಯೇ ಕಾಯುತ್ತಿದ್ದ ಸಾವಿರಾರು ಜನರಿಗೆ ಹಿಡಿಯನ್ನು ಮೇಲೆತ್ತಿ ತೋರಿಸಿದರು. ಅಲ್ಲೇ ಇದ್ದ ಸರೋಜಿನಿ ನಾಯ್ಡು ಅವರು 'ಕಾನೂನು ಭಂಗ ಮಾಡಿದ ಮಹಾತ್ಮನಿಗೆ ಜಯವಾಗಲಿ!' ಎಂಬ ಘೋಷಣೆ ಕೂಗಿದರು. ಜಯಕಾರ ನೆರೆದಿದ್ದ ಜನಸ್ತೋಮದಿಂದ ಪ್ರತಿಧ್ವನಿಸಿತ್ತು. ಛಾಯಾಚಿತ್ರಕಾರರ ಮಿಂಚುಗಳು ಹೊಳೆದು ಮಾಯವಾದವು. ಜಗತ್ತಿನ ಎಲ್ಲ ಭಾಗಗಳಿಗೆ ಈ ಐತಿಹಾಸಿಕ ಕ್ಷಣದ ವಾರ್ತೆ ಪ್ರಸಾರವಾಗತೊಡಗಿತ್ತು. ಅಂದು ದಂಡಿ ಅಂಚೆ ಕಛೇರಿಯಿಂದ, ಸುಮಾರು ಎಂಟು ನೂರು ತಂತಿ ಸಂದೇಶಗಳು ಹೋಗಿದ್ದವು. ಇದಕ್ಕಾಗಿ ಬಾಂಬೆ ಪ್ರಾಂತ್ಯದ ಅಂಚೆ ಮೇಲಧಿಕಾರಿ ವಿಶೇಷ ವ್ಯವಸ್ಥೆ ಮಾಡಿದ್ದರಂತೆ. ಈ ಬಗ್ಗೆ ಸರ್ಕಾರ ಗರಂ ಆಗಿ ಪ್ರಶ್ನಿಸಿದಾಗ ಭಾರತೀಯನಾಗಿದ್ದ (ಬೇವೂರ್ ಎಂಬ ಹೆಸರಿನ ಕನ್ನಡಿಗನೂ ಆಗಿದ್ದ) ಆ ಅಧಿಕಾರಿ, ಇಲಾಖೆ ಇರುವುದೇ ಶುಲ್ಕ ಪಾವತಿಸಿಕೊಂಡು ಜನ ಕೇಳುವ ಸೇವೆ ಒದಗಿಸುವ ಮೂಲಕ ಸರ್ಕಾರದ ಆದಾಯ ಹೆಚ್ಚಿಸಲು ಅಲ್ಲವೇ? ಎಂದು ಉತ್ತರಿಸಿ ಸರ್ಕಾರದ ಬಾಯಿ ಮುಚ್ಚಿಸಿದರಂತೆ!!

ಗಾಂಧಿಯ ಈ ಅಸಹಕಾರ ಸತ್ಯಾಗ್ರಹ ಈವರೆಗೆ ಒಂದೂ

ಅಶಾಂತಿಯ ಘಟನೆಗೆ ಕಾರಣವಾಗದೆ ಶಿಸ್ತುಬದ್ಧವಾಗಿ, ಜನರ ಪ್ರೀತಿ ವಿಶ್ವಾಸಗಳ ಮಹಾಪೂರದಲ್ಲಿ ಮಿಂದು ಸಂಪೂರ್ಣ ಯಶಸ್ವಿಯಾಗಿತ್ತು. ಗಾಂಧಿಯ ಆತಂಕ ಅಂತ್ಯಗೊಂಡಿತ್ತು. ಆರು ವರ್ಷಗಳ ರಚನಾತ್ಮಕ ಕಾರ್ಯಕ್ರಮಗಳ ದುಡಿಮೆ ಸಾರ್ಥಕವೆನಿಸಿತ್ತು ಗಾಂಧಿಗೆ. ಆರು ವರ್ಷಗಳ ಕಾಲ ಒಳಗೇ ಗದಗುಡುತ್ತಿದ್ದ ಗಾಂಧಿಯವರನ್ನು ಕುರಿತ ಜನರ ನಿರೀಕ್ಷೆಗಳು ಇಂದು ಹೊರಚಿಮ್ಮಿದಂತೆ ಎಲ್ಲೆಲ್ಲೂ ಹೊಸ ಉತ್ಸಾಹ-ಸಂಭ್ರಮಗಳು. ಈ 24 ದಿನಗಳ ದೀರ್ಘ ಯಾತ್ರೆಯಲ್ಲಿ ಗಾಂಧಿಗೆ ಕಿರಿಕಿರಿ ಉಂಟು ಮಾಡಿದ ಘಟನೆಗಳು ಎರಡೇ ಎರಡು. ಒಂದು, ಅಮೆರಿಕಾದಿಂದ ಬಂದು ಆಶ್ರಮ ಸೇರಿ ಈ ಪಾದಯಾತ್ರಿಗಳ ತಂಡದ ಭಾಗವಾಗಿದ್ದ ಹರಿದಾಸ್ ಮಜುಂದಾರ್ ಎಂಬ ಯುವಕ, ಯಾತ್ರೆಯ ನಿಯಮಗಳನ್ನು ಮೀರಿ ಹಳ್ಳಿಯೊಂದರಲ್ಲಿ ಐಸ್‌ಕ್ರೀಮ್ ತಿಂದದ್ದು. ಇನ್ನೊಂದು, ತಂಡದ ಮುಂದೆ ಭಾರಿ ಪೆಟ್ರೋಮ್ಯಾಕ್ಸ್ ಹೊತ್ತು ನಡೆಯುತ್ತಿದ್ದ ಆಳಿಗೆ ವೇಗವಾಗಿ ನಡೆಯುವಂತೆ ಯಾತ್ರಿಕರೊಬ್ಬರು ಜೋರು ಮಾಡಿ, ಆತನು ಬಹುಕಷ್ಟದಿಂದ ಓಡುವಂತೆ ಮಾಡಿದ್ದು. ಈ ಘಟನೆಗಳ ಬಗ್ಗೆ ಕೇಳಿ ಗಾಂಧಿ ವ್ಯಥೆಪಟ್ಟರು ಮತ್ತು ಸಂಬಂಧಪಟ್ಟವರಿಗೆ ಎಚ್ಚರಿಕೆ ನೀಡಿದರು.

ಹರಡಿದ ಚಳುವಳಿ-ಬೆದರಿದ ಸರ್ಕಾರ

ಗಾಂಧಿ ಕೈಹಾಕಿ ಉಪ್ಪು ಎತ್ತಿದ ಜಾಗದಿಂದ, ನಂತರ ಮತ್ತಷ್ಟು ಉಪ್ಪು ಸಂಗ್ರಹಿಸಿ ಅದನ್ನು ದೇಶದ ಬೇರೆ ಬೇರೆ ಭಾಗಗಳಿಗೆ ಕಳಿಸಿಕೊಡಲಾಯಿತು. ಜೊತೆಗೆ ದಂಡಿಯಲ್ಲಿ ಗಾಂಧಿ ಉಪ್ಪಿಗೆ ಕೈ ಹಾಕಿದ ಸಮಯದಲ್ಲೇ, ದೇಶದ ತೀರ ಪ್ರದೇಶದ ಹಲವೆಡೆ ಜನ ಮುಗಿಬಿದ್ದು ಉಪ್ಪು ತಯಾರಿಕೆ, ಸಂಗ್ರಹ ಮತ್ತು ಮುಕ್ತ ಮಾರಾಟಕ್ಕೆ ತೊಡಗಿದರು. ಕೆಲವೆಡೆ ಉಪ್ಪಿನ ಕೋಠಿಗಳನ್ನು ದೋಚಿ ಪೇಟೆ ಬೀದಿಗಳಲ್ಲಿ ಮಾರುವ ಆಂದೋಲನ ಶುರುವಾಯಿತು. ಸರ್ಕಾರ ಜನರನ್ನು ಹೊಡೆದು ಓಡಿಸಲು ಯತ್ನಿಸಿ ವಿಫಲವಾದ ನಂತರ ಬಂಧಿಸಿ ಸೆರೆಮನೆಗಳಿಗೆ ದೂಡಲು ಆರಂಭಿಸಿತು. ಗಾಂಧಿ ಸತ್ಯಾಗ್ರಹದ ಸಾಧನವಾಗಿ ಉಪ್ಪನ್ನು ಆಯ್ದುಕೊಂಡದ್ದನ್ನು ಮತ್ತು ಅದರ ಕಾನೂನು ಮುರಿಯಲು ಮೂರು ವಾರಗಳ ಕಾಲ ನೂರಾರು ಮೈಲುಗಳ ಯಾತ್ರೆಯನ್ನು ಆಯೋಜಿಸಿದ್ದರಲ್ಲಿ ತೋರಿದ ಕಲ್ಪನಾಶೀಲತೆಯನ್ನು ಜಗತ್ತಿನಾದ್ಯಂತ ಮಾಧ್ಯಮಗಳು ಅನುಪಮವೆಂದು ಹೊಗಳಿದವು. ಆರಂಭದಲ್ಲಿ ಇದೊಂದು ಹುಡುಗಾಟಿಕೆ ಎಂದು ವರ್ಣಿಸಿದ್ದ ಕಾಂಗ್ರೆಸ್ ನಾಯಕರೀಗ ಇದರ ಪರಿಣಾಮಗಳನ್ನು ನೋಡಿ ಬೆಕ್ಕಸಬೆರಗಾಗಿದ್ದರು. ಸುಭಾಷ್‌ಚಂದ್ರ ಬೋಸ್ ಅವರು ದಂಡಿಯಾತ್ರೆಯನ್ನು 'ಎಲ್ಬಾದಿಂದ ಪ್ಯಾರಿಸ್‌ಗೆ ನಡೆಸಿದ ವಿಜಯ ಯಾತ್ರೆ'ಗೆ ಹೋಲಿಸಿದರು. ಮದನ ಮೋಹನ ಮಾಳವೀಯರು ದೆಹಲಿಯಲ್ಲಿ ವಿಜಯೋತ್ಸವ ಸಭೆಯಲ್ಲಿ ಮಾತನಾಡಿದ ನಂತರ ಕಾನೂನು ಮೀರಿ ಮಾರಾಟವಾಗುತ್ತಿದ್ದ ಉಪ್ಪನ್ನು ಕೊಂಡರು.

ಪ್ರಾಂತೀಯ ಕಾಂಗ್ರೆಸ್ ಕಛೇರಿಗಳು ಉಪ್ಪು ತಯಾರಿಕಾ ಮತ್ತು ಮಾರಾಟ ಕೇಂದ್ರಗಳಾಗಿ ಪರಿವರ್ತಿತವಾಗಿದ್ದವು. ಹಾಗಾಗಿ ಪೊಲೀಸರು ಈ ಕಛೇರಿಗಳ ಮೇಲೇ ದಾಳಿ ಮಾಡಲಾರಂಭಿಸಿದರು. ಬಾಂಬೆ ಕಾಂಗ್ರೆಸ್ ಕಛೇರಿ ಮುಂದೆ ಅರವತ್ತು ಸಾವಿರ ಜನ ಸೇರಿದ್ದರು. ಅವರೆಲ್ಲರನ್ನೂ ಬಂಧಿಸಲಾಗದ ಸರ್ಕಾರ, ಸಾಲು ಸಾಲು ಜನರಿಗೆ ಕೈಗಳಿಗೆ ಹಗ್ಗ ಕಟ್ಟಿ ಬಂಧಿಸಿ ಎಳೆದುಕೊಂಡು ಹೋದರು. ಜನ ಪ್ರತಿರೋಧಿಸದೆ ಸೆರೆಮನೆಗೆ ಹೋಗಲಾರಂಭಿಸಿದರು. ಗಾಂಧಿ ತಾವು ಎತ್ತಿದ್ದ ಉಪ್ಪಿನ ಒಂದು ಭಾಗವನ್ನು ವಾಹನದ ಮೂಲಕ ಸಬರ್ಮತಿ ಆಶ್ರಮಕ್ಕೆ ಕಳಿಸಿದ್ದರು. ಅದನ್ನು ಮಹದೇವ ದೇಸಾಯಿ ಅವರು ಭಾಗ ಮಾಡಿ ಹಲವಡೆಗೆ ಮಾರಾಟಕ್ಕೆ ಕಳಿಸಿದ್ದರು. ಕಾಂಗ್ರೆಸ್ಸಿಗರು ಅದನ್ನು ದೇಣಿಗೆ ಪಡೆದು ಜನರಿಗೆ ಹಂಚಿದರು. ಅಹಮದಾಬಾದ್‌ನಲ್ಲಿ ಒಂದು ಉಪ್ಪಿನ ಹರಳನ್ನು ಹರಾಜಿಗೆ ಹಾಕಿದಾಗ ಡಾ. ಕನುಗ ಎಂಬುವವರು ಅದನ್ನು ಸಾವಿರದ ಆರು ನೂರು ರೂಪಾಯಿಗಳಿಗೆ ಕೂಗಿ ಕೊಂಡರು. ಜವಾಹರಲಾಲ್‌ಗೆ ಉಪ್ಪಿನ ಪೊಟ್ಟಣವೊಂದನ್ನು ಕಳಿಸಿದ ಮಹದೇವ ದೇಸಾಯಿ ಅದನ್ನು ಸಾವಿರ ರೂ.ಗಿಂತ ಕಡಿಮೆ ಇಲ್ಲದೆ ಮಾರಲು ಸೂಚಿಸಿದ್ದರು. ರಾಜಗೋಪಾಲಾಚಾರಿ ವೇದಾರಣ್ಯಂ ಎಂಬಲ್ಲಿ ಉಪ್ಪು ಸಂಗ್ರಹಿಸಿ ಪ್ರತಿಭಟನೆ ದಾಖಲಿಸಿದರು. ಕಮಲಾದೇವಿಯವರು ಬಾಂಬೆ ಷೇರುಪೇಟೆ ಕಛೇರಿಗೆ ಬಂದು ಅಲ್ಲಿ ತಾವು ಸಂಗ್ರಹಿಸಿದ್ದ ಉಪ್ಪನ್ನು ಹರಾಜಿಗೆ ಹಾಕಿದರು. ಜನ ಮುಗಿಬಿದ್ದು ಕೊಂಡರು. ಅಂದು ಕಮಲಾದೇವಿ ಸಂಗ್ರಹಿಸಿದ ಹಣ ನಾಲ್ಕು ಸಾವಿರ ರೂಪಾಯಿಗಳು! ಕರಾಚಿ, ರಾವಲ್ಪಿಂಡಿಗಳಲ್ಲೂ ಉಪ್ಪಿನ ಕಾಯಿದೆ ಭಂಗ ಚಳುವಳಿ ನಡೆದು, ಜನರ ಮೇಲೆ ಪೊಲೀಸರು ಗುಂಡು ಹಾರಿಸಿದರು. ಏಳು ಜನ ಚಳುವಳಿಕಾರರು ಸತ್ತು ನೂರಾರು ಜನ ಗಾಯಗೊಂಡರು. ಆದರೆ ಪೆಷಾವರ್‌ನಲ್ಲಿ ಅರೆಸೇನಾ ಪಡೆ, ಖಾನ್ ಅಬ್ದುಲ್ ಗಫಾರ್ ಖಾನ್‌ರ 'ಖುದಾಯಿ ಖಿದ್ಮತ್‌ಗಾರ್' ಕಾರ್ಯಕರ್ತರ ಮೇಲೆ ಗುಂಡು ಹಾರಿಸಲು ನಿರಾಕರಿಸಿ ಇತಿಹಾಸ ನಿರ್ಮಿಸಿದರು. ಬಿಹಾರದಲ್ಲಿ ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಕಾನೂನುಭಂಗ ಚಳುವಳಿ ನಡೆದು ನೂರಾರು ಜನ ಸೆರೆಮನೆ ಸೇರಿದರು. ಆದರೆ ಬಂಗಾಳದ ಚಿತ್ತಗಾಂಗ್‌ನಲ್ಲಿ ಕೆಲವು ಕ್ರಾಂತಿಕಾರಿಗಳು, ಸರ್ಕಾರಿ ಶಸ್ತ್ರಾಗಾರದ ಮೇಲೆ ದಾಳಿ ಮಾಡಿ ಚಳುವಳಿಯ ಅಹಿಂಸಾತ್ಮಕತೆಗೆ ಚ್ಯುತಿ ತಂದ ಘಟನೆಯೂ ನಡೆಯಿತು. ಬಂಗಾಳಿ ಯುವಕರ ಈ ವರ್ತನೆಯ ಬಗ್ಗೆ ಗಾಂಧಿ ತಮ್ಮ ತೀವ್ರ ಖೇದವನ್ನು ಪ್ರಕಟಿಸಿದರು. ಕರ್ನಾಟಕದ ಕರಾವಳಿಯುದ್ದಕ್ಕೂ, ಅಂಕೋಲಾ, ಕುಮುಟಾ, ಕುಂದಾಪುರ, ಮಂಗಳೂರು, ಪುತ್ತೂರು ಹೀಗೆ ಅನೇಕ ಊರುಗಳಲ್ಲಿ ಉಪ್ಪಿನ ತೆರಿಗೆಭಂಗ ಚಳುವಳಿ ನಡೆಯಿತು. ಆಂಕೋಲಾದಲ್ಲಿ ಎಂ.ಪಿ. ನಾಡಕರ್ಣಿ ಅವರ ನೇತೃತ್ವದಲ್ಲಿ ನಡೆದ ಚಳುವಳಿಯಲ್ಲಿ 40 ಸಾವಿರ ಜನ ಭಾಗವಹಿಸಿದ್ದು, 1500 ಜನ ದಸ್ತಗಿರಿ ಆದರು.

ಬೇಡಾದಲ್ಲಿ ಕರ ನಿರಾಕರಣೆ-ವಿಚಲಿತರಾದ ಜಿನ್ನಾ

ಉಪ್ಪಿನ ಸತ್ಯಾಗ್ರಹದ ಜೊತೆಗೇ ಖೇಡಾ ಜಿಲ್ಲೆಯ ನೂರಾರು ಹಳ್ಳಿಗಳ ರೈತರು ಕರ ನಿರಾಕರಣೆಯ ಚಳುವಳಿಯನ್ನೂ ಆರಂಭಿಸಿದ್ದರು. ಗಾಂಧಿ ದಂಡಿ ಯಾತ್ರೆಯಲ್ಲಿ ಹಾದು ಹೋಗಿದ್ದ ರಾಸ್ ಗ್ರಾಮದ ರೈತ ಸಮೂಹ ವಲ್ಲಭಭಾಯಿ ಪಟೇಲರ ಬಂಧನಕ್ಕೆ ತಮ್ಮ ದುಡುಕಿನ ವರ್ತನೆಯೇ ಕಾರಣವೆಂದು ಭಾವಿಸಿ, ಅದಕ್ಕೆ ಪ್ರಾಯಶ್ಚಿತ್ತವಾಗಿ ಸರ್ಕಾರಕ್ಕೆ ಭೂ ಕಂದಾಯ ಪಾವತಿ ಮಾಡುವುದಿಲ್ಲವೆಂದು ಗಾಂಧಿಯವರಿಗೆ ಮಾತುಕೊಟ್ಟಿದ್ದರು. ಅದಕ್ಕನುಸಾರವಾಗಿ ಅವರು ರವಿಶಂಕರ್ ವ್ಯಾಸ್‌ರ ನೇತೃತ್ವದಲ್ಲಿ ಸುತ್ತಮುತ್ತಲ ಹಳ್ಳಿಗಳ ರೈತರನ್ನು ಸಂಘಟಿಸಿ ಕರ ನಿರಾಕರಣೆ ಆಂದೋಲನ ನಡೆಸಿದ್ದರು. ಇದರ ವಿರುದ್ಧ ಸರ್ಕಾರ ಕೈಗೊಂಡ ಕಠಿಣ ಕ್ರಮಗಳ ಫಲವಾಗಿ ಹಲವು ರೈತರು ತಮ್ಮ

ಜಮೀನುಗಳನ್ನು ಕಳೆದುಕೊಂಡರು. ಇದರ ಪರಿಣಾಮವಾಗಿ ಸಾವಿರಾರು ರೈತರು ಜೀವನೋಪಾಯಗಳಿಗಾಗಿ ತಮ್ಮ ಊರುಗಳನ್ನು ತೊರೆದು ನೆರೆಯ ಬರೋಡಾ ಸಂಸ್ಥಾನದ ಹಳ್ಳಿಗಳಿಗೆ ಗುಳೆ ಹೋಗಬೇಕಾಯಿತು.

ಗಾಂಧಿಯ ಬಂಧನ–ಮತ್ತೊಮ್ಮೆ ಯೆರವಾಡಾ ಸೆರೆಮನೆಗೆ

ಸರ್ಕಾರವೀಗ ಕ್ರಮ ಕೈಗೊಳ್ಳಲೇಬೇಕಾಯಿತು. ಉಪ್ಪು ತಯಾರಿಕೆ ಮತ್ತು ಮಾರಾಟದಲ್ಲಿ ತೊಡಗಿದ್ದ ಗಾಂಧಿಯವರ ಮಕ್ಕಳು ರಾಮದಾಸ ಮತ್ತು ದೇವದಾಸ್ ಸೇರಿದಂತೆ ಕಾಂಗ್ರೆಸ್‌ನ ಎಲ್ಲ ನಾಯಕರನ್ನೂ ಸರ್ಕಾರ ಬಂಧಿಸಿತು. ಇವರಲ್ಲಿ ಜವಾಹರಲಾಲ್ ನೆಹರೂ, ರಾಜೇಂದ್ರ ಪ್ರಸಾದ್, ರಾಜಾಜಿ, ಜಮ್ನಾಲಾಲ್ ಬಜಾಜ್, ಮಹದೇವ ದೇಸಾಯಿ ಸೇರಿದ್ದರು. ಗಾಂಧಿಯವರ ಬಂಧನಕ್ಕೆ ವೈಸ್‌ರಾಯ್ ಅನುಮತಿಗಾಗಿ ಬಾಂಬೆ ಸರ್ಕಾರ ಕಾಯುತ್ತಿರುವ ವೇಳೆಯಲ್ಲಿ ಗಾಂಧಿ, ಕಾಯಿದೆ ಭಂಗ ಚಳುವಳಿಗೆ ಜನರನ್ನು ಪ್ರಚೋದಿಸುತ್ತಾ ಕರಾವಳಿ ಹಳ್ಳಿಗಳ ಪ್ರವಾಸ ಕೈಗೊಂಡಿದ್ದರು.

ಜೊತೆಗೆ ಮಹಿಳೆಯರಿಗಾಗಿ, ಹೆಂಡದಂಗಡಿಗಳ ಮುತ್ತಿಗೆಯ ಮದ್ಯಪಾನ ನಿರೋಧ ಚಳುವಳಿಯನ್ನು ರೂಪಿಸಿಕೊಟ್ಟಿದ್ದರು. ಬಡ ಮಹಿಳೆಯರಲ್ಲದೆ ಶ್ರೀಮಂತ ಮನೆಗಳ ಮಹಿಳೆಯರೂ ದೇಶಾದ್ಯಂತ ಈ ಚಳುವಳಿಯಲ್ಲಿ ಭಾಗವಹಿಸತೊಡಗಿದ್ದರು. ಈಗ ಗಾಂಧಿ ಚಳುವಳಿಯನ್ನು ಉತ್ತುಂಗಕ್ಕೆ ಒಯ್ಯುವ ಕ್ರಮವಾಗಿ, ಧರ್ಸಾನಾ ಎಂಬಲ್ಲಿನ ಉಪ್ಪು ತಯಾರಿಕಾ ಮತ್ತು ದಾಸ್ತಾನು ಕೇಂದ್ರವನ್ನು ವಶಪಡಿಸಿಕೊಳ್ಳುವ ಕಾರ್ಯಕ್ರಮವನ್ನು ಪ್ರಕಟಿಸಿದರು. ಇದು ಬ್ರಿಟನ್, ಅಮೆರಿಕ ಸೇರಿದಂತೆ ಜಗತ್ತಿನಾದ್ಯಂತ ದೊಡ್ಡ ಸುದ್ದಿಯಾಯಿತು. ಇದೀಗ ವೈಸ್‌ರಾಯ್, ಗಾಂಧಿ ಮಿತಿ ಮೀರಿ ಹೋಗುತ್ತಿದ್ದಾರೆಂದು ತೀರ್ಮಾನಿಸಿ ಅವರ ಬಂಧನಕ್ಕೆ ಆದೇಶ ಹೊರಡಿಸಿದರು. ಗಾಂಧಿ ತಮ್ಮ ತೀರ್ಮಾನದ ಬಗ್ಗೆ ವೈಸ್‌ರಾಯ್ ಗೆ ಬರೆದ ಪತ್ರ ಅವರನ್ನು ಮುಟ್ಟುವ ಮೊದಲೇ ಗಾಂಧಿ ಬಳಿಗೆ ಪೊಲೀಸರು ಬಂದಿದ್ದರು.

ಅದು ಮೇ 4ರ ಮಧ್ಯರಾತ್ರಿ, ಕರಾಡ್ ಎಂಬ ಕರಾವಳಿ ಗ್ರಾಮದ ಮಾವಿನ ತೋಪಿನಲ್ಲಿ ತಮ್ಮ ಕೆಲ ಪಾದಯಾತ್ರಿಗಳೊಡನೆ ಗಾಂಧಿ ನೆಲದ ಮೇಲೆ ಮಲಗಿದ್ದರು. ಸೂರತ್ ನಗರದ ಮ್ಯಾಜಿಸ್ಟ್ರೇಟರ ನೇತೃತ್ವದಲ್ಲಿ ಬಂದ ಮುವ್ವತ್ತು ಜನರ ಪೊಲೀಸ್ ತಂಡ, ಗಾಂಧಿಯನ್ನು ಎಬ್ಬಿಸಿ ಸೆರೆಮನೆಗೆ ಹೊರಡಲು ತಯಾರಾಗಲು ಸೂಚಿಸಿತು. ಅದು ವಿಚಾರಣೆ ಇಲ್ಲದೆ ಬಂಧಿಸಿ, ಶಿಕ್ಷೆ ನೀಡುವ 1827ರ ಶಾಸನವೊಂದನ್ನು ಉಲ್ಲೇಖಿಸಿತು. ಹಲ್ಲುಜ್ಜಿ ಮುಖ ತೊಳೆದು ಬಂದ ಗಾಂಧಿ, ತಮ್ಮೊಡನಿದ್ದ ಸಂಗೀತ ಉಪಾಧ್ಯಾಯ ಹರಿದಾಸ ನಾರಾಯಣ ಖರೆಯವರಿಗೆ 'ವೈಷ್ಣವ ಜನತೋ' ಹಾಡಲು ಕೋರಿದರು. ಕಣ್ಣುಮುಚ್ಚಿ ಕೂತು ಧ್ಯಾನಿಸಿದ ಅವರು ಭಜನೆ ಮುಗಿದ ಕೂಡಲೇ, ಒಂದೆರಡು ತಕಲಿ ಮತ್ತು ಹತ್ತಿ ಲಡಿಗಳನ್ನು ಚೀಲಕ್ಕೆ ಹಾಕಿಕೊಂಡು ಪೊಲೀಸರು ತಂದಿದ್ದ ಲಾರಿಯೊಂದನ್ನು ಹತ್ತಿದರು. ಅಲ್ಲಿಂದ ಕೆಲವು ಮೈಲಿಗಳಾಚೆ ಇದ್ದ ರೈಲ್ವೇ ಲೆವಲ್ ಕ್ರಾಸಿಂಗ್ ಬಳಿ, ಪೂರ್ವ ಸೂಚನೆಯಂತೆ ನಿಂತ ಫ್ರಾಂಟಿಯರ್ ಮೇಲ್ ಗಾಡಿಗೆ ಗಾಂಧಿಯವರನ್ನು ಹತ್ತಿಸಿದ ಪೊಲೀಸರು, ಮಾರನೆಯ ಬೆಳಗ್ಗೆ ಬಾಂಬೆ ತಲುಪಿ, ಅಲ್ಲಿಂದ ಅವರನ್ನು ಜೀಪೊಂದರಲ್ಲಿ ಪೂನಾದ ಯರವಾಡಾ ಸೆರೆಮನೆಗೆ ಒಯ್ದು ದಾಖಲಿಸಿದರು.

ಧರ್ಸಾನಾದ ಪೋಲೀಸ್ ಹಿಂಸಾಕಾಂಡ

ಮಧ್ಯರಾತ್ರಿಯ ದಾಳಿಯಲ್ಲಿ ಒಂದು ತಾಸೂ ನಿದ್ದೆ ಮಾಡದಿದ್ದ ವೃದ್ಧ ಗಾಂಧಿಯವರನ್ನು ಏಕಾಏಕಿ ಬಂಧಿಸಿಕೊಂಡು ಹೋಗಿದ್ದ ಸರ್ಕಾರದ ಕ್ರಮದ ಬಗ್ಗೆ ತೀವ್ರ ಆತಂಕ ಮತ್ತು ಜಿಗುಪ್ಸೆಗೊಂಡ ಗಾಂಧಿ ತಂಡ, ಎಪ್ಪತ್ತೈದರ ಹಿರಿಯ ವಕೀಲ ಅಬ್ಬಾಸ್ ತ್ಯಾಬ್ಜಿಯವರ ನೇತೃತ್ವದಲ್ಲಿ ಹೆಚ್ಚಿನ ಕೆಚ್ಚಿನೊಂದಿಗೆ ಧರ್ಸಾನಾ ಕಡೆ ಹೊರಟಿತು. ಆದರೆ ಅವರನ್ನು ಅರ್ಧ ದಾರಿಯಲ್ಲೇ ತಡೆದ ಪೊಲೀಸರು ಬಂಧಿಸಿ ಸೆರೆಮನೆಗೆ ತಳ್ಳಿದರು. ಆದರೆ ಧರ್ಸಾನಾ ಕಾರ್ಯಾಚರಣೆಗೆ ಸರೋಜಿನಿ ನಾಯ್ಡು ಅವರ ಸಂಚಾಲಕತ್ವದ 2500 ಕಾರ್ಯಕರ್ತರ ಒಂದು ದೊಡ್ಡ ಪಡೆಯೇ ಸಿದ್ಧವಾಗಿತ್ತು. ಪ್ಯಾರೇಲಾಲ್, ಮಣಿಲಾಲ ಮತ್ತು ಇಮಾಮ್ ಭಾವ್‌ಜಿ ಅವರನ್ನೊಳಗೊಂಡ ಈ ಪಡೆ, ಮೇ 21ರಂದು ಧರ್ಸಾನಾಗೆ ಬಂತು. ಸತ್ಯಾಗ್ರಹದ ನಿಯಮಗಳಿಗನುಗುಣವಾಗಿ ಈ ಬಗ್ಗೆ ಸರ್ಕಾರಕ್ಕೆ ಪೂರ್ವ ಸೂಚನೆ ನೀಡಿದ್ದುದರಿಂದ ಅದು ಉಪ್ಪಿನ ಕೋಠಿಗಳ ಸುತ್ತ ಹಳ್ಳಗಳಲ್ಲಿ ನೀರು ಕಟ್ಟಿ ಮುಳ್ಳಿನ ಬೇಲಿ ಹಾಕಿ ಸಶಸ್ತ್ರ ಪೊಲೀಸರ ಕಾವಲು ಏರ್ಪಡಿಸಿತ್ತು.

ಬೆಳಗಿನ ಪ್ರಾರ್ಥನೆಯ ನಂತರ ಸರೋಜಿನಿ ನಾಯ್ಡು ಕಾರ್ಯಕರ್ತರನ್ನು ಸಣ್ಣ ತುಕಡಿಗಳನ್ನಾಗಿ ವಿಭಾಗಿಸಿ ಒಂದು ತುಕಡಿಯಾದ ನಂತರ ಇನ್ನೊಂದು ತುಕಡಿಯಂತೆ ಉಪ್ಪಿನ ಕೋಠಿಗಳತ್ತ ಸಾಗಬೇಕೆಂದೂ, ಈ ಕಾರ್ಯಾಚರಣೆ ಸಂಪೂರ್ಣ ಅಹಿಂಸಾತ್ಮಕವಾಗಿದ್ದು ಯಾರೊಬ್ಬರೂ ತಮಗೆ ಬೀಳಬಹುದಾದ ಏಟನ್ನು ತಪ್ಪಿಸಿಕೊಳ್ಳಲು ಯತ್ನಿಸಬಾರದು ಮತ್ತು ಪೊಲೀಸರ ಮೇಲೆ ಕೈ ಎತ್ತಬಾರದೆಂದು ಸೂಚನೆಗಳನ್ನು ನೀಡಿದರು. ಈ ಕಾರ್ಯಾಚರಣೆಗೆ ಸಾಕ್ಷಿಯಾಗಲು ಸಾವಿರಾರು ಜನರೊಂದಿಗೆ ದೇಶ ವಿದೇಶಗಳಿಂದ ಪತ್ರಕರ್ತರು ಬಂದಿದ್ದರು. ಅವರಲ್ಲಿ ಒಬ್ಬರಾದ ಯುನೈಟೆಡ್ ಪ್ರೆಸ್ ಇಂಟರ್‌ನ್ಯಾಷನಲ್‌ನ ಅಮೆರಿಕನ್ ಪತ್ರಕರ್ತ ವೆಬ್ ಮಿಲರ್ ಎಂಬಾತ ಮಾಡಿರುವ ಪ್ರತ್ಯಕ್ಷದರ್ಶಿ ವರದಿ, ಹಲವು ಭಾಗಗಳನ್ನು ಸರ್ಕಾರ ಕತ್ತರಿಸಿತಾದರೂ, ಅದಷ್ಟೇ ಕೂಡ ಯಾರ ರಕ್ತವನ್ನಾದರೂ ತಣ್ಣಗೆ ಮಾಡುವಷ್ಟು ಭಯಾನಕವಾಗಿದೆ.

ಈ ಕತ್ತರಿಸಲ್ಪಟ್ಟ ವರದಿಯ ಪ್ರಕಾರವೇ, ಒಂದೊಂದೇ ತುಕಡಿ ಉಪ್ಪಿನ ಕೋಠಿಯತ್ತ ಸಾಗಿ ನೀರಿನ ಕಂದಕ ದಾಟಿ ಪೊಲೀಸ್ ಅಧಿಕಾರಿಯ ಮುನ್ನೆಚ್ಚರಿಕೆಯನ್ನು ಲೆಕ್ಕಿಸದೆ ಮುಳ್ಳಿನ ಬೇಲಿಯತ್ತ ಸಾಗುತ್ತಿದ್ದಂತೆ, ಭಾರತೀಯರಿಂದಲೇ ಕೂಡಿದ ಪೊಲೀಸ್ ದಳ ತನ್ನ ಉಕ್ಕಿನ ಟೋಪಿಗಳಿದ್ದ ಲಾಠಿಗಳನ್ನು ಸತ್ಯಾಗ್ರಹಿಗಳ ಮೇಲೆ ತಲೆ, ಕೈ, ಕಾಲು, ಹೊಟ್ಟೆ, ತೊಡೆ ಎನ್ನದೆ ಬೀಸತೊಡಗುತ್ತಿತ್ತು. ತಲೆ ಒಡೆದ, ಹೆಗಲು, ಕೈ ಕಾಲುಗಳನ್ನು ಮುರಿದುಕೊಂಡ ಸತ್ಯಾಗ್ರಹಿಗಳು ಯಾವುದೇ ಹಾಹಾಕಾರವಿಲ್ಲದೆ ಕುಸಿದು ಬೀಳುತ್ತಿದ್ದರು. ಇನ್ನೂ ಶಕ್ತಿ ಉಳಿಸಿಕೊಂಡವರು ಮುಂದಿನ ಹೆಜ್ಜೆ ಇಡುತ್ತಿದ್ದಂತೆ ಮತ್ತೆ ಲಾಠಿ ಏಟುಗಳ ಮಳೆಗರೆತವಾಗುತ್ತಿತ್ತು. ಅವರೆಲ್ಲ ಕುಸಿದುಬಿದ್ದ ಮೇಲೆ ಇದನ್ನೆಲ್ಲ ಉಸಿರು ಬಿಗಿಹಿಡಿದು ನೋಡುತ್ತಿದ್ದ ಇನ್ನೊಂದು ತುಕಡಿ ಯಾವುದೇ ಹಿಂಜರಿಕೆಯ ಭಾವನೆ ಇಲ್ಲದೆ ಕೋಠಿಗಳ ಕಡೆ ಸಾಗಲು ಮುಂದೆ ಬರುತ್ತಿತ್ತು. ಅದಕ್ಕೂ ಮತ್ತೆ ಅದೇ ಗತಿ. ಅಲ್ಲಿಯೇ ಸಿದ್ಧವಾಗಿದ್ದ ಮೀರಾ ಬೆನ್ ನೇತೃತ್ವದ ಶುಶ್ರೂಷಾ ತಂಡ ಕುಸಿದು ಬಿದ್ದವರನ್ನು ಎತ್ತಿ ಕಂಬಳಿಗಳಲ್ಲಿ ಮಲಗಿಸಿ ಪ್ರಥಮ ಚಿಕಿತ್ಸೆ ನೀಡುತ್ತಿದ್ದರಾದರೂ ಗಾಯಾಳುಗಳ ಸಂಖ್ಯೆ ಮಿತಿ ಮೀರಿದಾಗ ತುಕಡಿಗಳು, ಈಗ ಕೋಠಿಗಳ ಸುತ್ತ ಧರಣಿ ಕೂರಲಾರಂಭಿಸಿದವು. ಅದನ್ನೂ



ಸಹಿಸದ ಪೊಲೀಸ್ ದಳ ಆ ತುಕಡಿಗಳ ಮೇಲೂ ದಾಳಿ ಮಾಡಿ ಒದ್ದು ಹೊಡೆದು ಹಿಂಸಿಸಿದರು.

ಬೆಳಿಗ್ಗೆ ಹನ್ನೊಂದಕ್ಕೆ ಸಮುದ್ರ ತೀರದ ಮೇ ಬಿಸಿಲು ರಾಚತೊಡಗಿತ್ತು. ಅಂದಿಗೆ ಕಾರ್ಯಾಚರಣೆ ಮುಗಿದಿತ್ತು. ಪಕ್ಕದಲ್ಲೇ ಸ್ಥಾಪಿಸಲಾಗಿದ್ದ ವೈದ್ಯಕೀಯ ಶಿಬಿರಕ್ಕೆ ಮಿಲ್ಲರ್ ಹೋದಾಗ ಆತ 320 ಜನ ಗಾಯಾಳುಗಳನ್ನು ಕಂಡರು. ಅವರಲ್ಲಿ ಬಹಳ ಜನಕ್ಕೆ ಇನ್ನೂ ಪ್ರಜ್ಞೆ ಬಂದಿರಲಿಲ್ಲ. ಇನ್ನು ಕೆಲವರು ನೋವಿನಿಂದ ನರಳಾಡುತ್ತಿದ್ದರು. ಇಬ್ಬರು ಅಸು ನೀಗಿದ್ದರು. ಮಿಲ್ಲರ್ ಅವರ ಈ ವರದಿ ಜಗತ್ತಿನೆಲ್ಲೆಡೆ ಪ್ರಸಾರವಾಗಿ ನಾಗರಿಕ ಜಗತ್ತಿನ ಎದೆ ಝಲ್ಲೆನ್ನುವಂತೆ ಮಾಡಿತು.

ಆದರೆ ಈ ಕಾರ್ಯಚರಣೆ ಇನ್ನೂ ಮುಗಿದಿರಲಿಲ್ಲ. ಇಡೀ ಸತ್ಯಾಗ್ರಹ ಪಡೆ ಕುಸಿದು ಬೀಳುವವರೆಗೂ ನಡೆಯಿತು. ಒಟ್ಟು 2699 ಜನ ಕಾರ್ಯಕರ್ತರು ಭಾಗವಹಿಸಿದ್ದ ಈ ಕಾರ್ಯಾಚರಣೆಯಲ್ಲಿ 1333 ಜನ ಗಂಭೀರವಾಗಿ ಗಾಯಗೊಂಡಿದ್ದರು. ನಾಲ್ವರು ಅಸು ನೀಗಿದ್ದರು. ಪೊಲೀಸ್ ಅಧಿಕಾರಿಯೊಬ್ಬ ಬಂದು, ಸರೋಜಿನಿ ನಾಯ್ದು ಅವರ ಹೆಗಲು ಮುಟ್ಟಿ ನಿಮ್ಮನ್ನು ಬಂಧಿಸುತ್ತಿದ್ದೇವೆ ಎಂದಾಗ ಶ್ರೀಮತಿ ನಾಯ್ದು 'ಕೈ ತೆಗೆ! ನನ್ನನ್ನು ಮುಟ್ಟ ಕೂಡದು ನೀನು!!' ಎಂದು ಅರಚಿ ಪೊಲೀಸ್ ವಾಹನ ಹತ್ತಿದರು. ಅವರೊಂದಿಗೆ ಮಣಿಲಾಲ್, ಪ್ಯಾರೇಲಾಲ್, ಇಮಾಂ ಭಾವ್‌ಜಿ ಕೂಡ ಬಂಧನಕ್ಕೊಳಗಾದರು. ಈ ಇಡೀ ಕಾರ್ಯಾಚರಣೆಯ ಬಗ್ಗೆ 'ಯಂಗ್ ಇಂಡಿಯಾ'ದ ಮೇ 29ರ ಸಂಚಿಕೆಯಲ್ಲಿ ಲೇಖನವೊಂದನ್ನು ಬರೆದ ಗುಜರಾತ್ ವಿದ್ಯಾಪೀಠದಲ್ಲಿ ಅಧ್ಯಾಪಕರಾಗಿದ್ದ ಜೆ.ಸಿ. ಕುಮಾರಪ್ಪ ಅವರ ಪ್ರಕಾರ, ನಾವು ಒಂದು ಚಿಟಿಕೆ ಮಾತ್ರ ಉಪ್ಪನ್ನು ಪಡೆದಿರಬಹುದು. ಆದರೆ ಇದರಿಂದ ಬ್ರಿಟಿಷ್ ಸರ್ಕಾರದ ರಾಕ್ಷಸತನವನ್ನು ಜಗತ್ತಿಗೆ ಮನವರಿಕೆ ಮಾಡಿಕೊಡುವ ನಮ್ಮ ಉದ್ದೇಶ ಇಲ್ಲಿ ಯಶಸ್ವಿಯಾಗಿದೆ.

ಈ ಧರ್ಸಾನಾ ಪ್ರಕರಣ ಗಾಂಧಿ ಮಾರ್ಗದ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದ ವಿಠಲಭಾಯಿ ಪಟೇಲರನ್ನೂ ತಲ್ಲಣಗೊಳಿಸಿತು. ಅವರು ಕೇಂದ್ರ ಶಾಸನ ಸಭೆಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು ಮತ್ತು ಒಂದು ಪತ್ರಿಕಾ ಹೇಳಿಕೆಯಲ್ಲಿ 'ಬ್ರಿಟಿಷ್ ಪ್ರಭುತ್ವದ ಈ ಪೈಶಾಚಿಕ ಕೃತ್ಯ ಭಾರತ ಮತ್ತು ಬ್ರಿಟಿಷ್ ಸಾಮ್ರಾಜ್ಯದ ನಡುವಣ ಸೇತುವೆ ಶಾಶ್ವತವಾಗಿ ಕುಸಿದು ಹೋಗಿದೆ' ಎಂದು ಘೋಷಿಸಿದರು.

ಮಳೆ ನಿಂತರೂ ಮರದ ನೀರು ತೊಟ್ಟಿಕ್ಕುವಂತೆ, ಈ ನಂತರವೂ ದೇಶದ ವಿವಿಧ ಭಾಗಗಲ್ಲಿ ಉಪ್ಪಿನ ಕಾಯಿದೆ ಭಂಗ ಮತ್ತು ಅದರ ಜೊತೆಗೆ ಭೂ ಕಂದಾಯವೂ ಸೇರಿದಂತೆ ಇತರ ರೀತಿಯ ಕರ ನಿರಾಕರಣೆಗಳ ಪ್ರಸಂಗಗಳು ನಡೆದೇ ಇದ್ದವು. ಮುಂಬೈನಲ್ಲಿ ನಡೆದ ಮೆರವಣಿಗೆಯೊಂದರ ಸಂದರ್ಭದಲ್ಲಿ ಸರ್ದಾರ್ಜಿಯೊಬ್ಬರು ರಸ್ತೆಯೊಂದರಲ್ಲಿ ಪೊಲೀಸರ ಲಾಠಿ ಏಟುಗಳನ್ನು ಪ್ರತಿಭಟಿಸದೆ ಅವನ್ನು ಆಹ್ವಾನಿಸುತ್ತಾ ತನ್ನನ್ನು ದಾಳಿಯಿಂದ ರಕ್ಷಿಸಲು ಬಂದ ಹಿಂದೂ ಸೋದರರನ್ನು ದೂರ ತಳ್ಳುತ್ತಾ–ರಕ್ತಸಿಕ್ತನಾಗಿ ಸ್ಥಿರವಾಗಿ ನಿಂತೇ ಇದ್ದಂತಹ ಹಲವು ದೃಶ್ಯಗಳು, ಗಾಂಧಿ ಪ್ರಭಾವದ ಪ್ರತೀಕಗಳಾಗಿ ಪತ್ರಿಕಾ ವರದಿಗಳ ಮೂಲಕ ಜಗತ್ತಿನಾದ್ಯಂತ ಪ್ರಸಾರವಾದವು. ಉಪ್ಪಿನ ಸತ್ಯಾಗ್ರಹದ ಪರಿಣಾಮವಾಗಿ ದೇಶಾದ್ಯಂತ ಒಟ್ಟು 90 ಸಾವಿರ ಜನ ಸೆರೆಮನೆ ಸೇರಿದ್ದರು. ಅವರಲ್ಲಿ ಒಬ್ಬರಾಗಿದ್ದ ಜವಾಹರಲಾಲ್ ನೆಹರೂ, ಇನ್ನೋರ್ವ ಸೆರೆಯಾಳಾಗಿದ್ದ ಗಾಂಧಿಯವರಿಗೆ ಈ ಸತ್ಯಾಗ್ರಹದ ಬಗ್ಗೆ ಜುಲೈ 28ರಂದು ಬರೆದ ಪತ್ರವೊಂದರಲ್ಲಿ, ತಾವು ಮೊದಲು ಗಾಂಧಿ ಉಪ್ಪಿನ ಸತ್ಯಾಗ್ರಹದ ಪ್ರಸ್ತಾಪ ಮಾಡಿದಾಗ ಪರಿಹಾಸ್ಯ ಮಾಡಿದ್ದರ ಬಗ್ಗೆ ನಾಚಿಕೆ ವ್ಯಕ್ತಪಡಿಸುತ್ತಾ, 'ನಿಮ್ಮ ಮಾಂತ್ರಿಕ ಸ್ಪರ್ಶದಿಂದ ನಮ್ಮಂಥವರ ಗದ್ಯಮಯ ಬದುಕು ಮಹಾಕಾವ್ಯವೊಂದರ ಬೆಡಗನ್ನು ಪಡೆದುಕೊಂಡಿದೆ' ಎಂದು ಕೃತಜ್ಞತೆಗಳನ್ನು ಅರ್ಪಿಸಿದ್ದಾರೆ.


(ಡಿ. ಎಸ್. ನಾಗಭೂಷಣ ಅವರ ಗಾಂಧಿ ಕಥನ ಪುಸ್ತಕದಿಂದ ಆಯ್ದ ಅಧ್ಯಾಯ)

■



ನೀರು ಮತ್ತು ಉಪ್ಪು : ಮರುಕಳಿಸುತ್ತಿರುವ ನೆನಪು

▪ ಕೆ.ವಿ.ನಾರಾಯಣ



ಡಾ.ಅಂಬೇಡ್ಕರ್ ಅವರು ನೀರು ಎಲ್ಲರಿಗೂ ದೊರಕಬೇಕಾದುದು ಎಂಬ ಸತ್ಯವನ್ನು ಸ್ಥಾಪಿಸಲು ನಡೆಸಿದ ಮಹಾಡ್ ಸತ್ಯಾಗ್ರಹವಾಗಲೀ; ಉಪ್ಪು ನಮ್ಮದು, ನಮಗೆ ಅದು ಸೇರಬೇಕಾದ್ದು ಎಂದು ಸಾಧಿಸಲು ಗಾಂಧಿ ನಡೆಸಿದ ದಂಡಿ ಸತ್ಯಾಗ್ರಹವಾಗಲೀ ಆಯಾ ಸಂದರ್ಭದ ಆಚೆಗೂ ತಮ್ಮ ಅರ್ಥ ಸಾಧ್ಯತೆಗಳನ್ನು ಚಾಚುತ್ತಿವೆ. ಈಗ ನಾಡು ಎದುರಿಸುತ್ತಿರುವ ಬಿಕ್ಕಟ್ಟಿನ ಹೊತ್ತಿನಲ್ಲಿ ಇವೆರಡೂ ನಮಗೆ ಸೂಚಿಸುವ ಸಾಧ್ಯತೆಗಳೇನು? ಈ ನೆಲದಲ್ಲಿ ಹುಟ್ಟಿ ಬೆಳೆದವರು, ಇಲ್ಲಿನ ನೀರು ಗಾಳಿ ಆಹಾರವನ್ನು ಪಡೆದುಕೊಂಡವರು 'ಇಲ್ಲಿನವರೇ' ಅಲ್ಲವೇ? ಅವರು ತಾವು ಇಲ್ಲಿನವರು ಎಂದು ಬೇರೆಯಾಗಿ ಸಾಧಿಸಿ ತೋರಿಸಬೇಕಾದ ಪರಿಸ್ಥಿತಿ ಈಗ ಒದಗಿದೆ. ಅಂದರೆ ಅವರಿಗೆ ಹುಟ್ಟಿನಿಂದಲೇ ದೊರೆತಿರುವ ಹಕ್ಕನ್ನು ಮೊಟಕುಗೊಳಿಸುವ, ಕಿತ್ತುಕೊಳ್ಳುವ ಯತ್ನಗಳು ಮೊದಲಾಗಿವೆ.

ತಮ್ಮದಲ್ಲದ್ದನ್ನು ಗಳಿಸಿಕೊಳ್ಳಲು ಹೋರಾಡುವುದಲ್ಲ; ಈಗಾಗಲೇ ಹುಟ್ಟಿನಿಂದ ತಮ್ಮದಾಗಿರುವುದನ್ನು ಯಾರೋ ಕಿತ್ತುಕೊಳ್ಳುತ್ತಿರುವುದರ ವಿರುದ್ಧ ಹೋರಾಡಬೇಕಾಗಿ ಬಂದಿದೆ'

ಚಿಂತಕರ ಮಾತು ಬರಹಗಳಿಂದ ನಮ್ಮ ವಿಚಾರಗಳನ್ನು ರೂಪಿಸಿಕೊಳ್ಳುವ, ಆ ಮೂಲಕ ಕ್ರಿಯಾಶೀಲತೆಯನ್ನು ಬೆಳೆಸಿಕೊಳ್ಳುವ ಬಗೆ ಒಂದು ರೀತಿ. ಹಾಗಲ್ಲದೆ ಆ ಚಿಂತಕರು ತಮ್ಮನ್ನು ತಾವು ತೊಡಗಿಸಿಕೊಂಡ ಕ್ರಿಯೆಗಳ ಹಿಂದಿನ ಅರ್ಥವಂತಿಕೆಯನ್ನು ಅರಿತು



ಅದನ್ನು ನಮ್ಮ ಕಾಲಕ್ಕೆ ದಾಟಿಸಿಕೊಳ್ಳುವುದು ಇನ್ನೊಂದು ಬಗೆ. ಈ ಎರಡನೆಯ ಬಗೆಯ ಒಂದು ಮಾದರಿಯನ್ನು ಕಂಡುಕೊಳ್ಳುವ ಉದ್ದೇಶದಿಂದ ಮುಂದಿನ ಟಿಪ್ಪಣಿಯನ್ನು ಬರೆಯಲಾಗಿದೆ.

ಸುಮಾರು ಒಂಬತ್ತು ದಶಕಗಳ ಹಿಂದೆ ನಮ್ಮ ನಾಡಿನಲ್ಲಿ ನಡೆದ ಎರಡು ಹೋರಾಟಗಳು ಈ ಹೊತ್ತಿನಲ್ಲಿ ನೆನೆಪಿಗೆ ಬರುತ್ತಿವೆ. ಇವುಗಳನ್ನು ಹೋರಾಟ ಎನ್ನಲಾಗದು. ಏಕೆಂದರೆ ಇಲ್ಲಿ ಎದುರಾಳಿಯು ಕಣ್ಣೆದುರು ಕಾಣುವಂತಿರಲಿಲ್ಲ. ಅಮೂರ್ತವಾದ ಅಧಿಕಾರ ಕೇಂದ್ರದೊಡನೆ ಮುಖಾಮುಖಿಯಾಗಲು ನಡೆಸಿದ ಯತ್ನಗಳಿವು. ಮೊದಲನೆಯದು 1927 ರಲ್ಲಿ ಡಾ.ಅಂಬೇಡ್ಕರ್ ಅವರ ಮುಂದಾಳುತನದಲ್ಲಿ ನಡೆದ ಮಹಾಡ್ ಸತ್ಯಾಗ್ರಹ. ಈ ಹೋರಾಟವನ್ನು ಸತ್ಯಾಗ್ರಹ ಎಂದು ಆ ಹೊತ್ತಿನಲ್ಲಿ ಹೊರಡಿಸಿದ್ದ ಕರಪತ್ರದಲ್ಲಿ ಕರೆಯಲಾಗಿದೆ. ಕುಡಿಯುವ ನೀರನ್ನು ಎಲ್ಲರಂತೆ ಕೆರೆ, ಬಾವಿಗಳಿಂದ ಪಡೆದುಕೊಳ್ಳಲು ದಲಿತರಿಗೆ ಅವಕಾಶವಿಲ್ಲದಿದ್ದ ಸಂದರ್ಭದಲ್ಲಿ ಅಂದಿನ ಬಾಂಬೆ ಸರಕಾರವು ಸಾರ್ವಜನಿಕ ಪ್ರದೇಶಗಳಲ್ಲಿರುವ ನೀರಿನ ಆಕರಗಳಿಂದ ನೀರನ್ನು ಪಡೆದುಕೊಳ್ಳುವ ಹಕ್ಕಲು ಎಲ್ಲರಿಗೂ ಇದೆ ಎನ್ನುವ ನಿರ್ಣಯವನ್ನು(1924 ರಲ್ಲಿ) ಮಾಡಿತ್ತು. ಆದರೂ ಈ ನಿರ್ಣಯ ಜಾರಿಗೊಳ್ಳುವಲ್ಲಿ ಮೇಲು ಜಾತಿಯವರ ಒತ್ತಡದಿಂದ ಸೋಲು ಕಾಣುತ್ತಿತ್ತು. ಅಂತಹ ಹೊತ್ತಿನಲ್ಲಿ ರಾಯಗಡದ ಬಳಿಯ ಮಹಾಡ್ ಎಂಬಲ್ಲಿದ್ದ ಚವ್ದಾರ್ ತಲಾ (ಕೆರೆ) ಎಂಬಲ್ಲಿಂದ ನೀರನ್ನು ತೆಗೆದುಕೊಳ್ಳುವ ನಿರ್ಧಾರ ವನ್ನು ಡಾ.ಅಂಬೇಡ್ಕರ್ ಅವರು ಮಾಡಿದರು. ಸುಮಾರು ನಾಲ್ಕು ಸಾವಿರ ಜನರೊಡಗೂಡಿ ಅಲ್ಲಿಗೆ ನಡೆದು ಹೋಗಿ ಆ ಕೆರೆಯಿಂದ ನೀರು ತೆಗೆದುಕೊಳ್ಳುವುದಕ್ಕೆ ಮುಂದಾದರು.

1930ರಲ್ಲಿ ಗಾಂಧಿಯವರ ಮುಂದಾಳುತನದಲ್ಲಿ ನಡೆದ ದಂಡಿಯಾತ್ರೆ ಈಗ ನೆನಪಿಗೆ ಬರುವ ಇನ್ನೊಂದು ಸತ್ಯಾಗ್ರಹ. 1882ರಲ್ಲಿ ಬ್ರಿಟಿಶ್ ಆಡಳಿತ ಜಾರಿಗೆ ತಂದಿದ್ದ ಉಪ್ಪಿನ ಮೇಲೆ ಕರ ವಿಧಿಸುವ ಕಾಯ್ದೆಯನ್ನು ಮೀರಲು ನಡೆಸಿದ ಸತ್ಯಾಗ್ರಹವಿದು. ದಂಡಿ ಎಂಬ ಪ್ರದೇಶದಲ್ಲಿ ತಮಗೆ ಬೇಕಾದ ಉಪ್ಪನ್ನು ತಾವೇ ಪಡೆದುಕೊಳ್ಳುವ ಗುರಿಯನ್ನು ಇಟ್ಟುಕೊಂಡು ಉಪ್ಪಿನ ಮೇಲೆ ಕರ ಹಾಕುವ ಸರಕಾರದ ಕ್ರಮವನ್ನು ಮೀರಲು ಈ ಆಂದೋಲನವನ್ನು ಗಾಂಧಿ ಕೈಕೊಂಡರು. ಅವರ ಈ ನಿರ್ಧಾರಕ್ಕೆ ಗಾಂಧಿಯವರ ಸಹಚರರಲ್ಲೇ ಸಹಮತಿ ಇರಲಿಲ್ಲ. ಬೇರೆ ದಾರಿಯನ್ನು ಆಯ್ದುಕೊಳ್ಳುವುದು ಒಳಿತು ಎಂಬ ಸಲಹೆಗಳನ್ನು ಮುಂದಿಟ್ಟದ್ದರು. ಇದೊಂದು ನಗೆಪಾಟಲಿನ ವಿಚಾರವೆಂದು ಮಾಧ್ಯಮಗಳು ಹೇಳಿದವು. ಬ್ರಿಟಿಶ್ ಆಡಳಿತವೂ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ.

ಮೂರು ವರುಶಗಳ ಅಂತರದಲ್ಲಿ ನಡೆದ ಈ ಎರಡೂ ಹೋರಾಟಗಳ ನೆನಪು ಈಗೇಕೆ? ಇವೆರಡೂ ಈ ಭೂಮಿಯ ಮೇಲೆ ಬದುಕುವ ಎಲ್ಲ ಜನರಿಗೂ ಹುಟ್ಟಿನಿಂದಲೇ ದೊರಕಿರುವ ಹಕ್ಕುಗಳನ್ನು ಮರಳಿ ಗಳಿಸಿಕೊಳ್ಳುವ ಗುರಿಯನ್ನು ಹೊಂದಿವೆ. ಕೆರೆಯ ನೀರನ್ನು ಪಡೆದುಕೊಳ್ಳುವ ಹಕ್ಕು ಎಲ್ಲರಿಗೂ ಇದೆಯೆಂಬ ಕಾಯ್ದೆಯನ್ನು ಆಳುವ ಸರಕಾರ ಜಾರಿಗೆ ಕೊಡಬೇಕಾಗಿ ಬಂದುದೇ ಒಂದು ವಿಪರ್ಯಾಸ. ಅದನ್ನು ಜಾರಿಗೊಳಿಸದಂತೆ ಅಡ್ಡಿಮಾಡಿದ ಸಾಮಾಜಿಕ ಒತ್ತಡಗಳನ್ನು ಮೀರುವ ಗುರಿಯನ್ನು ಇರಿಸಿಕೊಂಡು ಡಾ. ಅಂಬೇಡ್ಕರ್ ಅವರು ನಡೆಸಿದ ಸತ್ಯಾಗ್ರಹವು ಜನರಿಂದ ಕಸಿದುಕೊಳ್ಳಲಾಗಿದ್ದ ಹಕ್ಕನ್ನು ಮರಳಿ ಪಡೆದುಕೊಳ್ಳುವ ಗುರಿಯನ್ನು ಹೊಂದಿತ್ತು. ಗಾಂಧಿಯವರು ಜನರ ದಿನದ ಅಗತ್ಯಗಳಲ್ಲಿ ಒಂದಾಗಿದ್ದ ಉಪ್ಪಿನ ಮೇಲೆ ಸುಂಕ ಹಾಕಿ ಜನರು ಉಪ್ಪು ಪಡೆದು ಕೊಳ್ಳಲು ಕಷ್ಟಕ್ಕೀಡಬೇಕಾಗಿದ್ದ ಪರಿಸ್ಥಿತಿಯ ವಿರುದ್ಧ ಈ ಸತ್ಯಾಗ್ರಹವನ್ನು ಯೋಜಿಸಿದ್ದರು. 1882ರ ಕಾಯ್ದೆಯನ್ನು (ಇದಕ್ಕೊಂದು ಹಳೆಯ ಕತೆ ಇದೆ. ಅದಿಲ್ಲಿ ಬೇಡ) 1930ರಲ್ಲಿ ಅರ್ಧ ಶತಮಾನದ ಅನಂತರ ವಿರೋಧಿಸಲು ಹೊರಟದ್ದು ಕೊಂಚ ವಿಚಿತ್ರವಾಗಿ ಕಾಣಬಹುದು. ಆದರೆ ಗಾಂಧಿ ಇದನ್ನೊಂದು ಸಂಕೇತವೆಂಬಂತೆ ಪರಿಗಣಿಸಿದಂತೆ ತೋರುತ್ತದೆ. ಅವರು ಸರಿ ಸುಮಾರು 1927 ರಲ್ಲಿ ಯಂಗ್ ಇಂಡಿಯಾ ಪತ್ರಿಕೆಯ ತಮ್ಮ ಬರಹವೊಂದರಲ್ಲಿ 'ಯುವ ಜನಾಂಗವೇ ನಾಡಿನ ಉಪ್ಪು' ಎಂದು ಹೇಳಿದ್ದಾರೆ. 'ಈ ಉಪ್ಪು ತನ್ನ ಉಪ್ಪುತನವನ್ನು ಕಳೆದುಕೊಂಡರೆ ಅದನ್ನು ಮರಳಿ ಪಡೆದುಕೊಳ್ಳುವುದು ಹೇಗೆ' ಎಂದೂ ಕೇಳುತ್ತಾರೆ. ಉಪ್ಪಿನ ಉಪ್ಪುತನ ಅದಕ್ಕೇ ಅಗತ್ಯವಾದುದಲ್ಲ. ಅದು ಆಹಾರದಲ್ಲಿ ಬೆರೆತಾಗ ತನ್ನ ಈ ಗುಣವನ್ನು ಆ ಆಹಾರಕ್ಕೆ ಬಿಟ್ಟು ಕೊಡಬೇಕಾಗುತ್ತದೆ. ನೀರಿನಂತೆ ಉಪ್ಪು ಕೂಡ ಬೇರೆ ಬೇರೆ ಬಗೆಯಲ್ಲಿ ಬದುಕಿಗೆ ದಿನದಿನವೂ ಬೇಕಾದ ವಸ್ತುವೇ ಸರಿ. ಇವೆರಡೂ ದೇಹಕ್ಕೆ ಬೇಕೇ ಬೇಕಾದವಾದರೂ ಇವೆರಡರ ಪಾತ್ರಗಳು ಮಾತ್ರ ಬೇರೆ ಬೇರೆ. ಗಾಂಧಿಯವರು ಉಪ್ಪನ್ನು ಯುವಜನಾಂಗಕ್ಕೆ ಹೋಲಿಸುವ ಮೂಲಕ ತಮ್ಮ ಹೋರಾಟಕ್ಕೆ ಅವರನ್ನು ಸೇರಿಸಿಕೊಳ್ಳುವ ಬಯಕೆಯನ್ನು ಹೊಂದಿದ್ದಂತೆ ತೋರುತ್ತದೆ. ಯುವ ಜನಾಂಗ ತಮ್ಮನ್ನು ತಾವು ಇನ್ನೊಂದು ಗುರಿಗೆ ಒಪ್ಪಿಸಿಕೊಳ್ಳುವಂತೆ ಮಾಡಬೇಕೆಂಬ ಆಶಯವಿದೆ.

(ದಂಡಿಯ ಯಾತ್ರೆಯಲ್ಲಿ ಚಿಕ್ಕ ಹುಡುಗನೊಬ್ಬ ಕೋಲಿನ ಒಂದು ತುದಿಯನ್ನು ಹಿಡಿದು ಕೋಲಿನ ಇನ್ನೊಂದು ತುದಿಯಲ್ಲಿದ್ದ ಗಾಂಧಿಯನ್ನು ಕರೆದೊಯ್ಯುತ್ತಿದ್ದ ಐತಿಹಾಸಿಕ ಚಿತ್ರವನ್ನು ನೆನಪು ಮಾಡಿಕೊಳ್ಳಬಹುದು.) ಆ ಹೊತ್ತಿಗಾಗಲೇ ಹೊಸ ಬಗೆಯ ವಿದ್ಯಾಭ್ಯಾಸ, ಆಧುನಿಕತೆ, ಯಂತ್ರ ವಿಜ್ಞಾನ, ಉಪಭೋಗಿ ಜೀವನಕ್ರಮ ಮತ್ತಿತರ ಸೆಳೆತಗಳಿಂದ ನಾಡಿನ ಮುಖ್ಯ ಪ್ರವಾಹದಿಂದ, ಜನ ಸಮುದಾಯದ ಆಶೋತ್ತರಗಳಿಂದ ದೂರ ಸರಿಯುತ್ತಿದ್ದ ಯುವ ಜನಾಂಗವನ್ನು ಮತ್ತೆ ಒಳಸೆಳೆಯುವ ಯತ್ನ ಗಾಂಧಿಯವರಲ್ಲಿ ಕಾಣುತ್ತದೆ.

■



ಬಾಬಾಸಾಹೇಬರನ್ನು ನೆನೆಯುತ್ತಾ...

– ವಿವೇಕಾನಂದ. ಎಚ್ ಕೆ.

ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹುಟ್ಟು ಹಬ್ಬದ ಮುನ್ನ (ಏಪ್ರಿಲ್ 14) ಅವರ ವ್ಯಕ್ತಿತ್ವ ಮತ್ತು ಸಾಧನೆ ನೆನಪು ಮಾಡಿಕೊಳ್ಳುವ ಒಂದು ಸಣ್ಣ ಪ್ರಯತ್ನ........

ಸಂವಿಧಾನ, ಬಾಬಾ ಸಾಹೇಬ್ ನೀಡಿದ ನೆರಳು ಎನ್ನಲು ಕಾರಣ.....

ಸುಮ್ಮನೆ ಒಮ್ಮೆ ಯೋಚಿಸಿ ನೋಡಿ, ಒಂದು ವೇಳೆ ಅಂಬೇಡ್ಕರ್ ಅವರಲ್ಲದೆ ಬೇರೆ ಯಾರಾದರೂ ಭಾರತದ ಸಂವಿಧಾನ ರಚನಾ ಕರಡು ಸಮಿತಿಯ ಅಧ್ಯಕ್ಷರಾಗಿದ್ದಿದ್ದರೆ ಅದರ ಮೂಲ ಸ್ವರೂಪ ಏನಾಗಿರುತ್ತಿತ್ತು.......

ಅಂಬೇಡ್ಕರ್ ಅಸ್ಪೃಶ್ಯ ಸಮುದಾಯದಲ್ಲಿ ಹುಟ್ಟಿ ಅದೇ ವಾತಾವರಣದಲ್ಲಿ ಬೆಳೆದು ಬಂದವರು. ಅವರ ವಯಸ್ಸು ಮತ್ತು ಶಿಕ್ಷಣ ಬೆಳೆದಂತೆಲ್ಲಾ ಅವರಿಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯ ಅಸಮಾನತೆ, ಅಮಾನವೀಯತೆ ಸ್ವತಃ ಅರಿವಾಗತೊಡಗಿತು. ಅದೃಷ್ಟವಶಾತ್ ಅವರು ಹುಟ್ಟಿನಿಂದಲೇ ಪ್ರತಿಭಾವಂತ ವಿದ್ಯಾರ್ಥಿ ಮತ್ತು ಸಹಜವಾಗಿ

ಕೆಲವು ಮಕ್ಕಳಲ್ಲಿ ಕಂಡುಬರುವ ಪ್ರತಿಭೆ ಮತ್ತು ಶ್ರದ್ಧೆ ಅವರಲ್ಲಿ ಅಂತರ್ಗತವಾಗಿತ್ತು.

ಅಂಬೇಡ್ಕರ್ ಕೇವಲ ಭಾರತೀಯ ಸಮಾಜದ ಬಗ್ಗೆ ಮಾತ್ರ ಅಧ್ಯಯನ ಮಾಡಲಿಲ್ಲ. ಇಲ್ಲಿನ ವೇದಾಧ್ಯಯನ, ಮನುಸ್ಮೃತಿಗಳು ಮಾತ್ರ ಓದಿನ ವಿಷಯಗಳಾಗಿರಲಿಲ್ಲ. ಪಾಶ್ಚಾತ್ಯ ಸಂಸ್ಕೃತಿಗಳನ್ನು ಅವರದೇ ನೆಲದಲ್ಲಿ ಓದಿ ಡಾಕ್ಟರೇಟ್ ಮೀರಿದ ಅಧ್ಯಯನ ಮಾಡಿದರು. ನಮ್ಮ ಸಂಸ್ಕೃತಿಗೆ ಭಿನ್ನ ಸಂಸ್ಕೃತಿಯ ಅಧ್ಯಯನ ಅವರಲ್ಲಿ ಉಂಟುಮಾಡಿರುವ ಮಾನಸಿಕ ಘರ್ಷಣೆಯನ್ನು ಊಹಿಸುವುದು ಕಷ್ಟ.

ಓದು ಅಧ್ಯಯನ ಮಾತ್ರವಲ್ಲದೆ ವಿಶಾಲ ಅರಿವಿನ ಮನಸ್ಥಿತಿ ಮತ್ತು ಅದನ್ನು ಪ್ರಕಟಿಸಲು ಸಾರ್ವಜನಿಕ ಜೀವನದ ಪ್ರವೇಶವೂ ಅವರ ಬದುಕಿನಲ್ಲಾದ ಮಹತ್ವದ ಘಟನೆ. ಏಕೆಂದರೆ ಒಬ್ಬ ಪ್ರತಿಭಾವಂತ ವ್ಯಕ್ತಿ ಆ ಪ್ರತಿಭೆಯನ್ನು ತನ್ನ ಔನತ್ಯಕ್ಕೆ ಮಾತ್ರ ಬಳಸುವ ಸಾಧ್ಯತೆಯೇ ಹೆಚ್ಚು. ಸಾರ್ವಜನಿಕ ಜೀವನ ಸ್ವಲ್ಪ ತಲೆನೋವಿನ ಕೆಲಸ.

ಐತಿಹಾಸಿಕ ಅದೃಷ್ಟವೂ ಅವರ ಪಾಲಿಗೆ ಒದಗಿ ಬಂದಿತು. ಈ ಜಗತ್ತು ಕಂಡ ಕೆಲವೇ ಶ್ರೇಷ್ಠ ಮಾನವ ಪ್ರಾಣಿಗಳಲ್ಲಿ ಒಬ್ಬರಾದ ಮಹಾತ್ಮ ಗಾಂಧಿಯವರ ಸಮಕಾಲೀನತೆ, ಒಡನಾಟ, ತೀವ್ರ ಚರ್ಚೆ, ವಿರೋಧ ಎಲ್ಲವನ್ನೂ ಅನುಭವಿಸುವ ಅವಕಾಶ ಬಾಬಾ ಸಾಹೇಬರಿಗೆ ಸಿಕ್ಕಿತು. ಶೋಷಿತ ಸ್ವಾತಂತ್ರ್ಯ ಮತ್ತು ಭಾರತ ದೇಶದ ಸ್ವಾತಂತ್ರ್ಯ ಎಂಬ ಎರಡು ಬೃಹತ್ ಹೋರಾಟಗಳ ಸಮಯದಲ್ಲಿ ತಮ್ಮ ಚಿಂತನೆಗಳನ್ನು ರೂಪಿಸಿಕೊಳ್ಳುವ ಸುವರ್ಣಾವಕಾಶ ಅವರ ಪಾಲಿಗೆ ದೊರೆಯಿತು. ಅಲ್ಲದೆ ಗಾಂಧಿ ಎಂಬ ಮಹಾತ್ಮ (ಅಂಬೇಡ್ಕರ್ ಅವರನ್ನು ಮಹಾತ್ಮ ಎಂದು ಒಪ್ಪಿಕೊಳ್ಳಲಿಲ್ಲ. ಅದು ಅವರ ಅಭಿಪ್ರಾಯ ಮತ್ತು ಸ್ವಾತಂತ್ರ್ಯ) ಅಂಬೇಡ್ಕರ್ ಅವರನ್ನು ಯಾವ ಕಾರಣದಿಂದಲೂ ನಿರ್ಲಕ್ಷಿಸದೆ ಅವರೊಂದಿಗೆ ಕೆಲವು ವಿಷಯಗಳಲ್ಲಿ ವಿರೋಧ ಇದ್ದರೂ ಅವರಿಗೆ ಹೆಚ್ಚಿನ ಮಹತ್ವ ನೀಡಿದರು. ಆಗಿನ ಕಾಲಕ್ಕೆ ಅಂಬೇಡ್ಕರ್ ಅವರನ್ನು ಸ್ವಲ್ಪ ಮಟ್ಟಿಗೆ ನಿರ್ಲಕ್ಷಿಸಬಹುದಾದಷ್ಟು ದೈತ್ಯ ಶಕ್ತಿ ಗಾಂಧಿಗೆ ಇದ್ದರೂ ಪೂನಾ ಒಪ್ಪಂದದ ಸಮಯದಲ್ಲಿ ಅಂಬೇಡ್ಕರ್ ಅವರನ್ನು ಒಪ್ಪಿಸಲು ಸ್ವತಃ ಉಪವಾಸ ಮಾಡಿದರು ಎಂದರೆ ಅವರಿಗೆ ಅಂಬೇಡ್ಕರ್ ಅವರ ಪ್ರತಿಭೆ ಮತ್ತು ಸಂಘಟನಾ ಶಕ್ತಿಯ ಬಗ್ಗೆ ಬಹುದೊಡ್ಡ ಗೌರವವಿತ್ತು ಎನಿಸುತ್ತದೆ.

ವಿಶ್ವದ ಆಧ್ಯಾತ್ಮಿಕ ತವರೂರು ಎಂದು ಕರೆಯಲಾಗುವ, ಅಸ್ಪೃಶ್ಯತೆ ಎಂಬ ಕೆಟ್ಟ ಕೊಳಕ ಸಾಮಾಜಿಕ ವ್ಯವಸ್ಥೆ ಹೊಂದಿದ್ದ ಭಾರತದ ಸಂವಿಧಾನ ರಚಿಸುವ ನೇತೃತ್ವ ವಹಿಸುವ ಅವಕಾಶ ಅದೇ ಜನಾಂಗದ ಒಬ್ಬ ವ್ಯಕ್ತಿಗೆ 1945/46 ರ ಆಸುಪಾಸಿನಲ್ಲಿ ದೊರೆಯಿತು ಎಂಬುದು ಈಗಲೂ ನಂಬಲಾಸಾಧ್ಯ ಎನಿಸುತ್ತದೆ ಮತ್ತು ಅಂಬೇಡ್ಕರ್ ದೈತ್ಯ ಶಕ್ತಿಯ ಅರಿವಾಗುತ್ತದೆ.

ಇದು ಅಂಬೇಡ್ಕರ್ ಅವರ ಜ್ಞಾನದ ಅಗಾಧತೆಯನ್ನು ತೋರಿಸುತ್ತದೆ ಮತ್ತು ಅವರು ಕರಡು ಸಮಿತಿಯ ಅಧ್ಯಕ್ಷರಾಗಲು ಇದ್ದ ಅರ್ಹತೆ ಮಾತ್ರ. ಅದು ಅವರ ವೈಯಕ್ತಿಕ ಸಾಮರ್ಥ್ಯ. ಈಗ ಸಂವಿಧಾನದಲ್ಲಿ ಅವರು ನಮಗೆ ನೀಡಿರುವ ಹಕ್ಕುಗಳು ನಾವು ಹೇಗೆ ಅರ್ಥೈಸಿಕೊಳ್ಳಬೇಕು............

ಮನುಸ್ಮೃತಿಗಳ ಆಧಾರದ ಮೇಲೆ ನಿರ್ಮಾಣವಾಗಿದ್ದು ಭಾರತೀಯ ಸಮಾಜ. ಅಲ್ಲಿ ಮಹಿಳೆಯರಿಗೆ ಗೌರವ ನೀಡಲಾಗಿತ್ತು ನಿಜ. ಆದರೆ ಅದು ಅಧಿಕಾರಯುತ, ಷರತ್ತು ಬದ್ಧ ಮತ್ತು ನಿಯಂತ್ರಿತವಾಗಿತ್ತು. ಸ್ವಾತಂತ್ರ್ಯ ಮತ್ತು ಸಮಾನತೆ ಇರಲೇ ಇಲ್ಲ. ಮುಸ್ಲಿಂ ದಾಳಿಕೋರರ ನಂತರ ಅದು ಮತ್ತಷ್ಟು ಕಠಿಣವಾಯಿತು. ಬ್ರಿಟಿಷರ ಕಾಲದಲ್ಲಿ ಒಂದು ಚೂರು ಸಡಿಲವಾಯಿತು. ಅಂಬೇಡ್ಕರ್ ಅವರಲ್ಲದೆ ಬೇರೆ ಯಾರೇ ಸಂವಿಧಾನ ರಚಿಸುವ ಅಧಿಕಾರ ಪಡೆದಿದ್ದರೆ ಖಂಡಿತ ನಾವು ನಮ್ಮ ಹೆಣ್ಣು ಮಕ್ಕಳ ಈ ರೀತಿಯ ಸ್ವಾತಂತ್ರ್ಯ ಸಮಾನತೆ ಮತ್ತು ಅಭಿವೃದ್ಧಿ ಕಾಣುವುದು ಸಾಧ್ಯವಿರಲಿಲ್ಲ ಮತ್ತು ಅದಕ್ಕಾಗಿ ಇನ್ನೂ ಅನೇಕ ವರ್ಷಗಳ ಹೋರಾಟ ಮಾಡಬೇಕಾಗಿತ್ತು. ಅದನ್ನು ಕಾನೂನಿನ ಮೂಲಕ ಒದಗಿಸಿಕೊಟ್ಟ ಅಂಬೇಡ್ಕರ್ ಅವರಿಗೆ ಎಲ್ಲಾ ಜಾತಿ ಸಮುದಾಯಗಳ ಹೆಣ್ಣು ಮಕ್ಕಳು ಕೃತಜ್ಞರಾಗಿರಬೇಕು. ಇಂದಿನ

ಭಾರತದ ಧಾರ್ಮಿಕ ವೈವಿಧ್ಯತೆಯನ್ನು ಕಾಪಾಡಲು ಭಾರತದ್ದೇ ವಿಶಿಷ್ಟ ಧಾರ್ಮಿಕ ಸ್ವಾತಂತ್ರ್ಯದ ಅಂಶಗಳನ್ನು ಸೇರಿಸಿದ್ದಕ್ಕಾಗಿ ಎಲ್ಲಾ ಧಾರ್ಮಿಕ ನಾಯಕರು ಅವರಿಗೆ ಋಣಿಯಾಗಿರಬೇಕು.





ರಾಜಕೀಯ ವ್ಯವಸ್ಥೆ ಹೇಗೇ ಇರಲಿ ಹೆಣ್ಣು ಮಕ್ಕಳ ಕನಿಷ್ಠ ನೆಮ್ಮದಿಯ ಬದುಕಿಗೆ ನಿಜವಾದ ಅಡಿಪಾಯ ಹಾಕಿದವರು ಬಾಬಾ ಸಾಹೇಬ್. ಪಾಶ್ಚಾತ್ಯ ನಾಗರಿಕತೆಯ ಅಧ್ಯಯನ ಅದಕ್ಕೆ ಕಾರಣ.

ಇದೇ ಅಂಶಗಳು ಎಲ್ಲಾ ವರ್ಗದ ಕಾರ್ಮಿಕರಿಗೂ ಅನ್ವಯಿಸುತ್ತದೆ. ಕೈಗಾರಿಕಾ ಕ್ರಾಂತಿಯ ವಿಷಯಗಳು, ಮಾರ್ಕ್ಸ್ ಸಿದ್ದಾಂತಗಳನ್ನು ಅಧ್ಯಯನ ಮಾಡಿದ ಕಾರಣದಿಂದಾಗಿಯೇ ಕಾರ್ಮಿಕ ಕಾನೂನುಗಳು ಸಂವಿಧಾನದಲ್ಲಿ ಅಡಕವಾಗಲು ಸಾಧ್ಯವಾಯಿತು. ಮಾರ್ಕ್ಸ್ ಓದದ ಯಾರಿಗೂ ಈ ರೀತಿಯ ಕಾನೂನು ಮಾಡಲು ಸಾಧ್ಯವೇ ಇಲ್ಲ. ದಿನಕ್ಕೆ ಎಂಟು ಗಂಟೆಗಳ ಕೆಲಸ ಮತ್ತು ವಾರದ ರಜಾ ಕಾರ್ಲ್ ಮಾರ್ಕ್ಸ್ ಪ್ರೇರಿತ ಎಂಬುದು ಸ್ಪಷ್ಟ. ಬಂಡವಾಳಶಾಹಿ ವ್ಯವಸ್ಥೆ ಕಾರ್ಮಿಕರನ್ನು ಹೀನಾಯವಾಗಿ ದುಡಿಸಿಕೊಳ್ಳಲು ಇದ್ದ ಅನಿಯಮಿತ ಅಧಿಕಾರಕ್ಕೆ ಮಿತಿ ಹೇರಿದೆ ನಮ್ಮ ಕಾನೂನುಗಳು.

ಅತಿ ಮುಖ್ಯವಾಗಿ ಸಾಮಾನ್ಯ ಜನರು ಗಮನಹರಿಸಬೇಕಾದ ವಿಷಯ ಅಂಬೇಡ್ಕರ್ ಕೇವಲ ತಾವು ಅನುಭವಿಸಿದ ಜಾತಿ ದೌರ್ಜನ್ಯದ ಬಗ್ಗೆ ಮಾತ್ರ ಒತ್ತುಕೊಡಲಲ್ಲಿ. ಈ ಸಮಾಜದಲ್ಲಿ ಬೆಳೆದು ಬಂದಿದ್ದ ಆರ್ಥಿಕ ಮತ್ತು ಧಾರ್ಮಿಕ ದೌರ್ಜನ್ಯವೂ ಅವರ ವಿಶಾಲ ಹೃದಯದಲ್ಲಿ ಜಾಗ ಪಡೆಯಿತು. ಶ್ರೀಮಂತರು ಬಡವರನ್ನು ಶೋಷಿಸಬಹುದು ಎಂಬ ಕಾರಣದಿಂದಾಗಿಯೇ ನಾಗರಿಕ ಹಕ್ಕುಗಳು ಮತ್ತು ಅಪರಾಧ ಸಂಹಿತೆಯಲ್ಲಿ ಕಾನೂನಾತ್ಮಕ ಹೋರಾಟ ಮಾಡಲು ಅಸಹಾಯಕರಿಗೂ ಅವಕಾಶ ಕಲ್ಪಿಸುವ ನ್ಯಾಯಾಂಗದ ಕೆಲವು ಸೂಕ್ಷ್ಮ ಅಂಶಗಳನ್ನು ಸೇರಿಸಿದರು. ಬಹುಶಃ ಯಾರಾದರೂ ವಕೀಲರು ಅದರ ತಾಂತ್ರಿಕ ಅಂಶಗಳನ್ನು ಇನ್ನಷ್ಟು ಕೂಲಂಕಷವಾಗಿ ಹೇಳಬಹುದು.

ಭಾರತದ ಧಾರ್ಮಿಕ ವೈವಿಧ್ಯತೆಯನ್ನು ಕಾಪಾಡಲು ಭಾರತದ್ದೇ ವಿಶಿಷ್ಟ ಧಾರ್ಮಿಕ ಸ್ವಾತಂತ್ರ್ಯದ ಅಂಶಗಳನ್ನು ಸೇರಿಸಿದ್ದಕ್ಕಾಗಿ ಎಲ್ಲಾ ಧಾರ್ಮಿಕ ನಾಯಕರು ಅವರಿಗೆ ಋಣಿಯಾಗಿರಬೇಕು. ಜಾತಿ ಮೀಸಲಾತಿಯ ಕಾರಣದಿಂದ ಮೇಲ್ವರ್ಗದವರಿಗೆ ಸ್ವಲ್ಪ ಅಸಮಾಧಾನ ಇರಬಹುದೇ ಹೊರತು ಅವರ ಮಾನವೀಯ ತುಡಿತ ಮತ್ತು ಸಮಾನತೆಯ ನಡೆಯ ಬಗ್ಗೆ ಮನುಷ್ಯರಾದವರಿಗೆ ಯಾವುದೇ ತಕರಾರು ಇರುವುದಿಲ್ಲ.

ಬಾಬಾ ಸಾಹೇಬರ ಮತ್ತೊಂದು ಹೆಗ್ಗಳಿಕೆ ಭಾರತೀಯ ಸಮಾಜದ ಮೂಲ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆ ಬಾರದಂತೆ ಸನಾತನ ಧರ್ಮದ ಮೌಲ್ಯಗಳನ್ನು ಗೌರವಿಸುತ್ತಾ ಕೇವಲ ಅದರಲ್ಲಿ ಇರಬಹುದಾದ ಕೆಟ್ಟ ಅಂಶಗಳನ್ನು ಮಾತ್ರ ಗುರುತಿಸಿ ಅದಕ್ಕೆ ತಿದ್ದುಪಡಿ ತಂದು ಅನೇಕ ಅಂಶಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಮೇಲ್ವರ್ಗದ ಮೇಲೆ ಯಾವುದೇ ಸೇಡಿನ ಕ್ರಮದ ಲವಲೇಷವೂ ಅದರಲ್ಲಿ ಕಾಣಬರುವುದಿಲ್ಲ. ಬದುಕಿನ ವಿವಿಧ ಹಂತಗಳಲ್ಲಿ ಸಾಕಷ್ಟು ಅಸಮಾನತೆಯ ನೋವು ಅವರಿಗೆ ಕಾಡಿದೆ. ಆದರೆ ಸಂವಿಧಾನ ಕರಡು ರಚಿಸುವ ಜವಾಬ್ದಾರಿ ದೊರೆತಾಗ ಅದು ತಮ್ಮ ಮನಸ್ಸಿನಲ್ಲಿ ಸುಳಿಯದಂತೆ ನೋಡಿ ಕೊಂಡಿದ್ದಾರೆ. ಈಗಲೂ ಭಾರತ ಬಹುಸಂಖ್ಯಾತರು ಸಂವಿಧಾನದ ಅಡಿಯಲ್ಲಿ ಹಿಂದೂ ಸಂಸ್ಕೃತಿಯ ಜೀವನ ಶೈಲಿಯನ್ನೇ ಅಳವಡಿಸಿಕೊಂಡಿದ್ದಾರೆ.

ಕಾಲದ ಸಂಘರ್ಷದಲ್ಲಿ ಒಂದಷ್ಟು ಬದಲಾವಣೆಯ ಅವಶ್ಯಕತೆ ಇರಬಹುದು. ಸ್ವತಃ ಅಂಬೇಡ್ಕರ್ ಹೇಳುವಂತೆ ನೀತಿ ನಿಯಮಗಳ ನಿಜವಾದ ಯಶಸ್ಸು ಅದನ್ನು ಜಾರಿಗೊಳಿಸುವವರ ಪ್ರಾಮಾಣಿಕತೆಯ ಮೇಲೆ ಅವಲಂಬಿಸಿರುತ್ತದೆ. ಸುಮಾರು 75 ವರ್ಷಗಳ ನಂತರ ತಿರುಗಿ ನೋಡಿದಾಗ ಭಾರತದ ಏಕತೆ, ವೈವಿಧ್ಯತೆ ಮತ್ತು ಸಮಗ್ರತೆಯ ಬಗ್ಗೆ ಹೆಮ್ಮೆ ಮೂಡುತ್ತದೆ. ಅದಕ್ಕೆ ಸಂವಿಧಾನದ ಮೂಲ ಸ್ವರೂಪ ಮತ್ತು ಬಾಬಾ ಸಾಹೇಬರ ಅಧ್ಯಯನ, ಚಿಂತನೆ, ದೂರದೃಷ್ಟಿ ಮತ್ತು ವಿಶಾಲ ಮನಸ್ಥಿತಿ ಕಾರಣ.

ಮೊದಲು ಹೇಳಿದ್ದನ್ನೇ ಮತ್ತೆ ನೆನಪಿಸುತ್ತೇನೆ. ಬಾಬಾ ಸಾಹೇಬ್ ಅವರಲ್ಲದೆ ಬೇರೆಯವರು ನಮ್ಮ ಸಂವಿಧಾನ ರಚಿಸಿದ್ದರೆ ಭಾರತ ಹೇಗಿರುತ್ತಿತ್ತು ಊಹಿಸಿ ನೋಡಿ. ಬಹುಶಃ ಈಗಿನಷ್ಟು ಸಾಮಾಜಿಕ ನೆಮ್ಮದಿ ಸಿಗುತ್ತಿರಲಿಲ್ಲ. ಆದ್ದರಿಂದ ಅಂಬೇಡ್ಕರ್ ಎಲ್ಲಾ ಭಾರತೀಯರು ಗೌರವಿಸಲೇ ಬೇಕಾದ ವ್ಯಕ್ತಿತ್ವ ಹೊಂದಿರುವವರು.

ಹಾಗೆಂದು ಸಂಪೂರ್ಣ ತೃಪ್ತಿ ಇದೆಯೇ ?

ಖಂಡಿತ ಇಲ್ಲ. ನಮ್ಮ ರಾಜಕೀಯ ಆಡಳಿತ ವ್ಯವಸ್ಥೆ ಭ್ರಷ್ಟಗೊಂಡಿದೆ. ನ್ಯಾಯ ಬಹುತೇಕ ಉಳ್ಳವರ ಪಾಲಾಗುತ್ತಿದೆ. ಅನೇಕ ವರ್ಗಗಳು ತಮ್ಮದೇ ಕಾರಣದಿಂದಾಗಿ ಅಸಮಾಧಾನ ಹೊಂದಿವೆ. ಕೆಲವು ಕಾನೂನುಗಳು ದುರುಪಯೋಗವಾಗುತ್ತಿದೆ. ಅದಕ್ಕೆ ಮೂಲ ಕಾರಣ ಮಾನವೀಯ ಮೌಲ್ಯಗಳ ಕುಸಿತ. ಅದನ್ನು ಮತ್ತೆ ನಾವು ಹಳಿಗೆ ತಂದರೆ ಮುಂದಿನ ದಿನಗಳು ನಮ್ಮ ಪಾಲಿಗೆ ಶಾಂತಿ ನೆಮ್ಮದಿ ಮೂಡಿಸುತ್ತದೆ. ಈಗ ನಮ್ಮೆಲ್ಲರ ಆದ್ಯತೆ ಮಾನವೀಯ ಮೌಲ್ಯಗಳ ಪುನರುಜ್ಜೀವನ.......

■

– ಡಾ.ಎನ್. ಜಗದೀಶ್ ಕೊಪ್ಪ



ಮಹಾತ್ಮ ಗಾಂಧೀಜಿಯವರ ಮಾನಸಪುತ್ರ

ರಾಮ್ ಮನೋಹರ್ ಲೋಹಿಯಾ

ಗಾಂಧಿಯವರಂತೆಯೇ, ಲೋಹಿಯಾ ಕೂಡ ಆದರ್ಶವಾದಕ್ಕೆ ನಿಷ್ಠರಾಗಿದ್ದರು. ಆ ಸಮಯದಲ್ಲಿ ನಲವತ್ತು ವರ್ಷದ ಯುವಕ ಲೋಹಿಯಾ ಅವರು ಗಾಂಧಿವಾದಿ ಸಿದ್ಧಾಂತವನ್ನು ಆಧುನೀಕರಿಸಲು ಮತ್ತು ಬದಲಾಗುತ್ತಿರುವ ಕಾಲಕ್ಕೆ ಅನುಗುಣವಾಗಿ ಭಾರತೀಯ ಜನರ ಆರ್ಥಿಕ ಮತ್ತು ಆಧ್ಯಾತ್ಮಿಕ ಕಾಳಜಿಗಳನ್ನು ಮುನ್ನಡೆಸಲು ಸಿದ್ಧರಾಗಿದ್ದರು. 1946 ರ ಮಧ್ಯಭಾಗದಿಂದ ಗಾಂಧಿ ಮತ್ತು ಲೋಹಿಯಾ ಅವರನ್ನು ಇನ್ನಷ್ಟು ಹತ್ತಿರಕ್ಕೆ ತಂದ ಹೊಸ ಕಟುವಾದ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು.

ಗಾಂಧೀಜಿ ಮತ್ತು ಡಾ. ಲೋಹಿಯಾ ಅವರ ಸಂಬಂಧ ಗುರು ಹಾಗೂ ಶಿಷ್ಯನ ಸಂಬಂಧ ಮಾತ್ರವಾಗಿರದೆ ತಂದೆ ಮತ್ತು ಮಗನ ಸಂಬಂಧವಾಗಿತ್ತು. ಶಿಷ್ಯನ ಬೌದ್ಧಿಕ ಪ್ರಾಮಾಣಿಕತೆ, ದೃಷ್ಟಿಕೋನ ಮತ್ತು ಸ್ವಭಾವವನ್ನು ಮನಗಂಡ ಗುರು ; ಶಿಷ್ಯನ ಮಾರ್ಗಗಳನ್ನು ಸರಿಪಡಿಸುತ್ತಾ, ಅವನ ಬೌದ್ಧಿಕ ಅಜಾಗರೂಕತೆಗಾಗಿ ಖಂಡಿಸುತ್ತಾ, ಮತ್ತು ಸಾಂದರ್ಭಿಕವಾಗಿ ಆತನ ಸಣ್ಣ ಪುಟ್ಟ ಉದ್ವೇಗದ ನಡವಳಿಕೆಗಳನ್ನು ಕ್ಷಮಿಸುವ ಔದಾರ್ಯ ಗುರುವಿನಲ್ಲಿತ್ತು. ಕಾಲಾನಂತರದಲ್ಲಿ, ಅವರಿಬ್ಬರೂ ಪರಸ್ಪರ ತಿಳಿವಳಿಕೆಗಳನ್ನು ಎರವಲು ಪಡೆಯಲು ಹಿಂಜರಿಯುವುದಿಲ್ಲ ಮತ್ತು ಪರಸ್ಪರ ಸಂಬಂಧದಲ್ಲಿ ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ತಮ್ಮನ್ನು ಶ್ರೀಮಂತಗೊಳಿಸಿಕೊಂಡರು. ಗಾಂಧೀಜಿ ಅವರಿಗೆ ಅನೇಕ ನೆಚ್ಚಿನ ಶಿಷ್ಯರಿದ್ದರು. ವಿನೋಬಾ ಭಾವೆ, ಮಹಾದೇವ್ ದೇಸಾಯಿ, ಜವಾಹರಲಾಲ್ ನೆಹರು, ಚಿತ್ತರಂಜನ್ ದಾಸ್, ವಲ್ಲಭಭಾಯಿಪಟೇಲ್, ಆದರೆ, ರಾಮ ಮನೋಹರ ಲೋಹಿಯಾ ನಿಜವಾಗಿಯೂ ಗಾಂಧೀಜಿಯವರ ಹೃದಯವನ್ನು ಗೆದ್ದಿದ್ದರು. ಅವರ ಮಾನಸ ಪುತ್ರರಂತೆ ಇದ್ದರು .

ಬ್ರಿಟಿಷ್ ಆಳ್ವಿಕೆಯಿಂದ ಭಾರತವನ್ನು ಮುಕ್ತಗೊಳಿಸುವ ಕಾರ್ಯದಿಂದ ಗಾಂಧಿಯವರಿಂದ ಪ್ರೇರಿತರಾಗಿ ಸಾರ್ವಜನಿಕ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟ ಸಾವಿರಾರು ಭಾರತೀಯರಲ್ಲಿ ಲೋಹಿಯಾ ಕೂಡಾ ಒಬ್ಬರು. ಅವರೇ ಒಪ್ಪಿಕೊಂಡಂತೆ ಸಂಪೂರ್ಣವಾಗಿ ಗಾಂಧಿಯವರಿಂದ ಲೋಹಿಯಾ ಪ್ರೇರಿತರಾಗಿದ್ದರು. ಗಾಂಧೀಜಿ ಮತ್ತು ಲೋಹಿಯಾ ನಡುವಿನ ವೈಯಕ್ತಿಕ ಸಂಬಂಧವು ಭಾವನಾತ್ಮಕತೆಯನ್ನು ಮೀರಿದ ಅನನ್ಯ ಸಂಬಂಧವಾಗಿತ್ತು. ದೇಶದ ಸಾಮಾಜಿಕ ಹಾಗೂ ರಾಜಕೀಯ ಉನ್ನತಿಗಾಗಿ ಇಬ್ಬರೂ ವಿಭಿನ್ನವಾಗಿ ಹೋರಾಡಿದರು. ಅವರಿಬ್ಬರ ಸಂಬಂಧ ಸಹಯೋಗ, ಪರಸ್ಪರ ಗೌರವ ಮತ್ತು ಕೆಲವೊಮ್ಮೆ ವೈಚಾರಿಕ ಭಿನ್ನಾಭಿಪ್ರಾಯಗಳ ಮಿಶ್ರಣವಾಗಿತ್ತು. ಗಾಂಧೀಜಿ ಭಾರತೀಯ ಸ್ವಾತಂತ್ರ್ಯ ಚಳವಳಿಯ ಪ್ರಮುಖ

ನಾಯಕರಾಗಿದ್ದ ಕಾರಣದಿಂದಾಗಿ ಅವರ ಅಹಿಂಸಾತ್ಮಕ ತತ್ವಗಳು ದೇಶಾದ್ಯಂತ ಹರಡಿದ್ದವು. ರಾಮಮನೋಹರ ಲೋಹಿಯಾ ಯುವ ಸಮಾಜವಾದಿ ನಾಯಕರಾಗಿ, ಗಾಂಧೀಜಿಯಿಂದ ಪ್ರಭಾವಿತರಾಗಿದ್ದರು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿದ್ದರು. ಲೋಹಿಯಾ 1930ರ ಉಪ್ಪಿನ ಸತ್ಯಾಗ್ರಹದಂತ ಗಾಂಧೀಜಿಯ ಚಳವಳಿಗಳಲ್ಲಿ ತೊಡಗಿಸಿಕೊಂಡಿದ್ದರು .

ಗಾಂಧೀಜಿ ಮತ್ತು ಲೋಹಿಯಾ ನಡುವೆ ಕೆಲವು ವೈಚಾರಿಕ ಭಿನ್ನಾಭಿಪ್ರಾಯಗಳೂ ಸಹ ಇದ್ದವು. ಗಾಂಧೀಜಿಯವರು ಅಹಿಂಸೆ ಮತ್ತು ಗ್ರಾಮೀಣ ಸ್ವಾವಲಂಬನೆಯ ಮೇಲೆ ಒತ್ತು ನೀಡಿದರೆ, ಲೋಹಿಯಾ ಅವರು ಸಮಾಜವಾದಿ ಆದರ್ಶಗಳನ್ನು ಒತ್ತಾಯಿಸಿ, ಆರ್ಥಿಕ ಸಮಾನತೆ ಮತ್ತು ತೀವ್ರವಾದ ಸಾಮಾಜಿಕ ಬದಲಾವಣೆಗೆ ಒತ್ತು ನೀಡಿದರು. ಲೋಹಿಯಾ ಕೆಲವೊಮ್ಮೆ ಗಾಂಧೀಜಿಯ ಕೆಲವು ನೀತಿಗಳನ್ನು ಟೀಕಿಸಿದರು . ಉದಾಹರಣೆಗೆ ಗಾಂಧೀಜಿಯ ಆರ್ಥಿಕಮಾದರಿಯನ್ನು ಅವು ಸಾಕಷ್ಟು ಆಧುನಿಕವಲ್ಲ ಎಂದು ಭಾವಿಸಿದ್ದರು. ಆದಾಗ್ಯೂ, ಈ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಲೋಹಿಯಾ ಗಾಂಧೀಜಿಯನ್ನು ಗೌರವಿಸುತ್ತಿದ್ದರು ಮತ್ತು ಅವರನ್ನು ಭಾರತದ ಸ್ವಾತಂತ್ರ್ಯ ಹೋರಾಟದ ಪಿತಾಮಹ ಎಂದು ಕರೆದರು.

1942ರ ಭಾರತ ಬಿಟ್ಟು ತೊಲಗಿ ಚಳವಳಿಯ ಸಮಯದಲ್ಲಿ ಲೋಹಿಯಾ ಗಾಂಧೀಜಿಯ ಜೊತೆಗೆ ಹತ್ತಿರದಿಂದ ಕೆಲಸ ಮಾಡಿದರು ಮತ್ತು ಚಳವಳಿಯನ್ನು ರಹಸ್ಯವಾಗಿ ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಗಾಂಧೀಜಿಯವರ ನಿಧನಾನಂತರವೂ ಸಹ ಲೋಹಿಯಾ ತಮ್ಮ ಸಮಾಜವಾದಿ ಚಿಂತನೆಗಳ ಮೂಲಕ ಗಾಂಧೀಜಿಯ ಆದರ್ಶಗಳನ್ನು ಒಂದು ರೀತಿಯಲ್ಲಿ ಮುಂದುವರಿಸಿದರು. ಆದರೆ ತಮ್ಮದೇ ಆದ ವಿಶಿಷ್ಟ ಮಾರ್ಗದಲ್ಲಿ ಮುನ್ನಡೆದರು. ಒಟ್ಟಾರೆಯಾಗಿ, ಅವರ ವಿಧಾನಗಳು ಮತ್ತು ಆದರ್ಶಗಳು ಕೆಲವೊಮ್ಮೆ ಭಿನ್ನವಾಗಿದ್ದರೂ ಸಹ, ಗಾಂಧೀಜಿ ಮತ್ತು ಲೋಹಿಯಾ ನಡುವಿನ ಸಂಬಂಧವು ಸಹಕಾರ ಮತ್ತು ಸಾಮಾನ್ಯ ಗುರಿಗಳಿಂದ ಕೂಡಿದ್ದವು ಎಂಬುದನ್ನು ನಾವು ಮರೆಯಲಾಗದು.

ಜರ್ಮನಿಯಲ್ಲಿನ ತಮ್ಮ ಅಧ್ಯಯನ ಮುಗಿಸಿ ಭಾರತಕ್ಕೆ ಹಿಂದಿರುಗಿದ ಡಾ .ರಾಮ ಮನೋಹರ ಲೋಹಿಯಾ ಅವರಿಗೆ, ಗಾಂಧೀಜಿಯವರ ಜೊತೆ ನೇರ ಸಂಪರ್ಕವು 1933 ರಲ್ಲಿ ಸ್ಥಾಪಿತವಾಯಿತು. ಗಾಂಧೀಜಿ ಮತ್ತು ಪಂಡಿತ್ ಮದನ್ ಮೋಹನ್ ಮಾಳವೀಯರ ನಡುವೆ ಒಂದು ಸಭೆ ನಡೆಯಿತು. ಲೋಹಿಯಾ ಅವರು ಜಯಪ್ರಕಾಶ ನಾರಾಯಣ ಅವರ ಪತ್ನಿ ಪ್ರಭಾವತಿ ದೇವಿಯವರ ಜೊತೆ ಸಭೆಗೆ ಹೋಗಿದ್ದಾಗ ಗಾಂಧೀಜಿಯವರಿಗೆ ಪರಿಚಯವಾದರು. ಗಾಂಧಿಜಿ ಮತ್ತು ಮಾಳವೀಯ ನಡುವಿನ ಮಾತುಕತೆಯ ಸಂದರ್ಭದಲ್ಲಿ ಭಾರತದ ಪ್ರಕರಣವನ್ನು ವಾದಿಸಲು ಇಂಗ್ಲೆಂಡ್‌ಗೆ ಕಾಂಗ್ರೆಸ್ ನಿಯೋಗವನ್ನು ಕಳುಹಿಸುವ ಪ್ರಶ್ನೆಗೆ ಮಾಳವೀಯರಿಗೆ ಗಾಂಧೀಜಿಯವರು ನೀಡಿದ ಪ್ರತಿಕ್ರಿಯೆಯಿಂದ ಲೋಹಿಯಾ ಪ್ರಭಾವಿತರಾದರು. ಗಾಂಧೀಜಿಯವರು ಈ ವಿಷಯದ ಕುರಿತಾಗಿ "ಬಹಳ ಶಾಂತ ಮನಸ್ಥಿತಿಯಲ್ಲಿ ಮನವೊಲಿಸುವ ಹಾಗೂ ಆದರೆ ಅತ್ಯಂತ ದೃಢವಾದ ಧ್ವನಿಯಲ್ಲಿ ತಮ್ಮ ಪ್ರತಿಕ್ರಿಯೆಯನ್ನು ನೀಡಿದ್ದರು.

ಲೋಹಿಯಾ ಅವರ ಜೀವನದುದ್ದಕ್ಕೂ ಅವರು ಬಳಸುತ್ತಿದ್ದ ಭಾಷೆ ತುಂಬಾ ತೀಕ್ಷ್ಣವಾಗಿತ್ತು. ಅವರು ತಮ್ಮ ಸಹೋದ್ಯೋಗಿಗಳ ಮೇಲೆ ದಾಳಿ ಮಾಡುವಾಗ, ಉಳಿದವರ ಭಾವನೆಗಳ ಬಗ್ಗೆ ಕಾಳಜಿ ವಹಿಸುತ್ತಿರಲಿಲ್ಲ. ಚುಚ್ಚುವ ಮಾತುಗಳಿಂದಾಗಿ ಲೋಹಿಯಾ ಅವರು ಅನೇಕ ಶತ್ರುಗಳನ್ನು ಸೃಷ್ಟಿ ಮಾಡಿಕೊಂಡರು. ಲೋಹಿಯಾ ಅವರು ಗಾಂಧೀಜಿಯವರ ರೀತಿಯಲ್ಲಿ ಚರ್ಚಾ ವಿಧಾನವನ್ನು ಅಳವಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಎದುರಾಳಿಯ ಬಗ್ಗೆ ನಾವು ಹೊಂದುವ ಸೌಹಾರ್ದಯುತ ಭಾವನೆಗಳು ದೌರ್ಬಲ್ಯದ ಸೂಚನೆಯಲ್ಲ ಎಂದು ಗಾಂಧೀಜಿ ನಂಬಿದ್ದರು. ಆದರೆ, ಮಹಾತ್ಮನ ಮಾನಸ ಪುತ್ರನಂತೆ ಇದ್ದ ಲೋಹಿಯಾ ಅವರು ತಮ್ಮ ಮಾನಸ ತಂದೆ ಮತ್ತು ಗುರುವಿನ ಸೌಮ್ಯ ಮತ್ತು ನಿಯಂತ್ರಿತ ಭಾಷೆಯ ಯಾವುದೇ ಗುಣಗಳನ್ನು ಹೊಂದಿರಲಿಲ್ಲ. ಗಾಂಧೀಜಿಯವರೊಂದಿಗೂ ಸಹ, ಲೋಹಿಯಾ ಅವರು ಮಾತನಾಡುವಾಗ ತೀಕ್ಷ್ಣವಾದ ಭಾಷೆಯನ್ನು ಬಳಸುತ್ತಿದ್ದರು .

ಲೋಹಿಯಾ ಅವರನ್ನು ಗಾಂಧಿಯವರಿಗೆ ಅವರ ಆಪ್ತ ಮಿತ್ರರು ಹಾಗೂ ಅನುಯಾಯಿಯಾಗಿದ್ದ ಜಮ್ನಾಲಾಲ್ ಬಜಾಜ್ ಅವರು ಪರಿಚಯಿಸಿದರು . ಲೋಹಿಯಾ ಅವರು ವಾಸ್ತವವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನೇತೃತ್ವದ ರಾಜಕೀಯಕ್ಕೆ ಸೇರಲು ಬಯಸಿದ್ದರು. ಲೋಹಿಯಾ ಅವರಿಗೆ ಗಾಂಧಿಯವರ ರಾಜಕೀಯದ ಬಗ್ಗೆ ಚೆನ್ನಾಗಿ ತಿಳಿದಿತ್ತು ಮತ್ತು ಅವರು "ಉಪ್ಪಿನ ತೆರಿಗೆ ಮತ್ತು ಸತ್ಯಾಗ್ರಹ"ದ ಕುರಿತು ತಮ್ಮ ಡಾಕ್ಟರೇಟ್ ಪ್ರಬಂಧವನ್ನು ಬರೆದಿದ್ದರು. . ಡಾ. ಲೋಹಿಯಾ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಉನ್ನತ ಮಟ್ಟದಲ್ಲಿ ಸದಸ್ಯರನ್ನಾಗಿ ಸೇರಿಸಿಕೊಳ್ಳುವಲ್ಲಿ ಗಾಂಧೀಜಿ ಪ್ರಮುಖ ಪಾತ್ರವಹಿಸಿದರು. 1935 ರಲ್ಲಿ ನೆಹರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಅವರು ಲೋಹಿಯಾ ಅವರನ್ನು ಕಾಂಗ್ರೆಸ್‌ನ ವಿದೇಶಾಂಗ ವಿಭಾಗದ ಕಾರ್ಯದರ್ಶಿಯನ್ನಾಗಿ ನೇಮಿಸಿದರು.

ಕಾಂಗ್ರೆಸ್ ಸೇರಿದ ಅಲ್ಪ ಸಮಯದೊಳಗೆ, ಲೋಹಿಯಾ ಅವರು ಗಾಂಧೀಜಿ, ಕಾಂಗ್ರೆಸ್ ಪಕ್ಷಕ್ಕಿಂತ ಹೆಚ್ಚು ಶಕ್ತಿಶಾಲಿ ಎಂಬುದನ್ನು ಅರಿತುಕೊಂಡರು. ಆದಾಗ್ಯೂ, ಈ ಜ್ಞಾನವು ಲೋಹಿಯಾ ಅವರನ್ನು ಕಾಲಕಾಲಕ್ಕೆ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳ ಬಗ್ಗೆ ಗಾಂಧಿಯವರಿಗೆ ತಮ್ಮ ಅಭಿಪ್ರಾಯಗಳನ್ನು ಧೈರ್ಯದಿಂದ ವ್ಯಕ್ತಪಡಿಸುವುದನ್ನು ತಡೆಯಲಿಲ್ಲ. 1934 ರಿಂದ 1939 ರವರೆಗಿನ ಐದು ವರ್ಷಗಳಲ್ಲಿ, ಲೋಹಿಯಾ ಅವರ ಬೌದ್ಧಿಕಪ್ರಾಮಾಣಿಕತೆ, ರಾಜಕೀಯ ದೃಷ್ಟಿಕೋನ ಮತ್ತು ಅವರ ಸ್ವಂತನಾಯಕತ್ವದ ನಿಷ್ಠೆಯನ್ನು ಪರೀಕ್ಷಿಸಲು ಗಾಂಧೀಜಿಯವರಿಗೆ ಹಲವಾರು ಸಂದರ್ಭಗಳು ಒದಗಿ ಬಂದವು. ಲೋಹಿಯಾ ಅವರ ಯೌವನ ಮತ್ತು ಸಮಗ್ರತೆಯ ದೃಷ್ಟಿಕೋನ ಗಾಂಧಿಯವರನ್ನು ಹೆಚ್ಚು ಪ್ರಭಾವಿತಗೊಳಿಸಿತ್ತು 1936 –38ರ ಅವಧಿಯಲ್ಲಿ, ಲೋಹಿಯಾ ಹೊಸದಾಗಿ ಸ್ಥಾಪಿಸಲಾದ ಕಾಂಗ್ರೆಸ್ ಸಮಾಜವಾದಿ ಪಕ್ಷದ ಪರವಾಗಿ ಪತ್ರಿಕೆಯನ್ನು ಸಂಪಾದಿಸಿದರು. ಲೋಹಿಯಾ ಸಂಪಾದಕತ್ವದ ಪತ್ರಿಕೆಗೆ ಗಾಂಧೀಜಿಯವರು ನಿಯಮಿತವಾಗಿ ಲೇಖನ ಬರೆಯುತ್ತಿದ್ದರು ಮತ್ತು ಲೋಹಿಯಾ ಅವರ ಲೇಖನಗಳನ್ನು ತಮ್ಮದೇ ಆದ "ಹರಿಜನ"ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

ಯುದ್ಧ ವಿರೋಧಿ ಭಾಷಣ ಮಾಡಿದ್ದಕ್ಕಾಗಿ ಲೋಹಿಯಾ ಅವರ ಮೊದಲ ಜೈಲು ಶಿಕ್ಷೆಯ ಬಗ್ಗೆ ಸುದ್ದಿಯನ್ನು ತಿಳಿದಾಗ ಗಾಂಧಿಯವರು, "ಲೋಹಿಯಾ ಜೈಲಿನಲ್ಲಿ ಇರುವವರೆಗೂ ನಾನು ಸುಮ್ಮನಿರಲು ಸಾಧ್ಯವಿಲ್ಲ. ಅವರಿಗಿಂತ ಧೈರ್ಯಶಾಲಿ ಮತ್ತು ಸರಳ ವ್ಯಕ್ತಿ ಈ ದೇಶದಲ್ಲಿ ಬೇರೊಬ್ಬರಿಲ್ಲ" ಎಂದು ನುಡಿದಿದ್ದರು.

ಲೋಹಿಯಾ ಅವರು ಭೂಗತವಾಗಿ ಅಡಗಿಕೊಂಡಿದ್ದಾಗ ಮುಂಬೈನಲ್ಲಿ ಬ್ರಿಟಿಷರು ಅವರನ್ನು ಸೆರೆಹಿಡಿದು 1944–46ರಲ್ಲಿ ಎರಡು ವರ್ಷಗಳ ಕಾಲ ಲಾಹೋರ್ ಜೈಲಿನಲ್ಲಿ ಇಟ್ಟಿದ್ದರು. ಲೋಹಿಯಾ ಅವರಿಗೆ ಸೆರೆಮನೆಯಲ್ಲಿ ತೀವ್ರವಾಗಿ ಚಿತ್ರಹಿಂಸೆ ನೀಡಿದಾಗ ಗಾಂಧೀಜಿ ಬ್ರಿಟಿಷ್ ಸರ್ಕಾರಕ್ಕೆ ಪ್ರತಿಭಟನಾ ಪತ್ರ ಬರೆದರು. ಅಂತಿಮವಾಗಿ ಗಾಂಧಿಯವರ ಒತ್ತಡದ ಮೇರೆಗೆ ಬ್ರಿಟಿಷ್ ಸರ್ಕಾರವು ಲೋಹಿಯಾ ಅವರನ್ನು ಲಾಹೋರ್ ಜೈಲಿನಿಂದ ಬಿಡುಗಡೆ ಮಾಡಿತು.

ಬ್ರಿಟಿಷ್ ಆಳ್ವಿಕೆಯಿಂದ ಭಾರತಕ್ಕೆ ಸ್ವಾತಂತ್ರ್ಯ ದಕ್ಕಿಸಿಕೊಳ್ಳಲು ನೆಹರು ಮತ್ತು ಪಟೇಲ್ ಅವರು ಭಾರತದ ವಿಭಜನೆಗೆ ಒಪ್ಪಿಗೆ ನೀಡಿದ್ದರು. ಗಾಂಧಿ ಮತ್ತು ಕಾಂಗ್ರೆಸ್‌ನ ಇತರ ಹಲವಾರು ಪ್ರಮುಖ ನಾಯಕರು ಮತ್ತು ಸಮಾಜವಾದಿ ಪಕ್ಷದ ನಾಯಕರು ವಿಭಜನೆಯ ಪ್ರಸ್ತಾಪವನ್ನು ಸಂಪೂರ್ಣವಾಗಿ ವಿರೋಧಿಸಿದರು . ಆದರೆ, ನೆಹರು ಮತ್ತು ಪಟೇಲ್ ಇಬ್ಬರೂ ವಿಭಜನೆಗೆ ಒಪ್ಪಿಸುವ ವಿಚಾರದಲ್ಲಿ ಗಾಂಧಿಗೆ ಬೇರೆ ಪರ್ಯಾಯವಿಲ್ಲದ ಪರಿಸ್ಥಿತಿಯನ್ನು ಸೃಷ್ಟಿಸಿದರು.

ಭಾರತದ ಸ್ವಾತಂತ್ರ್ಯ ಮತ್ತು ವಿಭಜನೆಯ ದಿನಾಂಕವನ್ನು ಘೋಷಿಸುತ್ತಿದ್ದಂತೆ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ರಕ್ತಸಿಕ್ತ ಗಲಭೆಗಳು ಭುಗಿಲೆದ್ದವು. ವಿಶೇಷವಾಗಿ ಪೂರ್ವ ಮತ್ತು ಪಶ್ಚಿಮಬಂಗಾಳ, ಪಂಜಾಬ್ ಮತ್ತು ಭಾರತದ ಪ್ರಮುಖ ನಗರಗಳಲ್ಲಿ ಗಲಭೆಗಳು ತೀವ್ರವಾಗಿದ್ದವು. ದೇಶವನ್ನು ವಿಭಜಿಸಲು ನೆಹರೂ ಒಪ್ಪಿಗೆ ನೀಡಿದ್ದರಿಂದ ಲೋಹಿಯಾ ಅವರನ್ನು ನೆಹರೂ ಅವರಿಂದ ದೂರವಿಡಲಾಯಿತು. ದೇಶವನ್ನು ವಿಭಜಿಸುವ ದುರಂತ ನಿರ್ಧಾರದಿಂದ ಉಂಟಾದ ದುಃಖ, ಹತಾಶೆ ಮತ್ತು ಶೋಕದಿಂದ ಗುರುತಿಸಲ್ಪಟ್ಟ ಕಠಿಣವಾದ ಹಂತ ಇದಾಗಿತ್ತು. ಗಾಂಧಿಯವರು ಆ ಕಷ್ಟದ ಸಮಯದಲ್ಲಿ ತಮ್ಮ ಪಕ್ಕದಲ್ಲಿರಲು ಹಲವಾರು ಶಿಷ್ಯರಲ್ಲಿ ಲೋಹಿಯಾ ಅವರನ್ನು ಆಯ್ಕೆ ಮಾಡಿಕೊಂಡಿದ್ದರು. 1946 ರ ಜೂನ್‌ನಲ್ಲಿ ಪೋರ್ಚುಗೀಸ್ ಗುಲಾಮಗಿರಿಯಿಂದ ಗೋವಾವನ್ನು ಮುಕ್ತಗೊಳಿಸುವ ಜ್ವಾಲೆಯನ್ನು ಲೋಹಿಯಾ ಬೆಳಗಿಸಿದಾಗ ಗಾಂಧೀಜಿಯವರು ಹೃತ್ಪೂರ್ವಕವಾಗಿ ಅವರನ್ನು ಬೆಂಬಲಿಸಿದರು .

ಲೋಹಿಯಾ ಅವರ ಕ್ರಮವನ್ನು ಬೆಂಬಲಿಸುತ್ತಾ 1946 ಜೂನ್ 26 ರಂದು ಹರಿಜನ ಪತ್ರಿಕೆಯಲ್ಲಿ ಗಾಂಧಿ ಲೇಖನ ಬರೆದಿದ್ದರು. : "ಡಾ. ಲೋಹಿಯಾ ಗೋವಾದ ನಾಗರಿಕ ಸ್ವಾತಂತ್ರ್ಯಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಬ್ರಿಟಿಷ್ ಸರ್ಕಾರದ ದಯೆಯ ಮೇಲೆ ಮಾತ್ರ ಅಸ್ತಿತ್ವದಲ್ಲಿರುವ ಈ ಸಣ್ಣ ಪೋರ್ಚುಗೀಸ್ ವಸಾಹತು ತನ್ನ ಕೆಟ್ಟ ನಡವಳಿಕೆಯನ್ನು ಬಿಟ್ಟುಕೊಡಲು ಸಿದ್ಧವಿಲ್ಲ . ಪೋರ್ಚುಗೀಸ್ ಸರ್ಕಾರವು ಬ್ರಿಟಿಷ್ ಸರ್ಕಾರದ ನಡುವೆ ಇರುವ ಯಾವುದೇ ಒಪ್ಪಂದವನ್ನು ಅವಲಂಬಿಸುವ ಬದಲು ಕಾಲದಚಿಹ್ನೆಗಳನ್ನು ಗುರುತಿಸಿ ಅದರ ನಿವಾಸಿಗಳೊಂದಿಗೆ ಗೌರವಯುತ ಒಪ್ಪಂದಕ್ಕೆ ಬರಬೇಕೆಂದು ನಾನು ಸಲಹೆ ನೀಡುತ್ತೇನೆ. ಭಾರತದ ಇತರ ಭಾಗಗಳ ಜನರು ಪ್ರಬಲ ಬ್ರಿಟಿಷ್ ಸರ್ಕಾರದ ಭಯವನ್ನು ತೊರೆದಂತೆ ಗೋವಾದ ನಿವಾಸಿಗಳು ಪೋರ್ಚುಗೀಸ್ ಸರ್ಕಾರದ ಬಗ್ಗೆ ತಮ್ಮ ಭಯವನ್ನು ತ್ಯಜಿಸಬೇಕು."

ಗಾಂಧೀಜಿ ಮತ್ತು ಲೋಹಿಯಾ ಇಬ್ಬರೂ 1946 ರ ನವಂಬರ್ ನಂತರ ಬಹುತೇಕ ಒಟ್ಟಿಗೆ ಇದ್ದರು. ಕೊಲ್ಕತ್ತಾ ನಗರದಲ್ಲಿ, ಮುಸ್ಲಿಂಪ್ರದೇಶಗಳಿಗೆ ಪ್ರವೇಶಿಸಿ, ದಂಗೆಕೋರ ಸಮುದಾಯಗಳಲ್ಲಿ ದ್ವೇಷದಿಂದ ಕುದಿಯುತ್ತಿದ್ದ ಜನರನ್ನು ಸಮಾಧಾನ ಪಡಿಸುವಂತೆ ಗಾಂಧಿಯವರು ಲೋಹಿಯಾ ಅವರನ್ನು ಕೇಳಿಕೊಂಡರು. ಈ ಸಂದರ್ಭದಲ್ಲಿ ಲೋಹಿಯಾ ಅವರು ದೈನಂದಿನ ಮೇಲ್ವಿಚಾರಣೆಯಲ್ಲಿ ಸೇಡು ಮತ್ತು ಉದ್ದೇಶಪೂರ್ವಕ ವಿನಾಶದ ಭಾವನೆಗಳನ್ನು ಹೇಗೆ ಶಮನಗೊಳಿಸಬೇಕೆಂದು ಕಲಿತರು. ಲೋಹಿಯಾ ಅವರಿಗೆ ಚಾಲ್ತಿಯಲ್ಲಿರುವ ಕಠಿಣ ಪರಿಸ್ಥಿತಿಗಳಲ್ಲಿ ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಅಗತ್ಯವಾದ ಧೈರ್ಯ ಮತ್ತು ನಿರ್ಣಯವಿದೆ ಎಂದು ಗಾಂಧೀಜಿಗೆ ತಿಳಿದಿತ್ತು. ತೀವ್ರ ಗಲಭೆಗಳು ಭುಗಿಲೆದ್ದ ದೆಹಲಿಯಲ್ಲಿ ತಮ್ಮ ಶಾಂತಿ ಕಾರ್ಯದಲ್ಲಿ ತಮ್ಮ ಜೊತೆ ಇದ್ದು ಸಹಾಯಮಾಡುವಂತೆ ಗಾಂಧಿಯವರು ಲೋಹಿಯಾ ಅವರನ್ನು ಒತ್ತಾಯಿಸಿದರು. ಪಂಜಾಬ್‌ನಿಂದ ಸಾವಿರಾರು ನಿರಾಶ್ರಿತರು ಬಂದನಂತರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಲೋಹಿಯಾ ಅವರು ತಮ್ಮ ನಿರರ್ಗಳ ಮಾತುಗಳಲ್ಲಿ, ಮಹಾತ್ಮ ಗಾಂಧಿಯವರ ಕಥೆಗಳ ಮೂಲಕ ಗೂಂಡಾಗಳು, ದಂಗೆಕೋರರು ಮತ್ತು ಬೆಂಕಿ ಹಚ್ಚುವವರಿಗೆ ಪಾಠವನ್ನು ಕಲಿಸಿದರು ಮತ್ತು ಗಲಭೆಯಿಂದ ಹಾನಿಗೊಳಗಾದ ಸಮುದಾಯಗಳಿಗೆ ಹೆಚ್ಚು ಅಗತ್ಯವಿರುವ ಸಹಾಯ ಮತ್ತು ಭರವಸೆಯನ್ನು ಒದಗಿಸಿದರು.

ದೆಹಲಿಯಲ್ಲಿ ಲೋಹಿಯಾ ಅವರ ಶಾಂತಿ ಪ್ರಯತ್ನಗಳು ವ್ಯರ್ಥವಾಗಲಿಲ್ಲ. ಆಗಸ್ಟ್ 15, 1947 ರಂದು, ಭಾರತದ ಸ್ವಾತಂತ್ರ್ಯದಿನದಂದು, ದೆಹಲಿಯಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಅಪ್ಪಿಕೊಳ್ಳುತ್ತಿದ್ದಾಗ ಗದ್ದಲದ ಸಂತೋಷದ ಅಲೆಗಳು ಹಬ್ಬಿದ್ದವು. ಒಂದು ಕ್ಷಣ, ಒಂದು ವರ್ಷದ ಎಲ್ಲಾ ಕಹಿ ಮತ್ತು ಮತಾಂಧತೆ ಮಾಯವಾಯಿತು . ಲೋಹಿಯಾ ಅವರು ಇಡೀ ರಾತ್ರಿ ಮೆರವಣಿಗೆಯನ್ನು ಆಯೋಜಿಸಿದರು. ಅದು ಭಾರಿ ಯಶಸ್ಸನ್ನು ಕಂಡಿತು . ಅದು ಹಿಂದೂ–ಮುಸ್ಲಿಂ ಏಕತೆಗೆ ಅಡ್ಡಿಯಾಗಿದ್ದ ಎಲ್ಲಾ ಅಡೆತಡೆಗಳನ್ನು ಮುರಿದು ಹಾಕಿತು. ಆದರೂ ಸಹ, ಶಾಂತಿ ಅಲ್ಪಕಾಲಿಕವಾಗಿತ್ತು . ದೆಹಲಿ ಮತ್ತೊಮ್ಮೆ ಗಲಭೆಗಳಲ್ಲಿ ಮುಳುಗಿತು . ಗಾಂಧಿಯವರ ಶಾಂತಿ ಕಾರ್ಯಾಚರಣೆಗಳಲ್ಲಿ ಸಹಾಯಮಾಡಲು ಲೋಹಿಯಾ ಅಲ್ಲಿಯೇ ಇರಬೇಕಾಯಿತು.

ಗಾಂಧೀಯವರು ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಲೋಹಿಯಾ ಅವರು ಸಿಗರೇಟು ಸೇದುವುದು, ಚಹಾ ಮತ್ತು ಕಾಫಿ ಕುಡಿಯುವುದು ಸೇರಿದಂತೆ ಅವರ ಸ್ವತಂತ್ರ ಜೀವನವಿಧಾನವನ್ನು ಬದಲಾಯಿಸಲು ಪ್ರಯತ್ನಿಸಿದರು . ಇನ್ನೊಂದು ಸಂದರ್ಭದಲ್ಲಿ, ಗಾಂಧಿಯವರು ಲೋಹಿಯಾ ಅವರನ್ನು ನಲವತ್ತೈದು ನಿಮಿಷಗಳ ಕಾಲ ಮನವೊಲಿಸಿ, ಅವರ ಹಠದ ಮನೋಭಾವವನ್ನು ಕುಗ್ಗಿಸಿ ನೆಹರು ಮತ್ತು ಪಟೇಲ್ ಅವರೊಂದಿಗೆ ಪತ್ರವ್ಯವಹಾರ ಮಾಡುವಂತೆ

ಮನವೊಲಿಸಿದರು. ಗಾಂಧಿಯವರ ಕೆಲವು ಉಪದೇಶಗಳು ಲೋಹಿಯಾ ಅವರನ್ನು ಸರ್ಕಾರಕ್ಕೆ ಸೇರಲು ಮತ್ತು ಭಾರತದ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಕಷ್ಟದ ಸಮಯದಲ್ಲಿ ರಾಷ್ಟ್ರದ ಹಿತಾಸಕ್ತಿಗಳನ್ನು ಮುನ್ನಡೆಸಲು ಪ್ರೋತ್ಸಾಹಿಸುವ ಪ್ರಯತ್ನವಾಗಿದ್ದವು. ಗಾಂಧೀಜಿಯವರನ್ನು ಭಾರತದ ನಾಗರಿಕರ ಚಾರಿತ್ರ್ಯವನ್ನು ಕಾಯುವ ಕಾವಲುಗಾರ ಎಂದು ಲೋಹಿಯಾ ಅವರು ಪರಿಗಣಿಸಿದ್ದರಿಂದ ಅವರ ಸಲಹೆಗಳನ್ನು ಲೋಹಿಯಾ ಅವರು ಮನಪೂರ್ವಕವಾಗಿ ಸ್ವೀಕರಿಸಿದರು.

ಗಾಂಧಿಯವರ ಮರಣದಲ್ಲಿ ಡಾ. ಲೋಹಿಯಾ ಅವರು ತಂದೆಯಂತಹ ವ್ಯಕ್ತಿತ್ವವನ್ನು ಕಳೆದುಕೊಂಡರು. ಅವರು ಅನಾಥರಾದರು. ಲೋಹಿಯಾ ಅವರನ್ನು ನೋಡಿಕೊಳ್ಳಲು ಯಾರೂ ಇರಲಿಲ್ಲ. ಆನಂತರ, ಅವರು ಒಬ್ಬ ಸ್ವತಂತ್ರ ಪ್ರಯಾಣಿಕ ಜೀವನವನ್ನು ನಡೆಸಿದರು. ಅವರು ನಿರಂತರ ಪಾದಚಾರಿಯಂತೆ ದೇಶಾದ್ಯಂತ ಸುತ್ತಾಡಿದರು. ಬಿರುಗಾಳಿಯ ಸಮಾಜವಾದಿ , ಶುದ್ಧವಾದಿ ಮತ್ತು ಪ್ರತಿಮಾಶಾಸ್ತ್ರ ವಿರೋಧಿ, ಕಲೆ, ಭಾಷೆ ಮತ್ತು ಸಾಹಿತ್ಯದ ಅಭಿಜ್ಞ, ಮಹಿಳೆಯರ ಸೌಂದರ್ಯ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಅವರ ಪ್ರಾಮುಖ್ಯತೆಯ ಅಭಿಮಾನಿ ಮುಂತಾದ ಹಲವು ಮನಸ್ಥಿತಿಗಳ ವ್ಯಕ್ತಿಯಾದರು. ಅವರು ತಮ್ಮ ಜೀವನದ ಮುಂದಿನ ಮೂವತ್ತು ವರ್ಷಗಳ ಕಾಲ ಮೂಲಭೂತವಾಗಿ ಸದ್ಭಾವನಾಶೀಲ ಆದರ್ಶವಾದಿ ಮತ್ತು ಗಾಂಧಿಯವರಂತೆ ಶಾಶ್ವತ ಆಶಾವಾದಿಯಾಗಿ ಉಳಿದರು. ಶಾಶ್ವತಆಶಾವಾದವು ಅವರ ನಿಗೂಢ ಸಂಬಂಧವನ್ನು ಮತ್ತಷ್ಟು ಹೆಚ್ಚಿಸಿದ ಅತ್ಯಂತ ನಿಕಟ ಬಂಧವಾಗಿತ್ತು. ಗಾಂಧಿ ಮತ್ತು ಲೋಹಿಯಾ ಅವರ ಸಂಬಂಧ ಮತ್ತು ಬಾಂಧವ್ಯವನ್ನು ಅವರ ಆಪ್ತ ಮಿತ್ರ ಮತ್ತು ಲೋಕಸಭಾ ಮಾಜಿ ಸದಸ್ಯ ಪ್ರೊಫೆಸರ್ ಸಮರ್ ಗುಹಾ ಅವರು ಹೀಗೆ ವ್ಯಾಖ್ಯಾನಿಸಿದ್ದಾರೆ .

"ಗಾಂಧೀಜಿಯವರಿಗೆ ಲೋಹಿಯಾ ಮೇಲಿದ್ದ ಪ್ರೀತಿಯ ಪ್ರಭಾವ ಎಷ್ಟಿತ್ತೆಂದರೆ, ಲೋಹಿಯಾ ಅವರು ಆ ವೃದ್ಧ ಮಹಾತ್ಮನ ವ್ಯಕ್ತಿತ್ವದಿಂದ ದೂರವಾಗಲು ಎಂದಿಗೂ ಸಾಧ್ಯವಾಗಲಿಲ್ಲ. ಗಾಂಧಿಯವರ ಸಂಮೋಹನ ಅವರ ಮೇಲೆ ಅಗ್ರಾಹ್ಯವಾದ ನಿರ್ಬಂಧವನ್ನು ಹೇರಿತು. ಚಂಚಲ ವ್ಯಕ್ತಿತ್ವದ ಲೋಹಿಯಾ ಅವರಿಗೆ ಗಾಂಧೀಜಿ ಕೊನೆಯ ಆಶ್ರಯವಾಗಿದ್ದರು. ಅದೇ ರೀತಿಯಲ್ಲಿ ಗಾಂಧೀಜಿಯವರ ಆಂತರಿಕ ಆತ್ಮಕ್ಕೆ ಲೋಹಿಯಾ ಅಂತಿಮ ಸಾಂತ್ವನವಾಗಿದ್ದರು. 1947ರ ಆಗಸ್ಟ್ ಹದಿನೈದರಂದು ಸ್ವಾತಂತ್ರ್ಯ ಬಂದಾಗ, ಲೋಹಿಯಾ ಅವರು ಕೊಲ್ಕತ್ತ ಹಾಗೂ ನೌಖಾಲಿಯಲ್ಲಿ ಗಾಂಧೀಜಿಯವರ ಜೊತೆ ನಿಂತು ಹಿಂದೂ–ಮುಸ್ಲಿಂ ಕೋಮು ದಂಗೆಯನ್ನು ಅಡಗಿಸಲು ಹಗಲೂ ರಾತ್ರಿ ಶ್ರಮಿಸುತ್ತಿದ್ದರು . ಈ ದೇಶದಲ್ಲಿ ಗಾಂಧಿಯನ್ನು ತೆಗಳುವುದನ್ನೇ ಕಾಯಕ ಮಾಡಿಕೊಂಡಿದ್ದ ಸಂಘ ಪರಿವಾರ ಮತ್ತು ಅಂಬೇಡ್ಕರ್‌ವಾದಿಗಳಿಗೆ ಗಾಂಧೀಜಿಯವರ ಚಿಂತನೆಗಳನ್ನು ಪುನರ್ ವ್ಯಾಖ್ಯಾನ ಮಾಡುವುದರ ಮೂಲಕ ಅವರ ಮಹತ್ವವನ್ನು ಒತ್ತಿ ಹೇಳಿದರು."



ಗಾಂಧೀಜಿಯವರು 1948 ರ ಜನವರಿ 30 ಹತ್ಯೆಯಾದ ನಂತರ ಲೋಹಿಯಾ ತೀರಾ ಕಳವಳಕ್ಕೆ ಮತ್ತು ಸಂಕಷ್ಟಕ್ಕೆ ಒಳಗಾದರು. ಜನವರಿ 29 ರಂದು ಗಾಂಧೀಜಿಗೆ ನೀಡಿದ್ದ ವಾಗ್ದಾನದಂತೆ ಲೋಹಿಯಾ ಅವರು ದೆಹಲಿಯ ಬಿರ್ಲಾ ಭವನದಲ್ಲಿ ಮಹಾತ್ಮರನ್ನು ಖಾಸಗಿ ಭೇಟಿಯಾಗಿ ಅವರ ಮಾತುಗಳನ್ನು ಕೇಳಬೇಕಾಗಿತ್ತು. ಕೆಲಸಗಳ ಒತ್ತಡದಿಂದ ಲೋಹಿಯಾ ಅದನ್ನು ಮರೆತರು. ತಮ್ಮೊಳಗಿನ ನೋವು ಮತ್ತು ಪಾಪಪ್ರಜ್ಞೆಯನ್ನು ತಾಳಲಾರದೆ, ಗಾಂಧೀಜಿಯವರ ಆಶಯದಂತೆ ತ್ಯಜಿಸಿದ್ದ ಸಿಗರೇಟಿಗೆ ಮತ್ತೇ ಮೊರೆ ಹೋದರು. ದೆಹಲಿಯಲ್ಲಿ ಮಹಾತ್ಮನ ಅಂತ್ಯಕ್ರಿಯೆ ನೆರವೇರಿದ ನಂತರ, ಅವರ ಚಿತಾಭಸ್ಮವನ್ನು ಅಲಹಾಬಾದಿನ ತ್ರಿವೇಣಿ ಸಂಗಮದಲ್ಲಿ ವಿಸರ್ಜಿಸಲು, ದೆಹಲಿಯಿಂದ ವಿಶೇಷ ರೈಲಿನ ವ್ಯವಸ್ಥೆ ಮಾಡಲಾಗಿತ್ತು. ನೆಹರೂ, ಪಟೇಲ್, ಜೊತೆ ಲೋಹಿಯಾ ಕೂಡಾ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಮಾರ್ಗ ಮಧ್ಯೆ ಆಗ್ರಾ ಬಳಿ ಹೊಲದಲ್ಲಿ ನಿಂತಿದ್ದ ಅರಬೆತ್ತಲೆಯ ರೈತನೊಬ್ಬ ಚಲಿಸುತ್ತಿದ್ದ ರೈಲಿನತ್ತ ತನ್ನ ಹೊಲದಲ್ಲಿ ಬೆಳೆದಿದ್ದ ಸೂರ್ಯಕಾಂತಿ ಹೂಗಳನ್ನು ಕಿತ್ತು ಎಸೆಯುತ್ತಾ ಮಹಾತ್ಮನ ಚಿತಾಭಸ್ಮಕ್ಕೆ ಕೈಯೆತ್ತಿ ಮುಗಿದಿದ್ದನ್ನು ನೋಡಿದ ಲೋಹಿಯಾ ಅವರ ಕಣ್ಣುಗಳಲ್ಲಿ ಧಾರಾಕಾರವಾಗಿ ಅಶ್ರು ಧಾರೆ ಹರಿಯಿತು . ಗಾಂಧೀಜಿ ನಿಧನರಾದ ಕ್ಷಣದಿಂದ ಲೋಹಿಯಾ ಅವರು ತಡೆಹಿಡಿದಿದ್ದ ದುಃಖವೆಲ್ಲಾ ಕಣ್ಣೀರ ಕೋಡಿಯಾಗಿ ಹರಿಯಿತು.

ಭಾರತದ ನೆಲದ ಒಬ್ಬ ಅನಕ್ಷರಸ್ಥ ರೈತನಿಗೆ ಗಾಂಧಿ ಮತ್ತು ಅವರ ವಿಚಾರಧಾರೆಗಳು ತಲುಪಿರುವ ಬಗ್ಗೆ ಯೋಚಿಸುತ್ತಾ ಲೋಹಿಯಾ ಮೂಕ ವಿಸ್ಮಿತರಾದರು. ಆ ಕ್ಷಣದಿಂದ ಗಾಂಧೀಜಿಯವರ ಕುರಿತಾದ ಅವರ ಚಿಂತನೆಗಳಲ್ಲಿ ಬದಲಾವಣೆಯಾಯಿತು. ದೆಹಲಿಯಲ್ಲಿ 1967 ರ ಅಕ್ಟೋಬರ್ ತಿಂಗಳ 12 ರಂದು ಲೋಹಿಯಾ ನಿಧನರಾಗುವ ಮುನ್ನ, ತೀವ್ರ ಅನಾರೋಗ್ಯದ ನಡುವೆಯೂ ಅವರು ಯಾವುದೇ ವಿಶೇಷ ಆಸ್ಪತ್ರೆ ಮತ್ತು ತಜ್ಞ ವೈದ್ಯರ ಭೇಟಿಯನ್ನು ನಿರಾಕರಿಸಿದರು. ಸಂಸದರಾಗಿ, ದೇಶದ ಪ್ರಮುಖ ರಾಜಕೀಯ ಚಿಂತಕರಾಗಿದ್ದರೂ ಸಹ, ತನಗೆ ಈ ದೇಶದ ಸಾಮಾನ್ಯನಿಗೆ ಸಿಗುವ ವೈದ್ಯಕೀಯ ಸೌಲಭ್ಯಗಳು ಮಾತ್ರ ಸಾಕೆಂದು ಹಠ ಮಾಡಿದರು. ನಂತರ ದೆಹಲಿಯ ಸರ್ಕಾರಿ ವೆಲ್ಲಿಂಗ್ಡನ್ ಆಸ್ಪತ್ರೆಗೆ ದಾಖಲಾದರು. ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು. ಲೋಹಿಯಾ ನಿಧನದ ನಂತರ ಅವರ ಗೌರವಾರ್ಥವಾಗಿ ವೆಲ್ಲಿಂಗ್ ಡನ್ ಆಸ್ಪತ್ರೆಗೆ ರಾಮ್ ಮನೋಹರ್ ಲೋಹಿಯಾ ಅವರ ಹೆಸರನ್ನು ಇಡಲಾಯಿತು. ಲೋಹಿಯಾ ಅವರು ನಿಧನರಾದಾಗ ಗಾಂಧೀಜಿಯವರ ಮಾದರಿಯಲ್ಲಿ ಅವರ ಹೆಸರಿನಲ್ಲಿ ಒಂದು ಬ್ಯಾಂಕ್ ಖಾತೆ ಕೂಡಾ ಇರಲಿಲ್ಲ. ಮನೆಯಾಗಲಿ, ನಿವೇಶನವಾಗಲಿ ಇರಲಿಲ್ಲ. ಅವರು ಮಹಾತ್ಮ ಗಾಂಧೀಜಿಯವರ ಕನಸಿನ ಕುಡಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಶ್ರಮಿಸಿ, ತಾವು ಪ್ರೇರಣೆಗೊಂಡ ಮಹಾತ್ಮನ ಮಾದರಿಯಲ್ಲೇ ಬದುಕಿದ್ದರು . ■



ಹುತಾತ್ಮ ಭಗತ್ ಸಿಂಗ್

1931 ಮಾರ್ಚ 22 ರಂದು ಎರಡನೆಯ ಲಾಹೋರ್ ಪಿತೂರಿ ಪ್ರಕರಣದ ಅಪರಾಧಿಗಳನ್ನು ಜೈಲಿನ ಗುಜರಿ ಕೋಣೆಯ ಪಕ್ಕದ ಒಂದು ಕೋಣೆಯಲ್ಲಿ ಕೂಡಿ ಹಾಕಿದ್ದರು. ಅವರು ಅವತ್ತು ತಮ್ಮ ಸೆಲ್‌ನಿಂದ ಭಗತ್‌ಸಿಂಗ್ ಬಳಿಗೆ ಒಂದು ಚೀಟಿ ಕಳಿಸಿ ನಿನಗೆ ಬದುಕುವ ಆಸೆಯಿಲ್ಲವೇ? ಎಂದು ಕೇಳಿದರು ಅದಕ್ಕೆ ಭಗತ್ ಸಿಂಗ್ ಉತ್ತರಿಸಿದ್ದು ಹೀಗೆ. ಗಲ್ಲಿ

ಕಾಮ್ರೇಡ್ಸ್, ಬದುಕುವ ಆಸೆ ಸಹಜವಾದದ್ದು. ಅದು ನನ್ನಲ್ಲೂ ಇದೆ. ನಾನದನ್ನು ಮುಚ್ಚಿಟ್ಟುಕೊಳ್ಳಬಯಸುವುದಿಲ್ಲ. ಆದರೆ ಆ ಹಂಬಲ ಷರತ್ತುಬದ್ಧ. ನಾನು ಬಂಧಿಯಾಗಿ ನಿರ್ಬಂಧಗಳ ನಡುವೆ ಬದುಕಲು ಇಚ್ಛಿಸುವುದಿಲ್ಲ. ನನ್ನ ಹೆಸರು ಈಗ ಭಾರತದ ಕ್ರಾಂತಿಯ ಸಂಕೇತವಾಗಿದೆ. ಕ್ರಾಂತಿಯ ಪಕ್ಷದ ಆದರ್ಶ ಮತ್ತು ತ್ಯಾಗಗಳು ನನ್ನನ್ನು ಯಾವ ಎತ್ತರಕ್ಕೆ ಏರಿಸಿವೆಯೆಂದರೆ ಬದುಕಿದರೆ ನಾನು ಅದಕ್ಕಿಂತ ಎತ್ತರಕ್ಕೆ ಏರಲು ಸಾಧ್ಯವಾಗದೇ ಹೋಗಬಹುದು.

ಇವತ್ತು ಜನರಿಗೆ ನನ್ನ ದೌರ್ಬಲ್ಯಗಳ ಅರಿವಿಲ್ಲ. ನಾನು ಮರಣದಂಡನೆ ತಪ್ಪಿಸಿಕೊಂಡು ಬದುಕಿದರೆ ಆ ದೌರ್ಬಲ್ಯಗಳು ಅವರೆದುರು ಕಾಣಬಹುದು. ಆಗ ಕ್ರಾಂತಿಯ ಸಂಕೇತ ಮಸುಕಾಗುತ್ತದೆ. ಅಥವಾ ಖಾಯಮ್ಮಾಗಿ ಮರೆಯಾಗುತ್ತದೆ. ಅದರ ಬದಲು ನಾನೇನಾದರೂ ನಗುನಗುತ್ತ ಗಲ್ಲಿಗೇರಿದರೆ ಭಾರತದ ಅಮ್ಮಂದಿರಿಗೆ ಅದು ಸ್ಫೂರ್ತಿಯಾಗಿ ತಮ್ಮ ಮಗನೂ ಭಗತನಂತಾಗಲಿ ಎಂದು ಅವರು ಹಾರೈಸುತ್ತಾರೆ.

ಆಗ ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನಕ್ಕೂ ಸಿದ್ಧರಾಗಿರುವವರ ದೊಡ್ಡ ಪಡೆ ಬೆಳೆಯುತ್ತದೆ. ಆಗ ಸಾಮ್ರಾಜ್ಯಶಾಹಿಗಳಿಗೆ ಕ್ರಾಂತಿಯನ್ನು ತಡೆಯಲು ಸಾಧ್ಯವಾಗುವುದಿಲ್ಲ. ಅವರ ಎಲ್ಲ ಶಕ್ತಿ ಮತ್ತು ಸೈತಾನೀ ಪ್ರಯತ್ನಗಳ ಹೊರತಾಗಿಯೂ ಕ್ರಾಂತಿಯನ್ನು ನಿಲ್ಲಿಸಲು ಆಗುವುದಿಲ್ಲ.

ಅಂದು ನೇಣುಗಂಭಕ್ಕೆ ಏರಿದ ಮೂವರು ಮಹನೀಯರು ..ಭಗತ್ ಸಿಂಗ್, ರಾಜಗುರು, ಮತ್ತು ಸುಖದೇವ್ .

ಹೌದು, ಒಂದು ವಿಷಯ ಇವತ್ತಿಗೂ ನನ್ನನ್ನು ಕೊರೆಯುತ್ತಿದೆ. ನನ್ನ ದೇಶಕ್ಕೆ, ಮನು ಕುಲಕ್ಕೆ ಏನಾದರೂ ಉಪಯೋಗವಾಗುವಂಥದನ್ನು ಮಾಡಬೇಕೆಂಬ ಮಹತ್ವಾಕಾಂಕ್ಷೆ ನನ್ನೆದೆಯಲ್ಲಿತ್ತು. ಆದರೆ ನನ್ನ ಹಂಬಲದ ಸಾವಿರದ ಒಂದು ಪಾಲನ್ನೂ ಸಾಧಿಸಲಾಗಲಿಲ್ಲ. ಬದುಕಿದರೆ ಬಹುಶಃ ಅವನ್ನು ಪೂರೈಸಲು ಅವಕಾಶ ಸಿಗಬಹುದು. ಅಕಾಸ್ಮಾತ್ ನನ್ನ ಮನಸಿನಲ್ಲಿ ಬದುಕುಳಿಯುವ ಹಂಬಲ ಬಂದರೂ ಅದು ಕೇವಲ ಈ ಕಾರಣಕ್ಕಾಗಿಯೇ ಆಗಿರುತ್ತದೆ.

ಇತ್ತೀಚೀನ ದಿನಗಳಲ್ಲಿ ನನ್ನ ಬಗ್ಗೆ ಹೆಮ್ಮೆಯಾಗುತ್ತಿದೆ. ಅಂತಿಮ ಪರೀಕ್ಷೆಯ ಕ್ಷಣಗಳಿಗಾಗಿ ಉದ್ವೇಗದಿಂದ ಎದುರು ನೋಡುತ್ತಿದ್ದೇನೆ. ಆ ದಿನ ಬೇಗ ಬರಲಿ ಎಂದು ಹಾರೈಸುತ್ತೇನೆ ಎಂದು ಭಗತ್ ಸಿಂಗ್ ಉತ್ತರಿಸಿದ್ದರು..

ಹೀಗೆ ಸಾಯುವ ಹೊತ್ತಿಗೂ ಶಿಕ್ಷೆ ಮಾಫಿಯಾಗಲೂ, ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಾಗಲಿ ಯೋಚಿಸದೆ ಭಗತ್ ಸಾವಿನ ಕ್ಷಣಗಳನ್ನು ಎದುರುಗೊಳ್ಳಲು ಧೈರ್ಯದಿಂದ ಸಿದ್ಧತೆ ನಡೆಸಿದ್ದಾಗ ಮಾರ್ಚ 24, 1931 ರಂದು ಬೆಳಗಿನ ಜಾವ ಗಲ್ಲಿಗೇರಿಸುವುದೆಂದು ತೀರ್ಮಾನವಾಯಿತು. ಅಂದು ನೌಜವಾನ್ ಸಭಾ ಲಾಹೋರಿನಲ್ಲಿ ದೊಡ್ಡ ಮೆರವಣಿಗೆ ಏರ್ಪಡಿಸಿತ್ತು. ಆದರೆ ಮೆರವಣಿಗೆ ಜೈಲಿನೆಡೆಗೆ ಬಂದರೆ ನಿಯಂತ್ರಣ ಕಷ್ಟ ಎಂದು ಹೆದರಿದ ಬ್ರಿಟಿಷ್ ಸರ್ಕಾರ 23 ಮಾರ್ಚ 1931 ರಾತ್ರಿ 7:30ಕ್ಕೆ ಭಗತ್ ಸಿಂಗ್, ರಾಜಗುರು, ಸುಖದೇವ್ ಅವರನ್ನು ಗಲ್ಲಿಗೇರಿಸಿತು.

(ಭಗತ್‌ಸಿಂಗ್ ಜೈಲ್ ಡೈರಿ ಪುಸ್ತಕದಿಂದ, ಸಂ:ಚಮನ್‌ಲಾಲ್) ■



ಸತ್ತಿದ್ದಾರೆಂದುಕೊಂಡವರು ಎದುರು–ಬದರು ಆದಾಗ !

–ದೇವನೂರ ಮಹಾದೇವ

["ಗ್ರಾಮಸ್ವರಾಜ್ : ಗಾಂಧಿ ಅಂಬೇಡ್ಕರ್ – ಒಂದು ಅನುಸಂಧಾನ", ಕಾರ್ಯಕ್ರಮದಲ್ಲಿ ಈಗ್ಗೆ ಕೆಲ ವರ್ಷಗಳ ಹಿಂದೆ ಮಹಾದೇವರು ಆಡಿದ ಮಾತುಗಳ ಅಕ್ಷರ ರೂಪ. 'ನಮ್ಮ ಬನವಾಸಿ'–ಅಂತರ್ಜಾಲ ಪುಟದಿಂದ]

ಗ್ರಾಮಸ್ವರಾಜ್ : ಗಾಂಧಿ ಅಂಬೇಡ್ಕರ್ – ಒಂದು ಅನುಸಂಧಾನ' – ಈ ಚರ್ಚೆಗೆ ನೀವೂ ಬನ್ನಿ ಎಂದು ನನ್ನನ್ನು ಕರೆದಾಗ – 'ಏನು ಜಗಳವನ್ನು ಸರಸ ಮಾಡಬೇಕು ಅಂತಿದ್ದಿರಾ ಹೇಗೆ?' ಎಂದು ತಮಾಷೆ ಮಾಡಿದೆ. ಆ ಇಬ್ಬರ ನಡುವೆ ಜಗಳ ಇಂದೂ ನಡೆಯುತ್ತಿದೆ. ಅದು ತೀವ್ರವಾಗೂ ಇದೆ. ಇದರ ಅರ್ಥ – ಆ ಇಬ್ಬರೂ ಇನ್ನೂ ಸತ್ತಿಲ್ಲ ಅಂತಲೇ ಅರ್ಥ. ಇಂದೂ ಅವರು ಹೆಚ್ಚು ಜೀವಂತವಾಗಿದ್ದಾರೆ ಅಂತಲೂ ಅರ್ಥ.

ಇದನ್ನು ನಾನು ಒಂದು ಶುಭಸೂಚನೆಯಾಗಿ ನೋಡುತ್ತೇನೆ. ಜಾಗತೀಕರಣದ ಅಟ್ಟಹಾಸದಲ್ಲಿ ವ್ಯಾಪಾರ ಕುಣಿದು ಕುಪ್ಪಳಿಸುತ್ತಾ ಈ ವ್ಯಾಪಾರವೇ ಆಳ್ವಿಕೆಯಾಗಿ ಎಲ್ಲಾ ಸೈದ್ಧಾಂತಿಕ ಆಲೋಚನೆಗಳೂ, ಹೋರಾಟಗಳೂ ಕಣ್ಮರೆಯಾಗುತ್ತಿದೆ ಎಂದು ಎಲ್ಲರೂ ನಂಬುತ್ತಿರುವ ಈ ದುಸ್ಥಿತಿಯಲ್ಲಿ ಈ ಇಬ್ಬರ ಜೀವಂತಿಕೆಯು ಮುಳುಗುವವರಿಗೆ ಒಂದು ಹುಲ್ಲುಕಡ್ಡಿ ಸಿಕ್ಕಂತೆ ನನಗೆ ಕಾಣಿಸುತ್ತದೆ.

ಇವರ ಜಗಳಕ್ಕೆ ಹೋಗುವ ಮುನ್ನ ಈ ಜಗಳಾಡುವವರ ನಡುವೆ ಆಗಾಗ ಮಿಂಚಿನಂತೆ ಕಾಣುವ ಪರಸ್ಪರ ಗೌರವ, ನಂಬಿಕೆ, ಮೆಚ್ಚಿಗೆಗಳ ಒಂದೆರಡು ಉದಾಹರಣೆಗಳನ್ನು ಕೊಡುವೆ. ನಂತರ ಜಗಳಕ್ಕೆ ಖಂಡಿತ ಹೋಗುವ.

ಶ್ರೀ ಭಗವಾನ್‌ದಾಸ್ ಅವರು ಸಂಪಾದಿಸಿರುವ 'ದಸ್ ಸ್ಪೋಕ್ ಅಂಬೇಡ್ಕರ್' ಮೊದಲ ಸಂಪುಟದಲ್ಲಿನ ಉಲ್ಲೇಖದಂತೆ ಅಂಬೇಡ್ಕರ್ ಅವರು ಗಾಂಧಿಯವರ ಬಗ್ಗೆ ಪೂನಾ ಒಪ್ಪಂದದ ನಂತರ ಕೊಟ್ಟ ಹೇಳಿಕೆಯಲ್ಲಿ 'ನನ್ನ ಮತ್ತು ಆತ (ಗಾಂಧಿ)ನ ಮಧ್ಯೆ ಎಷ್ಟೊಂದು ಸಾಮ್ಯವಿದೆ ಎಂಬುದನ್ನು ಆತನನ್ನು ಭೇಟಿ ಮಾಡಿದಾಗ ತಿಳಿದು ನನಗೆ ಆಶ್ಚರ್ಯವಾಗಿದೆ, ಅತ್ಯಾಶ್ಚರ್ಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ' ಎನ್ನುತ್ತಾರೆ. ಇದನ್ನು ಯಾವ ರೀತಿ ಅರ್ಥ ಮಾಡಿಕೊಳ್ಳೋಣ? ಹಾಗೇ ಗಾಂಧೀ 1946ರಲ್ಲಿ ಗೋರಾ ಅವರ ಅಳಿಯನಿಗೆ 'ನೀನು ಅಂಬೇಡ್ಕರ್‌ರಂತೆ ಆಗಬೇಕು. ನೀನು ಅಸ್ಪೃಶ್ಯತೆಯ ಹಾಗೂ ಜಾತಿಯ ನಿರ್ಮೂಲನಕ್ಕಾಗಿ ಕೆಲಸ ಮಾಡಬೇಕು. ಯಾವ ಬೆಲೆ ತೆತ್ತಾದರೂ ಸರಿಯೇ ಅಸ್ಪೃಶ್ಯತೆಯು ಹೋಗಲೇಬೇಕು' ಎಂದು ಹೇಳುತ್ತಾರೆ. ಇದನ್ನು ಹೇಗೆ ಅರ್ಥ ಮಾಡಿಕೊಳ್ಳೋಣ? 'ಸಂಸ್ಕೃತಿ ಕಥನ'ದಲ್ಲಿ ಡಿ.ಆರ್. ನಾಗರಾಜ್ ದಾಖಲಿಸಿರುವಂತೆ ಎಲ್ಲರೂ ಗಾಂಧಿಗೆ ಮಹಾತ್ಮ ಎನ್ನುತ್ತಿದ್ದಾಗ ಆ ಮಹಾತ್ಮನೇ ಅಂಬೇಡ್ಕರರನ್ನು ಮಹಾತ್ಮ ಅನ್ನುತ್ತಾರೆ. ಇದೇನು? ಇದೆಲ್ಲವೂ, ಈ ಅವರ ಜಗಳವೂ ಆ ಮಹಾತ್ಮರಿಬ್ಬರ ಕೊಡುಕೊಳ್ಳುವಿಕೆಯೇ?

ಹೀಗಿದ್ದೂ ಯಾಕೆ ವಿರಸ ಎಂದು ನೋಡಿದರೆ ಗಾಂಧಿ ಹುಟ್ಟುತ್ತ ಸನಾತನಿ, ಕರ್ಮಠ. ನಡೆಯುತ್ತಾ, ಎಡವುತ್ತಾ, ಬೆಳೆಯುತ್ತಾ ಪ್ರಗತಿಪರ. ಭಾರತವನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡಿರುವ ಆ ಸನಾತನಿಗಳೂ, ಕರ್ಮಠರೂ ಕೂಡ ತನ್ನೊಡನೆ ಹೆಜ್ಜೆ ಇಡುತ್ತಿರುವವರೆ ಇಲ್ಲವೆ ಎಂಬುದನ್ನು ಸದಾ ಕಡೆಗಣ್ಣಿನಿಂದಲೇ ಗಮನಿಸುತ್ತ ಅವರನ್ನೂ ಜೊತೆಜೊತೆಗೇ ಎಳೆದುಕೊಂಡು ಹೆಜ್ಜೆ ಇಡುವಾತ ಗಾಂಧಿ. ಹಾಗೇ ಇತಿಹಾಸಕಾರ ಎಸ್.ಚಂದ್ರಶೇಖರ್ 'ಗಾಂಧೀಜಿಯ ಕಾರ್ಯ ರಾಜಕೀಯದಿಂದ ಸಾಮಾಜಿಕದತ್ತ ಇಳಿದು ಬಂದರೆ, ಅಂಬೇಡ್ಕರ್ ಅವರು ಸಾಮಾಜಿಕ ಕಾರ್ಯದಿಂದ ರಾಜಕೀಯ ಕಣಕ್ಕೆ ಏರಿದವರು' ಎಂದು ಹೇಳುತ್ತಾರೆ. ಈ ಬಗೆಯ ಚಲನೆ ಕಾರಣವಾಗಿ ಗಾಂಧಿ ಅಂಬೇಡ್ಕರ್ ನಡುವೆ ಘರ್ಷಣೆ ಉಲ್ಬಣಗೊಂಡಿತೆ? ಜೊತೆಗೆ ಇಬ್ಬರೂ ಸಮಕಾಲೀನರು. ಆಯಾಯ ದಿನಕ್ಕೆ ಪ್ರತಿಕ್ರಿಯಿಸಲೇಬೇಕಿತ್ತು. ಇದರೊಡನೆ ದುಂಡುಮೇಜಿನ ಪರಿಷತ್‌ನಲ್ಲಿ ಗಾಂಧಿ ಕ್ಷುದ್ರವಾಗಿ ನಡೆದುಕೊಂಡು ಅಂಬೇಡ್ಕರ್‌ಗೆ ಗಾಯಮಾಡಿಬಿಟ್ಟರು. ಈ ಎಲ್ಲಾ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರ ಪ್ರತಿಕ್ರಿಯೆಗಳನ್ನು

ಅರ್ಥಮಾಡಿಕೊಳ್ಳಬೇಕೇ ಹೊರತು ಅಂದರೆ ಆಯಾ ಕಾಲದ ಪ್ರತಿಕ್ರಿಯೆಗಳನ್ನು ಆಯಾ ಕಾಲದ ಸಂದರ್ಭಕ್ಕೆ ಮಾತ್ರ ಸೀಮಿತಗೊಳಿಸಿ ಅವರನ್ನು ಒಟ್ಟಾಗಿ ಅರ್ಥಮಾಡಿಕೊಳ್ಳಬೇಕೇ ಹೊರತು ಅವರ ಸಾಂದರ್ಭಿಕ ಅಭಿಪ್ರಾಯಗಳನ್ನು ಕಟ್ಟುಗಾಜು ಹಾಕಿಸಿ ಸ್ಥಿರಗೊಳಿಸಿ ನೇಣಿಗೇರಿಸಬಾರದು. ಹಾಗೇ ಗಾಂಧಿಯನ್ನೂ ಕೂಡ.

ಅವರ ಜಗಳ ಜಟಾಪಟಿಗೆ ಗಾಂಧಿ ಮತ್ತು ಅಂಬೇಡ್ಕರರ ಗ್ರಹಿಕೆಗೆ ಭಾರತದ ಹಳ್ಳಿಯು ಹೇಗೆ ಕಾಣುತಿತ್ತು ಎಂಬುದೂ ಮುಖ್ಯವಾಗುತ್ತದೆ. ಗಾಂಧಿ ಹಳ್ಳಿಯನ್ನು ಸ್ವಯಂಭೂ ಸ್ವರ್ಗವಾಗಿಸುವ ಕನಸು ಕಂಡವರು. ಆದರೆ ಅಂಬೇಡ್ಕರ್ ಹಳ್ಳಿಗಳನ್ನು ನರಕದ ಕೂಪ ಅಂದುಕೊಂಡಿದ್ದರು. ಹಳ್ಳಿಯೇ ಭಾರತಕ್ಕೆ ಮೋಕ್ಷ ಎಂದು ಗಾಂಧಿ ಅಂದುಕೊಂಡಿದ್ದರೆ, ಅಂಬೇಡ್ಕರ್ ಭಾರತದಿಂದಲೇ ಹಳ್ಳಿಯನ್ನು ಮೋಕ್ಷ ಮಾಡಬೇಕು ಅಂದುಕೊಂಡಿದ್ದರು. 'ಒಬ್ಬರಿಗೆ ರಮ್ಯ ಕನಸಾದರೆ ಇನ್ನೊಬ್ಬರಿಗೆ ಕಟು ವಾಸ್ತವವಾಗಿತ್ತು' ಆಗ ವಾಸ್ತವವೂ ಹಾಗೆ ಇತ್ತು. ಹಳ್ಳಿಗಳ ತಳಸಮುದಾಯಗಳು ಉಸಿರಾಡದೆ ಇದ್ದವು. ಆಗ ಅಂಬೇಡ್ಕರರಿಗೆ ಹಳ್ಳಿ ದುಃಸ್ವಪ್ನದಂತೆ ಕಂಡಿದ್ದರೆ ಅದರಲ್ಲೇನು ಆಶ್ಚರ್ಯ? ಆದರೆ ಈಗ? ಈಗ ಯಾವುದೇ ಒಂದು ಹಳ್ಳಿ ನೋಡಿದರೆ, ಮಂಡಲ ಪಂಚಾಯ್ತಿ ವ್ಯವಸ್ಥೆ ಬಂದ ಮೇಲೆ ಎಲ್ಲಾ ಜಾತಿಗಳ ಒಳಗೂ ನಾಕಾರು ಪಕ್ಷಗಳಿಗೆ ಅನುಗುಣವಾಗಿ ನಾಕಾರು ಗುಂಪುಗಳಾಗಿವೆ. ಇದು ಪಕ್ಷ ಸ್ಪರ್ಧೆ ಕಾರಣವಾಗಿ ತಾತ್ಕಾಲಿಕ ನಿಜ. ಈ ಕ್ರಿಯೆಯೊಳಗೆ ಜಾತಿಬಿಟ್ಟ ಚಲನೆಯೂ ಸ್ವಲ್ಪವಾದರೂ ಇದೆ.ಇದನ್ನೂ ನಾವು ಗಮನಿಸಬೇಕು. ಜೊತೆಗೆ ಮಂಡಲ ಪಂಚಾಯ್ತಿ ಅಧಿಕಾರ ಸ್ಥಾನಮಾನಗಳಿಗೆ ಮೀಸಲಾತಿ ಬಂದು ನಮ್ಮೂರಲ್ಲೇ ದಲಿತ ಹೆಣ್ಣುಮಗಳೊಬ್ಬಳು ಅಧ್ಯಕ್ಷೆಯೂ ಆಗಿಬಿಟ್ಟಳು. ನನ್ನ ಬಾಲ್ಯದಲ್ಲಿ ಆ ಊರಿನ ಗ್ರಾಮಪಂಚಾಯ್ತಿ ಕಛೇರಿ ಒಳಕ್ಕೆ ಅಸ್ಪೃಶ್ಯರು ಹೋಗುವುದನ್ನು ಕಲ್ಪಿಸಿಕೊಳ್ಳಲೂ ಕಷ್ಟವಾಗುತ್ತಿದ್ದ ನನಗೆ ಇದಾಗಿರುವುದು ಕಣ್ಮುಂದೆ ಇದೆ. ಈ ಚಲನೆಯನ್ನೂ ನಾವು ಕಾಣಬೇಕಲ್ಲವೇ?

ಈ ಗೊಂದಲದೊಳಗೆ ನಾವು ಗಾಂಧಿಯವರ ಸಮಕಾಲೀನರಾಗಿ ನೋಡಿದರೆ, ಗಾಂಧಿಯವರ 1920ರ ಸುಮಾರಿನ ಅಭಿಪ್ರಾಯಗಳನ್ನು ಅಂದರೆ–

- ಹಿಂದೂಧರ್ಮ ಜಾತಿಪದ್ಧತಿಯ ಆಧಾರದ ಮೇಲೆ ಸ್ಥಾಪಿತ.
- ಸ್ವರಾಜ್ಯದ ಬೀಜಗಳು ಜಾತಿಪದ್ಧತಿಯಲ್ಲಿದೆ.
- ಸಮಾಜದ ನಿಯಂತ್ರಣಕ್ಕೆ ಮತ್ತೊಂದು ಹೆಸರೇ ಜಾತಿ.
- ರಾಷ್ಟ್ರೀಯ ಐಕ್ಯತೆಗೆ ಸಹಭೋಜನ, ಅಂತರ್ಜಾತಿ ವಿವಾಹಗಳ ಅಗತ್ಯವಿಲ್ಲ.
- ಜಾತಿಪದ್ಧತಿ ಸಮಾಜವೊಂದರ ಸ್ವಾಭಾವಿಕ ಶ್ರೇಣೀಕರಣ .
- ಜಾತಿಪದ್ಧತಿ ನಾಶಪಡಿಸಲು ಯತ್ನಿಸುವ ಯಾರದೇ ಪ್ರಯತ್ನಗಳಿಗೂ ನನ್ನ ವಿರೋಧವಿದೆ ಇತ್ಯಾದಿ ಇತ್ಯಾದಿ..

1920ರ ಆಜುಬಾಜಿನ ಗಾಂಧಿ ಆಲೋಚನೆಗಳನ್ನು ನಾವೂ ಆ ಕಾಲಮಾನದಲ್ಲಿದ್ದರೆ ಅವನ್ನು ವಿರೋಧಿಸಬೇಕಾಗುತ್ತದೆ, ಪ್ರತಿಭಟಿಸಬೇಕಾಗುತ್ತದೆ, ಅಂಬೇಡ್ಕರ್ ಅವರಷ್ಟೇ ಉಗ್ರವಾಗಿ.

ಆದರೆ ಆ ಕರ್ಮಠ ಸನಾತನಿ ಗಾಂಧಿ ಅಲ್ಲೇ ಉಳಿಯುವುದಿಲ್ಲ. ದಿನದಿನವೂ ಸತ್ತು ದಿನದಿನವೂ ಹುಟ್ಟುತ್ತಾನೆ. 1928ರ ಹೊತ್ತಿಗೆ ಒಂದೇ ವರ್ಣದ ಉಪಜಾತಿಗಳ ಜತೆ ಅಂತರ್‌ವಿವಾಹವನ್ನು ಪ್ರೋತ್ಸಾಹಿಸುವ ಗಾಂಧಿ ಒಂದೊಂದೇ ಹೆಜ್ಜೆ ಇಡುತ್ತ 1946ರ ಹೊತ್ತಿಗೆ ಸವರ್ಣ ಹಿಂದು ಮತ್ತು ಹರಿಜನರ ನಡುವೆ ನಡೆಯುವ ಅಂತರ್‌ವಿವಾಹಗಳಿಗೆ ಮಾತ್ರವೇ ತಾವು ಹೋಗುವುದಾಗಿ ನೇಮ ಮಾಡಿಕೊಳ್ಳುತ್ತಾರೆ. ಮುಂದೆ ವಧುವರರಲ್ಲೊಬ್ಬರು ಹರಿಜನರಲ್ಲದ ಪಕ್ಷದಲ್ಲಿ ಸೇವಾಗ್ರಾಮದಲ್ಲಿ ಮದುವೆಯಾಗುವ ಅವಕಾಶವನ್ನೇ ನಿರಾಕರಿಸುತ್ತಾರೆ. ಇನ್ನೂ ಮುಂದೆ 'ನಾವು ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕೆಂದರೆ ಜಾತಿಯೂ ಹೋಗಲೇಬೇಕು' ಎಂಬಲ್ಲಿಗೆ ಬಂದು ನಿಲ್ಲುತ್ತಾರೆ. 1946ರ ಗಾಂಧಿ ಆಲೋಚನೆಗಳು 1920ರಲ್ಲಿಯೇ ಕಾಣಿಸಿಕೊಂಡಿದ್ದರೆ ಏನಾಗುತ್ತಿತ್ತು? ಭಾರತದ ಜಾತಿಧರ್ಮಗಳು ಆ ಗಾಂಧಿಯನ್ನೇ ಅಡ್ಡಡ್ಡ ನುಂಗಿ ನೊಣೆದುಬಿಡುತ್ತಿದ್ದವು. ಈ ಗಾಂಧೀಯೇ ಇರುತ್ತಿರಲಿಲ್ಲ. ಜೊತೆಗೆ ಭಾರತೀಯ ಜಾತಿ ವರ್ಣ ಸಮಾಜ ಸ್ವಲ್ಪವೂ ಅಲುಗಾಡದೆ ತಲೆ ಎತ್ತುವ ಅಸ್ಪೃಶ್ಯರ ಬಲಿ ತೆಗೆದುಕೊಳ್ಳುವುದನ್ನೇ ಧರ್ಮವೆಂದುಕೊಳ್ಳುತ್ತಿತ್ತು. ಇದನ್ನೂ ನಾವು ಕಾಣಬೇಕು.

ಆದರೂ ಅಷ್ಟೊಂದು ಬೆಳವಣಿಗೆ ಒಂದೇ ಜೀವಿತದಲ್ಲಿ ಆಗುವ ಗಾಂಧಿಯು ವೃತ್ತಿ ಬಗ್ಗೆ ಮಾತ್ರ ಕೌಶಲ್ಯದ ಕಾರಣವಾಗಿ ವಂಶವೃತ್ತಿ ಹೇಳುತ್ತಿದ್ದುದನ್ನು ಕೊನೆಯವರೆಗೂ ಉಳಿಸಿಕೊಂಡರೇ ಹೇಗೆ ನನಗೆ ಗೊತ್ತಿಲ್ಲ. ಯಾವುದೇ ವೃತ್ತಿಯಾದರೂ ಜೀವನ ನಿರ್ವಹಣೆಗಾಗುವಷ್ಟು ಮಾತ್ರ ವೇತನ ಎಂಬ ಆಶಯ ಅವರಿಗಿದ್ದರೂ ಕೂಡ, ಅವರ ಈ ವಂಶವೃತ್ತಿ ಅಭಿಪ್ರಾಯವನ್ನು ಸಹಿಸಲು ಕಷ್ಟವಾಗುತ್ತದೆ. ಯಾಕೆಂದರೆ ವಂಶವೃತ್ತಿಯಲ್ಲಿ ಕೌಶಲ್ಯ ಹೆಚ್ಚಿದರೂ ಅದು ಯಾಂತ್ರಿಕವಾಗಿ ಕೊನೆಯಾಗುತ್ತದೆ. ಆದರೆ ವಂಶವೃತ್ತಿ ಬದಲಾವಣೆಯಲ್ಲಿ ಆ ವೃತ್ತಿಗೇನೆ ಸೃಜನಶೀಲತೆ ಉಂಟಾಗಿ ಹೊಸ ಸಾಧ್ಯತೆಗಳು ಹೆಚ್ಚುತ್ತವೆ. ಇದನ್ನು ಸದಾ ಚಲಿಸುವ ಗಾಂಧಿಗೆ ಮನದಟ್ಟು ಮಾಡಲು ನಾವು ಅವರೊಡನೆ ಒಂದು ಸಣ್ಣ ಜಗಳ ಮಾಡಬೇಕಾಗಿದೆ. ಅಥವಾ 1946ರಲ್ಲಿ 'ವರ್ಗರಹಿತವಾದ ಜಾತಿರಹಿತವಾದ ಇಂಡಿಯಾ ನಿರ್ಮಿಸಲು ತಾನು ಪ್ರಯತ್ನಿಸುತ್ತಿರುವುದಾಗಿ ಗಾಂಧಿ ಹೇಳುತ್ತಾ ಭಾರತದಲ್ಲಿ ಒಂದೇ ಜಾತಿಯು ಉಳಿದಿರುವಂತಹ ಮತ್ತು ಬ್ರಾಹ್ಮಣರು ಹರಿಜನರನ್ನು ಸಹಜವಾಗಿ ಮದುವೆಯಾಗುವಂತಹ ಸಮಾಜಕ್ಕಾಗಿ ಗಾಂಧಿ ಹಂಬಲಿಸುತ್ತ ಒಂದು ನುಡಿ, ನುಡಿಯುತ್ತಾರೆ "ಅಸಮಾನತೆಯಿಂದ ಹಿಂಸೆಯು ಹುಟ್ಟಿಕೊಳ್ಳುತ್ತದೆ. ಮತ್ತು ಸಮಾನತೆಯಿಂದ ಅಹಿಂಸೆಯು ಹುಟ್ಟಿಕೊಳ್ಳುತ್ತದೆ" ಎಂದು ಅಹಿಂಸೆ ಮತ್ತು ಸಮಾನತೆಯನ್ನು ಒಂದೇ ನಾಣ್ಯ ಮಾಡಿಬಿಡುತ್ತಾರೆ. ತನ್ನ ದರ್ಶನದ ಅಂತಿಮ ಸ್ಥಿತಿಯಲ್ಲಿ 'state withers away' ಎಂಬ ಮಹಾವಾಕ್ಯ ನೀಡಿದ ಮಾರ್ಕ್ಸ್‌ನ ಕಾಣ್ಕೆಗೆ ಈ ನುಡಿ ಸಮಸಮವಾಗಿದೆ.

ಈ ಗಾಂಧೀ ಅಂಬೇಡ್ಕರ್ ಈರ್ವರೂ ಕೊನೆಕೊನೆಗೆ ತಲುಪಿದ ಸ್ಥಿತಿಯಲ್ಲಿ ಅವರನ್ನು ನೋಡಿದಾಗ ಅವರು ಇಂದು ಬದುಕಿದ್ದರೆ ಅವರು ಎಲ್ಲಿರುತ್ತಿದ್ದರು? ಹೇಗಿರುತ್ತಿದ್ದರು? ವೃದ್ಧಾಶ್ರಮವೊಂದಕ್ಕೆ ಎಸೆಯಲ್ಪಟ್ಟು ಒಂದೇ ಕಡೆ ವಾಸಿಸುತ್ತ ಅವರ ಗೊಣಗಾಟ ಇವರಿಗೆ ಮಾತ್ರ ಕೇಳಿಸುತ್ತಾ ಇವರ ಗೊಣಗಾಟ ಅವರಿಗೆ ಮಾತ್ರ ಕೇಳಿಸುತ್ತಾ ತಮ್ಮ ಕಣ್ಮುಂದೆ ಜರುಗುತ್ತಿರುವುದನ್ನೆಲ್ಲಾ ಅಸಹಾಯಕರಾಗಿ, ತಲೆ ಮೇಲೆ ಕೈಯಿಟ್ಟು ಆಕಾಶ ನೋಡುತ್ತಿದ್ದರೆ? ಆಗಾಗ ಅವರಲ್ಲಿಗೆ ಹೋಗಿ ಚೇಷ್ಟೆ–ಕೀಟಲೆ ಮಾಡುವ ಡಿ.ಆರ್.ನಾಗರಾಜ್ ಎಂಬ ಬಚ್ಚಾ ಹೇಳಿದ ಒಂದು ಮಾತು– 'ಹಳ್ಳಿಯ ಜೀವಂತ ಸಂದರ್ಭದೊಳಗೆ ಅಂಬೇಡ್ಕರ್‌ವಾದಿಯಾಗಿ

ಹಾಗೂ ಅದರ ಹೊರಗೆ ಗಾಂಧಿವಾದಿಯಾಗಿ ಕಂಡರೆ ಅದು ಅಧಿಕೃತವಾದದ್ದು' ಎಂಬ ಆ ನುಡಿಯೊಳಗೆ ತಮಗೂ ತಿಳಿಯದಿದ್ದ ನಿಧಿ ಅಡಗಿದೆ ಎಂದು ಗಾಂಧಿ ಅಂಬೇಡ್ಕರರಿಗೂ ಅನಿಸಿ ಆ ನಿಧಿಯ ಗೆಜ್ಜೆ ಸದ್ದು ಆಲಿಸಿ ಎಂದು ಈ ಇಬ್ಬರೂ ಕೂಗಿ ಕೂಗಿ ಹೇಳಿಯೂ ಕೂಡ ಕೇಳಿಸಿಕೊಳ್ಳದ ಜನಸ್ತೋಮ ಕಂಡು ತಾವು ಸತ್ತವರ ನಡುವೆ ಬದುಕುತ್ತಿರ್ದ್ದೇವೇನೋ ಎಂದು ಅನ್ನಿಸಿ ದಿಕ್ಕು ಕಾಣದೆ ಆ ಈರ್ವರೂ ತಮ್ಮ ಸಾವಿಗಾಗಿ ಪ್ರಾರ್ಥನೆ ಮಾಡುತ್ತಿರುವಂತೆ ಗೋಚರಿಸುತ್ತಾರೆ.

ಈ ದೃಶ್ಯಾವಳಿ ನಮ್ಮ ಕಣ್ಮುಂದೆ ಬರಬಾರದು. ಅದಕ್ಕೆ ಬೇಕಾಗಿರುವುದು ಇಷ್ಟು : ನಾವು ಈ ಇಬ್ಬರ ಸಮಕಾಲೀನರಾದರೆ ಜಗಳ ಅನಿವಾಯ, ಅಲ್ಲಿ–ಇಲ್ಲಿ ಸ್ವಲ್ಪ ಸಮೀಪಕ್ಕೆ ಬರಬಹುದು. ಆದರೆ ಇಡಿಯಾಗಿ ನೋಡಿದರೆ ಅವರಿಬ್ಬರ ನಡುವಿನ ಜಗಳವೂ ಸರಸ ಆಗಲೂಬಹುದು. ಅವರಲ್ಲಿ ಯಾರು ಗಂಡು ಯಾರು ಹೆಣ್ಣು ಎಂದು ನಿರ್ಧರಿಸಲು ಅವರವರ ಭಾವಕ್ಕೆ ಬಿಡುವೆ. ಯಾಕೆಂದರೆ 'ಅಂಬೇಡ್ಕರ್ ತಾರತಮ್ಯಕ್ಕೆ ಒಳಗಾಗಿ ಮುನಿಸಿಕೊಂಡು ಹೊರಗೆ ಇರುವ ಮಗ' ಎಂದು ನಾನು ಹೇಳಿದ್ದರಲ್ಲಿ, ಮಗ ಎಂದರೆ ಹಕ್ಕಿರುವ ವಾರಸುದಾರ, out cast ಆಗಿದ್ದಾನೆ ಎಂಬರ್ಥದಲ್ಲಿ ಗ್ರಹಿಸದೆ ಕೆಲವರು ಪದಪದಾರ್ಥ ಅರ್ಥಮಾಡಿ ಕೊಂಡುಬಿಟ್ಟರು! ಅದಕ್ಕಾಗಿ ಇದನ್ನು ಅವರವರ ಭಾವಕ್ಕೆ ಬಿಡುವೆ. ಆದರೆ ನಾವು ಗೋರಿ ಅಗೆದು ಈ ಇಬ್ಬರ ಮೂಳೆಗಳನ್ನು ಎಣಿಸುತ್ತಾ, ಪೂಜಿಸುತ್ತಾ, ತರ್ಕಿಸುತ್ತಾ, ಭೇದ ಹುಡುಕುತ್ತಾ ಮಡಿಮಾಡಿ ಅವರು ಮಡಿಯುವಂತೆ ಮಾಡುತ್ತಿರುವುದನ್ನು ಕೈಬಿಡಬೇಕಾಗಿದೆ,


ಈಗ ಈ ಇಬ್ಬರನ್ನೂ ನಾವು ಜೊತೆಗೂಡಿಸಿ ಒಳಗೊಂಡರೆ, ಅವರು ಬಡಿದಾಡುತ್ತಿದ್ದ ಕಾಲಮಾನದಲ್ಲಿ ಕಪ್ಪುಬಣ್ಣವು ಕಪ್ಪು ಬಣ್ಣ ಮಾತ್ರವಾಗಿತ್ತು. ಬಿಳಿಯ ಬಣ್ಣವು ಬಿಳಿಯ ಬಣ್ಣ ಮಾತ್ರವಾಗಿತ್ತು. ಇಂದು ಕಪ್ಪು ಬಣ್ಣದೊಳಗೇನೆ ಸಾವಿರಾರು ಬಣ್ಣಬಣಗಳಾಗಿಬಿಟ್ಟಿವೆ, ಬಿಳಿಯ ಬಣ್ಣದೊಳಗೂ ಸಾವಿರಾರು ಬಣ್ಣ ಬಣಗಳಿವೆ. ಬಣ್ಣ ಬಣಗಳಿಗೆ ತಕ್ಕಂತೆ ಸುಲಿಗೆಗಳೂ ಥರಾವರಿಗಳಾಗಿ ಆ ಸಂಖ್ಯೆಯೂ ವಿಪುಲವಾಗುತ್ತಿವೆ. ಜೊತೆಗೆ ಸುಲಿಗೆ ಇಂದು ಸುಲಿಗೆಯಾಗಿ ಸುಲಿಯುತ್ತಿಲ್ಲ, ರಕ್ಷಕನ ಮುಖವಾಡ ಹಾಕಿ ಸುಲಿಯುತ್ತಿದೆ. ಇದನ್ನು ಮಕ್ಕಳ ಮನರಂಜನಾ ಕಥೆಯಾಗಿಸಿ ಎಳೆಯ ಮಕ್ಕಳಲ್ಲೇ ಅಂದರೆ ಗಿಡವಾಗಿದ್ದಾಗಲೇ ಬಗ್ಗಿಸಿ ಸುಲಿಗೆಯನ್ನು ಒಪ್ಪಿತ ಮೌಲ್ಯವಾಗಿಸುವ ಹೊಸಹೊಸ ಬಲೆಗಳನ್ನು ಈ ಭೂಮಿ ಮೇಲೆ ನೇಯಲಾಗುತ್ತಿದೆ. ಗೆಳೆಯ ರಾಜೇಂದ್ರ ಚೆನ್ನಿ, ತಮ್ಮ 'ದಂತಗೋಪುರ ಮತ್ತು ಮಾರುಕಟ್ಟೆ ರಾಜಕೀಯ' ಲೇಖನದಲ್ಲಿ ಕಾಮಿಕ್ಸ್‌ಗಳಲ್ಲಿ ವಸಾಹತುಶಾಹಿ ಒಳಚರಿತ್ರೆಗಳಿವೆ ಎಂದು ಹೇಳುತ್ತಾ 'ಆದಿವಾಸಿಗಳ ಮೇಲೆ ಹುಕುಂ ಮಾಡುವ ಫ್ಯಾಂಟಮ್, ಆಫ್ರಿಕಾವನ್ನು ವಸಾಹತುವನ್ನಾಗಿ ಮಾಡಿದ ಬಿಳಿಯನ ಮೂಲಮಾದರಿ ಎನ್ನುವುದನ್ನೂ, ಹಾಗೇ ನಿಸರ್ಗ ಮತ್ತು ಪ್ರಾಣಿಗಳ ಮೇಲೆ ರಮ್ಯವಾದ ರೀತಿಯಲ್ಲಿ ಆಳ್ವಿಕೆ ಮಾಡುವ ಟಾರ್ಜನ್, ನಿಸರ್ಗದ ಮೇಲೆ ದಾಳಿ ಮಾಡಿ ಅದನ್ನು ಬಳಸಿಕೊಳ್ಳುವ ಯೂರೋಪಿಯನ್ ಮನುಷ್ಯನ ಸಂಕೇತವೆನ್ನುವುದನ್ನು ಮರೆಯುತ್ತೇವೆ' ಎಂದು ಅಪೂರ್ವ ಒಳನೋಟ ನೀಡುತ್ತಾರೆ. ಹಾಗೇ ಚಿಂತಕ ಜೆರೆಮಿ ಸೀಬ್ರೂಕ್ ಬರೆಯುತ್ತಾ – 'ಜಗತ್ತಿನ ಕಾರ್ಮಿಕರೆಲ್ಲರೂ ಒಟ್ಟಾಗಿ ಜಗತ್ತನ್ನು ದಾಸ್ಯದಿಂದ ವಿಮುಕ್ತಗೊಳಿಸಬಲ್ಲರು' ಎಂಬ ಚಿಂತನೆ ದುರ್ಬಲಗೊಂಡಾಗ ಈಗ 'ನಮಗೆ ಬೇಕಿರುವುದೆಲ್ಲವನ್ನೂ ಬಂಡವಾಳಶಾಹಿಯ ಮೂಲಕ ಮಾತ್ರ ಪಡೆದುಕೊಳ್ಳಲು ಸಾಧ್ಯ' ಎಂಬ ಪುರಾಣ ಸೃಷ್ಟಿಸಲಾಗಿದೆ ಎನ್ನುತ್ತಾರೆ.

ಇಂದು ಜೀವನ ಎಂದರೆ ಹಣದಿಂದ ಹಣಕ್ಕಾಗಿ ಹಣಕ್ಕೋಸ್ಕರ ಎಂಬಂತಾಗಿಬಿಟ್ಟಿದೆ. ಸಮಾನತೆ ಸಮತ್ವದ ಆಶಯಗಳು ಕಣ್ಣುಬಾಯಿ ಬಿಡುತ್ತಿವೆ. ಬಂಡವಾಶಾಹಿಯೇ ಇಂದು ಜಗತ್ತಿನ ಹಸಿವಿನ ಬಗ್ಗೆ ಮಾತಾಡುತ್ತಿದೆ, ಉದ್ಯೋಗದ ಬಗ್ಗೆ ಮಾತಾಡುತ್ತಿದೆ, ಬಡವರ ಉದ್ಧಾರ ತನ್ನ ಕೈಲಿ ಮಾತ್ರ ಎಂಬಂತೆ ಬಿಂಬಿಸಿಕೊಂಡು ನಂಬಿಸುತ್ತಿದೆ. ಮಾಟಮಂತ್ರ ಮಾಯಾಬಜಾರ್ ಎಲ್ಲವೂ ವಿಜ್ಞಾನದ ಭಾಷೆಯಲ್ಲಿ ಮಾತಾಡುತ್ತಿವೆ.

ಹೀಗಿರುವಾಗ ವಿಮೋಚನೆ ಹೇಗೆ? ಅಥವಾ ಯಾರು? ಖಳನಾಯಕನು ನಾಯಕನನ್ನು ತುಳಿದಿಟ್ಟು ತಾನೇ ನಾಯಕನ ಮಾತುಗಳನ್ನಾಡುತ್ತಿದ್ದಾನೆ. ಜನ ಮರುಳಾಗುತ್ತಿದ್ದಾರೆ. ಜೊತೆಗೆ ಈ ಕಾಲ ಮಾಹಿತಿಯ ಯುಗ. ಮನುಷ್ಯ ಹೆಚ್ಚೆಚ್ಚು ಎಚ್ಚರವನ್ನೂ ಪಡೆಯುತ್ತಿದ್ದಾನೆ. ಎಚ್ಚರ ಇಲ್ಲದಿದ್ದಾಗ ಅಸಮಾನತೆ ತಾರತಮ್ಯಗಳು ಇದ್ದರೂ ಹಿಂದೆ ಎಂಥದೋ ಜಡ ಜಡ್ಡು ನೆಮ್ಮದಿ ಇದ್ದರೆ ಇಂದು ಎಚ್ಚರದೊಡನೆ ತಾರತಮ್ಯ ಅಸಮಾನತೆಗಳು ಉಲ್ಬಣಗೊಂಡು ನೆಮ್ಮದಿಗೆಟ್ಟು ಭೂಮಿ ಬೇಯುತ್ತಿದೆ.

ಹೀಗಿದ್ದೂ ಸಮಾನತೆ ಸಮತ್ವದ ಕನಸನ್ನು ಸಾಕ್ಷಾತ್ಕರಿಸಬೇಕಾದ ಸಂಘಟನೆಗಳು, ಪಕ್ಷಗಳೂ ಒಟ್ಟಾಗುತ್ತಿಲ್ಲ, ತಂತಮ್ಮ ಸೈದ್ಧಾಂತಿಕತೆಗೆ ಅನುಗುಣವಾಗಿ ತಮ್ಮವೇ ಪ್ರತ್ಯೇಕ ಶತ್ರುಗಳನ್ನು ಗುರುತಿಸಿಕೊಂಡು ಆ ಶತ್ರುಗಳಿಗೆ ತಕ್ಕಂತೆ ತಮ್ಮ ಪ್ರತ್ಯೇಕತೆ ಆಚರಿಸುತ್ತಿವೆ. ಮಡಿ ಮಾಡ್ತಾರಲ್ಲ ಹಾಗೆ. ಕಾಲಾನುಕ್ರಮದಲ್ಲಿ ಜಡತೆ ಆವರಿಸಿಕೊಂಡಾಗ ಅವರು ಗುರುತಿಸಿಕೊಂಡಿದ್ದ ಶತ್ರು ಮರೆತು ಹೋಗಿ ಅವರ ಅಕ್ಕಪಕ್ಕದವರೇ ಶತ್ರುಗಳಾಗಿ ಬಿಡಬಹುದು. ಇದೂ ಆಗುತ್ತಿದೆ. ಹೀಗಿರುವಾಗ ತುಳಿತಕ್ಕೊಳಗಾದ ಜನತೆ ಒಟ್ಟಾಗುವುದೆಲ್ಲಿ ಬಂತು? ಇದರೊಡನೆ ಖಾಸಗಿ ಬಂಡವಾಳದ ಕೃಪಾಪೋಷಿತ ಕೆಲವು ಎನ್.ಜಿ.ಓಗಳು ಜನಪರ ಶಕ್ತಿಗಳಿಗಿಂತಲೂ ಹೆಚ್ಚು ಜನಪರವಾಗಿ ಮಾತಾಡುತ್ತ ಜನಪರ ಆಂದೋಲನಗಳಿಗೆ ತೊಡರುಗಾಲು ಹಾಕುತ್ತಿವೆ. ಜೊತೆಗೆ ಸಮತ್ವ–ಸಮಾನತೆ ಆಶಯದ ದಲಿತ, ಮಹಿಳೆ, ಪರಿಸರ, ರೈತ ಮುಂತಾದ ಸಂಘಟನೆಗಳು, ಪಕ್ಷಗಳು ತಂತಮ್ಮ ಐಡೆಂಟಿಟಿ ರಾಜಕಾರಣವನ್ನೇ ಆನೆಕಾಲು ರೋಗದಂತೆ ದೊಡ್ಡದು ಮಾಡಿಕೊಂಡು ಸಮತ್ವ ಸಮಾನತೆಯನ್ನು ಮರೆತು ತೆವಳುತ್ತಿವೆ. ಇದುವರೆಗಿನ ಭೂಮಿ ಮೇಲಿನ ಶೋಷಣೆಯ ಇತಿಹಾಸದಲ್ಲಿ ಪ್ರಕೃತಿ ನಾಳೆಗೂ ಉಳಿಯುತ್ತಿತ್ತು. ಇಂದಿನ ಜಾಗತೀಕರಣ ಖಾಸಗೀಕರಣದ ದಾಹದಲ್ಲಿ ಪ್ರಕೃತಿ ನಾಳೆಗೆ ಉಳಿಯುವುದಿಲ್ಲವೇನೋ ಎಂಬಷ್ಟು ವೇಗವಾಗಿ ಧ್ವಂಸೀಕರಣ ನಡೆಯುತ್ತಿದೆ.

ಈ ಧ್ವಂಸೀಕರಣ ಯುಗದಲ್ಲಿ ಗಾಂಧಿ ಒಬ್ಬ ಸಾಕೇ? ಅಂಬೇಡ್ಕರ್ ಒಬ್ಬ ಸಾಕೇ? ಅಥವಾ ಈ ಇಬ್ಬರೂ ಜತೆಗೂಡಿದರೆ ಅದಷ್ಟೇ ಸಾಕೇ? ಸಾಲದು ಅನಿಸುತ್ತದೆ. ಲೋಹಿಯಾ? ಸಾಲದು ಅನಿಸುತ್ತದೆ. ಮಹರ್ಷಿ ಮಾರ್ಕ್ಸ್‌ನನ್ನೂ ಜತೆಗೂಡಿಸಬೇಕಾಗಿದೆ. ಅಷ್ಟೂ ಸಾಲದು ಇನ್ನೂ. ತಮಗೆ ಬೇಕಾದ ಒಬ್ಬೊಬ್ಬರೇ ಸಾಕು ಎನ್ನುವವರು ಹೆಣದ ಮುಂದೆ ಎದೆ ಬಡಿದುಕೊಂಡು ಗೋಳಾಡುತ್ತಿರುವವರಂತೆ ಕಾಣಿಸುತ್ತಾರೆ. ಒಂದು ಸಲ ನಾವು ಕೊಡವಿಕೊಂಡು ಪೊರೆ ಕಳಚಿ ಮರುಹುಟ್ಟು ಪಡೆಯಬೇಕಾಗಿದೆ. ನಮಗೆ ಬುದ್ಧ ವಚನಕಾರರ ಸ್ಪರ್ಶವೂ ಬೇಕಾಗಿದೆ. ■



ವಿಶ್ವವಿಕಾಸಕ್ಕೆ ಗಾಂಧಿ ಪಥ

– ಜಿ.ಎಸ್.ಜಯದೇವ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನಿನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ನಡುವೆ ನಡೆದ ವಾಕ್ಸಮರವನ್ನು ಇಡೀ ಜಗತ್ತು ವೀಕ್ಷಿಸಿತು. ವೀಕ್ಷಿಸುವಂತೆ ಸಜ್ಜುಗೊಳಿಸಲಾಗಿತ್ತು. ಇಸ್ರೇಲ್– ಹಮಾಸ್ ಬಂಡುಕೋರರ ನಡುವಣ ಯುದ್ಧ ಅಥವಾ ರಷ್ಯಾ ಉಕ್ರೇನ್ ಯುದ್ಧದಿಂದ ಆಗಿರುವ ಹಿಂಸೆ, ರಕ್ತಪಾತಗಳಿಗೆ ಸ್ಪಂದಿಸುವ ಹೃದಯವಂತಿಕೆಯನ್ನು ಜಗತ್ತು ಕಳೆದುಕೊಂಡಿರುವಂತೆ ತೋರುತ್ತಿದೆ.

ಕಳಿಂಗ ಯುದ್ಧದ ರಕ್ತಪಾತವನ್ನು ಕಂಡ ಕಟುಕ ಹೃದಯದ ಚಕ್ರವರ್ತಿ ಅಶೋಕನು ಮರುಗಿ, ಯುದ್ಧದ ನಿರರ್ಥಕತೆಯನ್ನು ಮನಗಂಡು ಅಹಿಂಸಾ ಮಾರ್ಗ ಹಿಡಿದ. ಟ್ರಂಪ್, ಪುಟಿನ್, ನೆತನ್ಯಾಹು ಅವರಂತಹ ಆಧುನಿಕ ಜಗತ್ತಿನ ನಮ್ಮ ನಾಯಕರು ಇಂತಹ ಸಂವೇದನಾಶೀಲತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರಲ್ಲ, ಇದಕ್ಕೆ ಕಾರಣವೇನು? ಸರಾಸರಿಯಾಗಿ ಇಡೀ ಮನುಷ್ಯಕುಲವೇ ನೋವಿಗೆ ಸ್ಪಂದಿಸುವ ಗುಣವನ್ನು ಕಳೆದುಕೊಳ್ಳುವಂತೆ ಪ್ರಭಾವಿಸುತ್ತಿರುವ ಇಂದಿನ ಆಧುನಿಕತೆಯ ಪ್ರೇರಣೆಗಳಾದರೂ ಯಾವುವು?

ಆರ್ಥಿಕ ಪ್ರಗತಿ ಮತ್ತು ತಾಂತ್ರಿಕ ಸಾಧ್ಯತೆಗಳು ಪ್ರಬಲ ಸಮುದಾಯಗಳ, ಪ್ರಬಲ ದೇಶಗಳ ಪರವಾಗಿ ಮಾತ್ರ ಕೆಲಸ ಮಾಡುತ್ತ 'ಬಲಿಷ್ಠನಿಗೆ ಮಾತ್ರ ಬಾಳು' ಎಂಬಂತಹ ಕಾಡುನಿಯಮಕ್ಕೆ ಎಡೆಮಾಡಿಕೊಡಬೇಕೆ? ಕ್ವಾಂಟಮ್ ಕಂಪ್ಯೂಟರ್ ತಂತ್ರಜ್ಞಾನವನ್ನು ಸಾಧಿಸಲು ನಡೆದಿರುವ ಸ್ಪರ್ಧೆಯನ್ನೇ ನೋಡಿ. ನಮ್ಮ ಸೂಪರ್ ಕಂಪ್ಯೂಟರ್‌ಗಳಿಗೆ ಸಾವಿರಾರು ವರ್ಷ ಹಿಡಿಯುವ ಲೆಕ್ಕಾಚಾರವನ್ನು ಈ ಕ್ವಾಂಟಮ್ ಕಂಪ್ಯೂಟರ್‌ಗಳು ಕೆಲವು ಸೆಕೆಂಡುಗಳಲ್ಲಿ ಮಾಡಿ ಮುಗಿಸುತ್ತವೆಯಂತೆ. ಹೀಗೆ ವಿವರಿಸುತ್ತಿದ್ದ ವಿಜ್ಞಾನಿ ಹೇಳಿದ ಮತ್ತೊಂದು ಮಾತೆಂದರೆ 'ಯಾವ ದೇಶ ಕ್ವಾಂಟಂ ಕಂಪ್ಯೂಟರ್‌ಗಳನ್ನು ಮೊದಲು ನಿರ್ಮಿಸುತ್ತದೋ ಅದು ಜಗತ್ತನ್ನು ಆಳುತ್ತದೆ!'

ಹೊಸ ತಂತ್ರಜ್ಞಾನದ ಸಾಧ್ಯತೆಗಳಿಂದ ಬಡತನವನ್ನು ಹೋಗಲಾಡಿಸಬಹುದು, ಅಂತರರಾಷ್ಟ್ರೀಯ ಅಪಾರ್ಥಗಳನ್ನು ಪರಿಹರಿಸಿ ಸೌಹಾರ್ದ ಸಂಬಂಧಗಳನ್ನು

ಕಟ್ಟಬಹುದು ಅಥವಾ ಕೆಡುತ್ತಿರುವ ಹವಾಮಾನ ಬದಲಾವಣೆಯನ್ನು ತಡೆಯಬಹುದು ಎಂದು ಈ ವಿಜ್ಞಾನಿಗೆ ಹೊಳೆಯಲೇ ಇಲ್ಲ. ಮನುಷ್ಯನ ಮನಸ್ಸು ನೆಮ್ಮದಿಗಿಂತ ವಿಧ್ವಂಸಕತೆಯ ಕಡೆಗೇ ವಾಲುತ್ತದಲ್ಲ, ಹೀಗೇಕೆ?

ಇಂತಹ ಪ್ರಶ್ನೆ ಎದುರಾದಾಗಲೆಲ್ಲ ಗಾಂಧೀಜಿ ನೆನಪಿಗೆ ಬರುತ್ತಾರೆ. ತಂತ್ರಜ್ಞಾನದ ಸಾಧ್ಯತೆಗಳು ಹೆಚ್ಚಾದಂತೆಲ್ಲ ಮನುಷ್ಯರು ತಮ್ಮ ಒಡನಾಡಿಗಳ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡು ವಿಜೃಂಭಿಸುವ ಮನಃಸ್ಥಿತಿಗೆ ತಲುಪುತ್ತಾರೆ ಎಂಬುದನ್ನು ಅವರು ಗುರುತಿಸಿದ್ದರು. ಶಾಂತಿಗಿಂತ ಯುದ್ಧದಲ್ಲಿ ವಿಜಯಿಯಾಗುವ ವಿಕೃತ ತವಕಕ್ಕೆ, ನೆಮ್ಮದಿಯ ಬದುಕಿಗಿಂತ ವೈಭವದಿಂದ ಮೆರೆಯುವ ದುರಾಸೆಗೆ ಮನುಷ್ಯರು ದಾಸರಾಗುತ್ತಾರೆ ಎಂಬುದನ್ನು ಅರಿತೇ ಗಾಂಧೀಜಿ ಹೇಳಿದರು– ಸರಳ ಕಾಯಕದ ಬದುಕು ಸಾಗಿಸುತ್ತ ನೆಮ್ಮದಿಯ ಸಮಾಜವನ್ನು ಕಟ್ಟಬೇಕು; ಮನುಷ್ಯ ತನ್ನ ಮೂಲಭೂತ ಆವಶ್ಯಕತೆಗಳನ್ನೂ ಪೂರೈಸಿಕೊಂಡು ಹೆಚ್ಚು ಬಯಸದೆ ತೃಪ್ತಿಯಿಂದ ಬದುಕುವುದನ್ನು ಕಲಿಯಬೇಕು. ಜೊತೆಗೆ ಗಾಂಧೀಜಿ, ದುರಾಸೆಗೆ ಇಂಬು ಕೊಡುವ ಅನಗತ್ಯ ಉತ್ಪಾದನೆ ಮತ್ತು ಅನೈತಿಕ ಆರ್ಥಿಕ ಪ್ರಗತಿಯ ಬಗ್ಗೆ ಎಚ್ಚರಿಕೆಯನ್ನೂ ನೀಡಿದ್ದರು.

ಕಟ್ಟಕಡೆಯ ಮನುಷ್ಯನ ಕ್ಷೇಮವನ್ನು ಪ್ರಗತಿಯ ಆದ್ಯತೆಯಾಗಿ ಎತ್ತಿ ಹಿಡಿಯುವ ಗಾಂಧಿ ತತ್ವವು ಜಗತ್ತಿನ ಕಟ್ಟಕಡೆಯ ದೇಶವೂ ಘನತೆಯಿಂದ, ನೆಮ್ಮದಿಯಿಂದ ಬಾಳುವಂತೆ ಆಗಬೇಕು ಎಂದು ಬಯಸುತ್ತದೆ. ಇದೇ ಸರಿಯಾದ ವಿಶ್ವ ವಿಕಾಸ ಪಥ. ಇಂತಹ ವಿಕಾಸ ಪಥದಲ್ಲಿ ಜಗತ್ತು ನಡೆಯಬೇಕಾದರೆ ಬುದ್ಧಿಪೂರ್ವಕವಾಗಿ ನಾವು 'ಆರ್ಥಿಕ ಸಾಮ್ರಾಜ್ಯಶಾಹಿ' ಬೆಳವಣಿಗೆಯ ಕಂಟಕವನ್ನು ದಾಟಬೇಕು. ಇಂದಿನ ಯುದ್ಧ, ಹಿಂಸೆ, ಅಸಮಾನತೆಯ ಅನರ್ಥಗಳಿಗೆ ಆರ್ಥಿಕ ಸಾಮ್ರಾಜ್ಯಶಾಹಿಯೇ ಕಾರಣ. ಗಾಂಧೀಜಿ ಹೇಳುತ್ತಾರೆ 'ಒಂದು ಸಣ್ಣ ದ್ವೀಪರಾಷ್ಟ್ರ (ಇಂಗ್ಲೆಂಡ್) ಆರ್ಥಿಕ ಸಾಮ್ರಾಜ್ಯಶಾಹಿಯಾಗಿ ಬೆಳೆದು ಇಂದು ಜಗತ್ತನ್ನೇ ಸರಪಳಿಯಲ್ಲಿ ಬಂಧಿಸಿದೆ. ಭಾರತದಂತಹ ಬೃಹತ್ ರಾಷ್ಟ್ರವೇನಾದರೂ ಕೈಗಾರಿಕೀಕರಣದ ಮೂಲಕ ಆರ್ಥಿಕ ಸಾಮ್ರಾಜ್ಯಶಾಹಿಯಾಗಿ ಪರಿಣಮಿಸಿದರೆ ಇಡೀ ಜಗತ್ತನ್ನು ಮಿಡತೆಗಳಂತೆ ತಿಂದು ಮುಗಿಸುತ್ತದೆ. ದೇವರದಯೆಯಿಂದ ನಾವು ಆ ಸ್ಥಿತಿಗೆ ಹೋಗುವುದು ಬೇಡ'.

ಇಂದು ಜಗತ್ತಿನ ಅತಿ ಬಲಿಷ್ಠ ಆರ್ಥಿಕ ಸಾಮ್ರಾಜ್ಯಶಾಹಿ ದೇಶವಾಗಿ ಬೆಳೆದುನಿಂತ ಅಮೆರಿಕ ಇಡೀ ಜಗತ್ತನ್ನೇ ತನ್ನೆದುರು ಮಂಡಿಯೂರಿ ನಿಲ್ಲುವಂತೆ ಮಾಡಲು ಹುಚ್ಚು ಪ್ರಯತ್ನಗಳನ್ನು ಮಾಡುತ್ತಿದೆ. 'ಅಮೆರಿಕ ಮೊದಲು' ಎಂಬ ಘೋಷಣೆಯೊಂದಿಗೆ ಸರಕು ಸೇವೆಗಳ ಮೇಲಿನ ಸುಂಕ, ಆಮದು ಸುಂಕಗಳನ್ನು ವಿಧಿಸುತ್ತಿರುವ ಟ್ರಂಪ್ ಆರ್ಥಿಕ ಭಯೋತ್ಪಾದಕನಂತೆ ವರ್ತಿಸುತ್ತಿದ್ದಾರೆ. ಯುದ್ಧ ಬೇಡವೆಂದು ಶಾಂತಿಯನ್ನು ಬಯಸಿದರೆ ಅದನ್ನೂ ಮಾರಲು ಸಿದ್ಧವಿರುವ ಟ್ರಂಪ್ 'ನಿರಂತರ ಶಾಂತಿ'ಯನ್ನು ದಯಪಾಲಿಸುವ ತಮ್ಮ ಸಾಮರ್ಥ್ಯಕ್ಕೆ ಉಕ್ರೇನ್ ಅಮೂಲ್ಯ ಖನಿಜ ಸಂಪತ್ತನ್ನು ಬಿಟ್ಟುಕೊಡುವ ಒಪ್ಪಂದಕ್ಕೆ ಸಹಿ ಹಾಕಬೇಕು ಎನ್ನುತ್ತಾರೆ. ಬಲಿಷ್ಠ ಆರ್ಥಿಕ ಸಾಮ್ರಾಜ್ಯಶಾಹಿಯ ದೇಶ ಒಂದು ಕಡೆ, ಅಣ್ವಸ್ತ್ರ ಸಮರಕ್ಕೂ ಸಿದ್ಧ ಎನ್ನುವ ರಾಕ್ಷಸ ಶಕ್ತಿಯ ರಷ್ಯಾ ಇನ್ನೊಂದು ಕಡೆ. ಈ ಇಕ್ಕಟ್ಟಿನ ನಡುವೆ ನಿರುಪದ್ರವಿ ಉಕ್ರೇನ್ ಅಧ್ಯಕ್ಷ ಝೆಲೆಸ್ಕಿ ಜಗತ್ತಿನ ಅನುಕಂಪವನ್ನು ಗಳಿಸಿದರು ಎನ್ನಬಹುದೇ?

ಐರೋಪ್ಯ ಒಕ್ಕೂಟವು ಝೆಲೆಸ್ಕಿ ಪರವಾಗಿ ನಿಂತಿದೆಯಾದರೂ ಬ್ರಿಟನ್ ಪ್ರಧಾನಿಯು ಅಮೆರಿಕದ ನೆರವಿಲ್ಲದೆ ಶಾಂತಿ ಸಾಧ್ಯವಿಲ್ಲ ಎನ್ನುತ್ತ ಅಮೆರಿಕದ ಆರ್ಥಿಕ ಸಾಮರ್ಥ್ಯಕ್ಕೆ ತಲೆಬಾಗಿದರು. ವಿಧಿ ಇಲ್ಲದೆ ಝೆಲೆಸ್ಕಿ ಮತ್ತೆ ದೊಡ್ಡಣ್ಣನಿಗೆ ಶರಣಾಗಬೇಕಾಯಿತು. ಓವಹೌಸ್‌ನಲ್ಲಿ ನಡೆದ ಮೊದಲ ಸುತ್ತಿನ ಮಾತುಕತೆಯಲ್ಲಿ ಝೆಲೆಸ್ಕಿ ತಮ್ಮ ಕೋಪವನ್ನು, ಪ್ರತೀಕಾರ ಬುದ್ಧಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ವಿಫಲರಾದರು. ಪುಟಿನ್ ಒಬ್ಬ ಭಯೋತ್ಪಾದಕ, ಕೊಲೆಗಡುಕ, ನಂಬಿಕೆಗೆ ಅರ್ಹನಲ್ಲದ ವ್ಯಕ್ತಿ, ಅವನನ್ನು ಅಮೆರಿಕ ಏಕೆ ನಿಯಂತ್ರಿಸಲಿಲ್ಲ ಎನ್ನುತ್ತ ಅಸಹನೆಯನ್ನು ವ್ಯಕ್ತಪಡಿಸಿದರು. 'ಬಡವನ ಕೋಪ ದವಡೆಗೆ ಮೂಲ' ಎನ್ನುವ ಗಾದೆಯಂತೆ ಮತ್ತೆ ದೊಡ್ಡಣ್ಣನಿಗೇ ಅವರು ಶರಣಾಗಬೇಕಾಯಿತು.

ಝೆಲೆಸ್ಕಿ ಅವರ ಸ್ಥಾನದಲ್ಲಿ ಗಾಂಧಿ ಮಾದರಿಯೊಂದನ್ನು ಇಟ್ಟು ನೋಡೋಣ. ಬಲಿಷ್ಠ ಶಕ್ತಿಗಳಿಂದ ಆಗುವ ಅನ್ಯಾಯವನ್ನು ಗಾಂಧಿ ದೈಹಿಕ ಸಾಮರ್ಥ್ಯದಿಂದ ಎಂದೂ ಎದುರಿಸಲಿಲ್ಲ. ಹೀಗೆ ಎದುರಿಸಿ ಗೆಲ್ಲುವುದು ಸಾಧ್ಯವೆ ಅಥವಾ ಅಸಾಧ್ಯವೆ ಎಂಬ ಪ್ರಶ್ನೆ ಮುಖ್ಯವಲ್ಲ. ಬಾಹ್ಯ ಜಗತ್ತಿನ ವಿದ್ಯಮಾನಗಳು ಅಂತರಂಗದ ಜಗತ್ತಿನಲ್ಲಿ ನಾವು ಗಾಢವಾಗಿ ನಂಬಿ ಸ್ಥಾಪಿಸುವ ತಾತ್ವಿಕತೆಯನ್ನು ಆಧರಿಸಿವೆ. ಸತ್ಯ ಅಹಿಂಸೆಯ ತತ್ವಗಳ ಮೇಲೆ ಯಾವುದನ್ನು ಸಾಧಿಸುತ್ತೇವೆಯೋ ಅದು ಶಾಶ್ವತ ಎಂಬ ಅಚಲ ವಿಶ್ವಾಸ ಗಾಂಧಿ ತತ್ವದ ಬುನಾದಿ. ದುರ್ಬಲ ಉಕ್ರೇನ್ ದೇಶ ರಷ್ಯಾದಿಂದ ತನಗಾಗುತ್ತಿರುವ ಅನ್ಯಾಯವನ್ನು ಶಕ್ತಿಶಾಲಿ ಅಮೆರಿಕ ಮತ್ತು ಯುರೋಪ್ ದೇಶಗಳ ಶಸ್ತ್ರಾಸ್ತ್ರಗಳ ನೆರವಿನಿಂದ ಎದುರಿಸಿ, ತಪ್ಪಿಗೆ ತಕ್ಕ ಶಿಕ್ಷೆ ವಿಧಿಸುತ್ತೇನೆ ಎಂದು ಭಾವಿಸಿದರೆ, ಝೆಲೆಸ್ಕಿಗಾದ ಮುಖಭಂಗಕ್ಕಿಂತ ಬೇರೇನು ಸಾಧ್ಯ?

'ಶಸ್ತ್ರಾಸ್ತ್ರ ಸಾಮರ್ಥ್ಯದಲ್ಲಿ ನನಗೆ ನಂಬಿಕೆಯಿಲ್ಲ, ಒಳಿತೆಸಗುವ ಸಾಧ್ಯತೆಯೇ ನನ್ನ ಸಾಮರ್ಥ್ಯ. ನಾನು ಯಾರನ್ನೂ ದ್ವೇಷಿಸುವುದಿಲ್ಲ, ಪುಟಿ ಅವರಿಗೂ ಒಳಿತನ್ನೇ ಬಯಸುತ್ತ ಅವರ ಹೃದಯದಲ್ಲಿ ಅನುಕಂಪ ಹುಟ್ಟಲಿ ಎಂದು ಪ್ರಾರ್ಥಿಸುತ್ತೇನೆ' ಎಂದು ಝೆಲುಸ್ಕಿ ಓವಲ್‌ಹೌಸ್‌ನಲ್ಲಿ ಹೇಳಿದ್ದರೆ, ಹೆಚ್ಚಿನ ಅಂತರರಾಷ್ಟ್ರೀಯ ಅನುಕಂಪವನ್ನು ಅವರು ಗಳಿಸುತ್ತಿದ್ದರು. ಬಲಿಷ್ಠವಾದ ದುಷ್ಟಶಕ್ತಿಗಳನ್ನು ಎದುರಿಸುವ ಗಾಂಧಿ ಮಾದರಿಯನ್ನು ಬಲಪಡಿಸುವ ಮೂಲಕ ವಿಶ್ವ ವಿಕಾಸ ಪಥಕ್ಕೆ ಶಾಶ್ವತ ಶಾಂತಿಯ ಸಾಧ್ಯತೆಯನ್ನು ತೋರಿಸುತ್ತಿದ್ದರು.

'ದ್ವೇಷದಿಂದ ದ್ವೇಷ ಪರಿಹಾರವಾಗದು' ಎಂಬ ಬುದ್ಧನ ಮಾತು ಇಂದಿಗೂ ಮುಂದೆಂದಿಗೂ ಸತ್ಯ. ಸಂಯಮದ ಮೂಲಕ ಮಾತ್ರ ನಾವು ಇಂತಹ ಸಾಧ್ಯತೆಗಳನ್ನು ನೋಡಬಹುದು. ಆದರೆ ಇಡೀ ಜಗತ್ತು ಸಂಯಮವನ್ನು ಒಪ್ಪುತ್ತಿಲ್ಲ. 'ಅದು ಅಗತ್ಯ, ಆದರೆ ಅದು ನನ್ನಿಂದ ಸಾಧ್ಯವಾಗುತ್ತಿಲ್ಲ' ಎಂಬ ಪಶ್ಚಾತ್ತಾಪವೂ ಇಲ್ಲದೆ, ಅಪರಾಧಿ ಪ್ರಜ್ಞೆಯೂ ಇಲ್ಲದೆ ಜಗತ್ತು ಆತ್ಮಹತ್ಯಾ ಪಥವನ್ನು ತುಳಿಯುತ್ತಿರುವುದು ದುರದೃಷ್ಟಕರ. ಶಸ್ತ್ರಾಸ್ತ್ರಗಳ ಬಲದಿಂದ ಮಾತ್ರ ಶಾಂತಿ ಸಾಧ್ಯ, ಶಕ್ತಿಶಾಲಿಗಳಲ್ಲದವರಿಗೆ ಶಾಂತಿ ಸಾಧ್ಯವಿಲ್ಲ ಎಂಬ ನಂಬಿಕೆ ದಿನಗಳೆದಂತೆ ಸುಳ್ಳಾಗುತ್ತಿದೆ. ಗಾಂಧಿ ಪರಿಹಾರವನ್ನು ಒಪ್ಪಿಕೊಳ್ಳದೆ ಜಗತ್ತಿಗೆ ಅನ್ಯಮಾರ್ಗ ಇಲ್ಲ.

(ಕೃಪೆ : ಪ್ರಜಾವಾಣಿ ದಿನಪತ್ರಿಕೆ)


ಚಿ|ತ್ರಾ|ವ|ಳಿ



ಕೊಪ್ಪಳದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದ ಉದ್ಘಾಟನೆ



ದಾಂಡಿ ಉಪ್ಪಿನ ಸತ್ಯಾಗ್ರಹದ ನೆನಪಿಗಾಗಿ ಗಾಂಧಿಭವನ ಅಂಗಳದಲ್ಲಿ ಕಿರು ಪುಸ್ತಕ ವಿತರಣೆ




ಎಲ್ಲರ ಗಾಂಧೀಜಿ: ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ.

ಗಾಂಧೀಜಿ ಬರೆದ 124 ವೈವಿಧ್ಯಮಯ ಬರಹಗಳು ಹಾಗೂ 150 ಹೇಳಿಕೆಗಳನ್ನು ಒಳಗೊಂಡ 400 ಪುಟಗಳ ಪುಸ್ತಕ ಇದು. ಗಾಂಧೀ ಚಿಂತನೆಯ ಅಪೂರ್ವ ಮಿಂಚು, ಆಳ, ಗಾಂಭೀರ್ಯಗಳನ್ನು ಬಿಂಬಿಸುವ ಈ ಕನ್ನಡಾನುವಾದಗಳನ್ನು 'ಬಾಪೂ ಚಿಂತನೆ' ಪ್ರತಿ ತಿಂಗಳು ಪ್ರಕಟಿಸುತ್ತದೆ.

ಕವಿ, ಕಾವ್ಯ ಮತ್ತು ಕಲೆ

– ನಟರಾಜ್ ಹುಳಿಯಾರ್



ಸಾಹಿತಿಗಳಿಗೊಂದು ಮನವಿ

ನಾವು ನಮ್ಮ ಸಾಹಿತ್ಯವನ್ನು ಯಾರಿಗೋಸ್ಕರ ಇಟ್ಟುಕೊಳ್ಳಬೇಕು? ಅಹ್ಮದಾಬಾದಿನ ಶ್ರೀಮಂತರಿಗಾಗಲೀ, ಮಧ್ಯಮವರ್ಗದವರಿಗಾಗಲೀ ಖಂಡಿತಾ ಅಲ್ಲ. ಅವರು ತಮ್ಮ ಮನೆಗೇ ಸಾಹಿತಿಗಳನ್ನು ಕರೆಸಿಕೊಳ್ಳಬಲ್ಲರು. ದೊಡ್ಡ ದೊಡ್ಡ ಲೈಬ್ರರಿಗಳನ್ನು ತಮ್ಮ ಮನೆಗಳಲ್ಲೇ ಇರಿಸಿಕೊಳ್ಳಬಲ್ಲರು.

ಆದರೆ ಬಾವಿಯಿಂದ ನೀರು ಸಾಗಿಸುತ್ತಿರುವ ಗಾಡಿಗೆ ಕಟ್ಟಿರುವ ಎತ್ತಿನ ಬೆನ್ನಿಗೆ ಬಾರಿಸುತ್ತಾ, ಬಾಯಿಗೆ ಬಂದಂತೆ ಬಯ್ಯುತ್ತಾ ಕೆಲಸ ಮಾಡುತ್ತಿರುವ ಆ ಬಡವನ ಕತೆಯೇನು?

ಕೆಲವು ವರ್ಷಗಳ ಕೆಳಗೆ ನಾನು ಕವಿ ನರಸಿಂಹರಾವ್ ಅವರನ್ನು ಕೇಳಿದೆ: 'ಸ್ವಾಮಿ, ಅಲ್ಲಿ ಆ ಬಡವ ಆ ಕೆಟ್ಟ ಬೈಗುಳಗಳನ್ನು ಎಂದೆಂದೂ ಮರೆಯಬಲ್ಲ ರಾಗವಾದ ಹಾಡನ್ನೋ, ಗೀತೆಗಳನ್ನೋ ಕೊಡಬಲ್ಲಿರಾ?'

ಹೀಗೆ ಜೀವ ತುಂಬುವ ಸಾಹಿತ್ಯವನ್ನು ನಾವು ಒದಗಿಸಬೇಕಾದ ನೂರಾರು ಜನ ನನ್ನ ಕಣ್ಣೆದುರು ಇದ್ದಾರೆ. ಈ ಕೆಲಸವನ್ನು ಹೇಗೆ ಮಾಡುವುದು? ನಾನೀಗ ಸೇವಾಗ್ರಾಮ ಊರಿನಲ್ಲಿದ್ದೇನೆ. ಅಲ್ಲಿರುವ ಆರುನೂರು ಜನರಲ್ಲಿ ಹತ್ತು-ಹನ್ನೆರಡು ಜನಕ್ಕೆ ಮಾತ್ರ ಓದು, ಬರಹ ಗೊತ್ತು. ಇಲ್ಲಿಗೆ ಆ ಊರಿನ ಹುಡುಗನೊಬ್ಬನನ್ನು ಕರಕೊಂಡು ಬಂದಿದ್ದರೆ ಚೆನ್ನಾಗಿರುತ್ತಿತ್ತು. ಕರಕೊಂಡು ಬರಲಿಲ್ಲ. ಅವನಿಲ್ಲಿ ಬಂದಿದ್ದರೆ ಏನು ಮಾಡುತ್ತಿದ್ದನೋ! ತಾನೊಂದು ವಿಚಿತ್ರ ಪ್ರಪಂಚಕ್ಕೆ ಬಂದಿದ್ದೀನಿ ಎಂದು ಅವನಿಗನ್ನಿಸುತ್ತಿತ್ತು. ಈ ಮಾತು ಹೇಳುತ್ತಿರುವಾಗ ಏಸು ಕ್ರಿಸ್ತನ ಜೀವನ ಕುರಿತು ಡೀನ್ ಫಾರರ್ ಬರೆದ ಪುಸ್ತಕ ನೆನಪಾಗುತ್ತಿದೆ. ನಾನು ಬ್ರಿಟಿಷ್ ಆಡಳಿತವನ್ನು ವಿರೋಧಿಸುತ್ತಿರಬಹುದು; ಆದರೆ ನಾನು ಇಂಗ್ಲಿಷ್ ಜನರನ್ನಾಗಲೀ ಅವರ ಭಾಷೆಯನ್ನಾಗಲೀ ದ್ವೇಷಿಸುವುದಿಲ್ಲ. ನಿಜ ಹೇಳಲೆ? ಅವರ ಸಾಹಿತ್ಯನಿಧಿಯನ್ನು ನಾನು ಹಾಡಿ ಹೊಗಳುತ್ತೇನೆ.

ಇಂಗ್ಲಿಷ್ ಭಾಷೆಯ ಅಪರೂಪದ ನಿಧಿಗಳಲ್ಲಿ ಫಾರರ್ ಬರೆದಿರುವ ಪುಸ್ತಕವೂ ಒಂದು. ಈ ಪುಸ್ತಕ ಬರೆಯಲು ಅವರು ಎಷ್ಟು ಶ್ರಮಪಟ್ಟಿದ್ದಾರೆನ್ನುವುದು ನಿಮಗೆ ಗೊತ್ತಿದೆಯೆ? ಇಂಗ್ಲಿಷ್ ಭಾಷೆಯಲ್ಲಿ ಜೀಸಸ್ ಕುರಿತ ಏನೇನು ಪುಸ್ತಕಗಳಿವೆಯೋ ಅವೆಲ್ಲವನ್ನೂ ಓದಿದ ಮೇಲೆ ಫಾರರ್ ಪ್ಯಾಲೆಸ್ಟೈನಿಗೆ ಹೋದರು. ಅಲ್ಲಿ ತಾನು ಬೈಬಲ್ಲಿನಲ್ಲಿ ಓದಿ ಪರಿಚಯಿಸಿಕೊಂಡಿದ್ದ ಎಲ್ಲ ಸ್ಥಳಗಳನ್ನೂ, ತಾಣಗಳನ್ನೂ ಗುರುತಿಸಿ ನೋಡಿಕೊಂಡು ಬಂದರು. ಆಮೇಲೆ ಆಳದ ನಂಬಿಕೆಯಿಂದ ಇಂಗ್ಲೆಂಡಿನ ಜನಸಮುದಾಯಕ್ಕಾಗಿ, ಅವರೆಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಈ ಪುಸ್ತಕ ಬರೆದರು. ಈ ಪುಸ್ತಕ [ಇಂಗ್ಲಿಷ್ ವಿದ್ವಾಂಸ] ಸ್ಯಾಮ್ಯುಯೆಲ್ ಜಾನ್ಸನ್ ಶೈಲಿಯಲ್ಲಿಲ್ಲ; ಬದಲಿಗೆ, ಅದು [ಇಂಗ್ಲಿಷ್ ಕಾದಂಬರಿಕಾರ] ಚಾರ್ಲ್ಸ್ ಡಿಕೆನ್ಸ್ ಶೈಲಿಯಲ್ಲಿದೆ. ಫಾರರ್ ಥರ ನಮ್ಮ ಹಳ್ಳಿಯ ಜನರಿಗಾಗಿ ಶ್ರೇಷ್ಠ ಸಾಹಿತ್ಯವನ್ನು ಬರೆಯುವ ಜನ ಇದ್ದಾರೆಯೆ? ನಮ್ಮ ಸಾಹಿತಿಗಳು ಭವಭೂತಿ, ಕಾಳಿದಾಸರನ್ನೋ, ಇಂಗ್ಲಿಷ್ ಲೇಖಕರನ್ನೋ ಅರೆದು ಕುಡಿದು ಅನುಕರಣೆಯ ಕೃತಿಗಳನ್ನು ಕೊಡುತ್ತಿದ್ದಾರೆ. ಅವರು ಹಳ್ಳಿಗಳಿಗೆ ಹೋಗಿ, ಅಧ್ಯಯನ ಮಾಡಿ, ಜೀವ ಹುಟ್ಟಿಸುವಂಥ ಏನನ್ನಾದರೂ ಬರೆಯಲಿ ಎಂದು ನಾನು ಕೇಳಿಕೊಳ್ಳುತ್ತೇನೆ. (ಗುಜರಾತ್ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಭಾಷಣ.)

ಕನ್ನಡಕ್ಕೆ: ನಟರಾಜ್ ಹುಳಿಯಾರ್


* * *

ಒಂದು ಕವಿತೆಯ ಅರ್ಥ

Awake and arise, O traveller, it is morning now;
It is no longer night that you still slumber.

ಓ ಯಾತ್ರಿಕನೆ, ಏಳು, ಎಚ್ಚರವಾಗು, ಬೆಳಗಾಯಿತು
ಇನ್ನೂ ಗಾಢ ನಿದ್ರೆಯಲ್ಲಿ ಮುಳುಗಿರಲು ಇದೇನೂ ರಾತ್ರಿಯಲ್ಲ.

'ಓ ಯಾತ್ರಿಕನೆ, ಬೆಳಗಾಯಿತು ಏಳು. ನೀನು ಹೀಗೆ ನಿದ್ರಿಸುತ್ತಿರಲು ಇದೇನು ರಾತ್ರಿಯೆಂದು ತಿಳಿದಿರುವೆಯಾ?' ಎಂದು ಮೇಲಿನ ಸಾಲುಗಳ ಅರ್ಥವನ್ನು ಯಾರಾದರೂ ಅರ್ಥೈಸಿಕೊಂಡರೆ, ಅವರು ಸಾಲುಗಳನ್ನು ಸುಮ್ಮನೆ ಓದಿದ್ದಾರೆ ಮತ್ತು ಅವುಗಳ ಕುರಿತು ಆಲೋಚಿಸುವ ಕೆಲಸವನ್ನು ಮಾಡಿಲ್ಲವೆಂದೇ ಅರ್ಥ. ಇಂತಹ ಓದುಗ ಪ್ರತಿ ಮುಂಜಾನೆ ಬೇಗ ಏಳುತ್ತಾನೆ, ಮತ್ತು ಬೇಗನೆ ಎದ್ದಿರುವ ತನ್ನ ಬಗ್ಗೆ ತಾನು ಹೆಮ್ಮೆಪಟ್ಟುಕೊಂಡು ಸುಮ್ಮನಾಗುತ್ತಾನೆ. ಆದರೆ ಆಲೋಚಿಸಲು ಉತ್ಸುಕನಾಗಿರುವ ಓದುಗ ಪ್ರಶ್ನಿಸಿಕೊಳ್ಳುತ್ತಾನೆ: ಈ ಯಾತ್ರಿಕ ಯಾರು? 'ಬೆಳಗು' ಎನ್ನುವ ಪದದ ಅರ್ಥ ಇಲ್ಲಿ ಏನು? 'ಇದೇನೂ ರಾತ್ರಿಯಲ್ಲ' ಎಂದು ಕವಿ ಯಾವ ಅರ್ಥದಲ್ಲಿ ಹೇಳುತ್ತಿದ್ದಾನೆ? 'ಗಾಢ ನಿದ್ರೆಯಲ್ಲಿ ಮುಳುಗುವುದು' ಎಂದರೇನು? ಹೀಗೆ ಓದುಗ ಆಲೋಚಿಸತೊಡಗಿದಾಗ, ಪದ್ಯದ ಸಾಲುಗಳು ಪ್ರತಿ ದಿನವೂ ಆತನಿಗೆ ಹೊಸ ಅರ್ಥಗಳನ್ನು ನೀಡುತ್ತವೆ. ಪದ್ಯದ ಸಾಲುಗಳಲ್ಲಿ ಮೂಡಿರುವ ಯಾತ್ರಿಕ ಇಡೀ ಮಾನವಕುಲವನ್ನು ಪ್ರತಿನಿಧಿಸುವ ಯಾತ್ರಿಕನಾಗಿರುತ್ತಾನೆ. ಯಾರಿಗೆ ದೇವರಲ್ಲಿ ನಂಬಿಕೆ ಇರುತ್ತದೆಯೋ ಅವರಿಗೆ ಎಲ್ಲಾ ಕಾಲವೂ 'ಮುಂಜಾನೆ', ಅಂದರೆ, ಬೆಳಕಿರುವ ಕಾಲವೇ ಆಗಿರುತ್ತದೆ. ರಾತ್ರಿ ಎನ್ನುವುದು



ಮೂರ್ಖತನದ ಪ್ರತೀಕವೂ ಆಗಬಹುದು. ಈ ಸಾಲು ಸೋಮಾರಿಯಾಗಿರುವ ಎಲ್ಲರಿಗೂ ಅನ್ವಯವಾಗುತ್ತದೆ. ಪೆದ್ದು ಪೆದ್ದಾಗಿ ತಪ್ಪುಗಳನ್ನು ಮಾಡುವ ಎಲ್ಲರಿಗೂ ಅನ್ವಯಿಸುತ್ತದೆ.

ಸುಳ್ಳು ಹೇಳುವ ಯಾವುದೇ ವ್ಯಕ್ತಿ ಅರೆ ನಿದ್ರಾವಸ್ಥೆಯಲ್ಲೇ ಇರುತ್ತಾನೆ. ಇಂತಹ ವ್ಯಕ್ತಿಗಳಿಗೆ ಎಚ್ಚರಗೊಳ್ಳಿ, ಏಳಿ, ಎದ್ದೇಳಿ ಎಂಬ ಕರೆಯಿದೆ ಈ ಪದ್ಯದಲ್ಲಿ. ಹೀಗೆ ನಾವು ಇಲ್ಲಿರುವ ಪ್ರತಿಯೊಂದು ಸಾಲುಗಳಲ್ಲಿ ಅಡಕವಾಗಿರುವ ಅರ್ಥವನ್ನು ಹುಡುಕಬಹುದು, ಮತ್ತು ಇಂತಹ ಓದಿನ ಮೂಲಕ ಮಾನಸಿಕ ನೆಮ್ಮದಿ ಪಡೆಯಬಹುದು. ಇನ್ನೂ ಬಿಡಿಸಿ ಹೇಳಬೇಕೆಂದರೆ, ಇಲ್ಲಿರುವ ಪ್ರತಿಯೊಂದು ಸಾಲನ್ನೂ ಕುರಿತು ಧ್ಯಾನಿಸುವುದರಿಂದ, ಓದುಗರು ಆಧ್ಯಾತ್ಮಿಕ ಯಾತ್ರೆಗೆ ಪೂರಕವಾದ ಅವಕಾಶವನ್ನು ಸೃಷ್ಟಿಸಿಕೊಳ್ಳಬಹುದು. ಆದರೆ, ನಾಲ್ಕು ವೇದಗಳನ್ನು ಕಂಠಪಾಠ ಮಾಡಿ ಅವುಗಳ ಅರ್ಥವನ್ನೇ ತಿಳಿಯದಿರುವವರಿಗೆ ಇದೆಲ್ಲಾ ಅನಗತ್ಯ ಹೊರೆ ಅನ್ನಿಸಲೂಬಹುದು.

ನನಗೆ ಹೊಳೆದ ಒಂದು ಉದಾಹರಣೆಯನ್ನು ನಾನಿಲ್ಲಿ ನಿಮಗೆ ಕೊಟ್ಟಿದ್ದೇನೆ. ಒಂದು ವೇಳೆ ನಾವೆಲ್ಲರೂ ಯಾವ ದಿಕ್ಕಿನಲ್ಲಿ ಮುನ್ನಡೆಯಬೇಕು ಮತ್ತು ಯಾವ ನಿಟ್ಟಿನಲ್ಲಿ ಸಾಗಬೇಕು ಎಂದು ಆಲೋಚನೆ ಮಾಡಲು ನಿರ್ಧರಿಸಿದರೆ, ಅನುದಿನವೂ ಬದುಕಿನಲ್ಲಿ ಹೊಸ ಹೊಸ ಅರ್ಥಗಳ ಶೋಧದಲ್ಲಿ ತೊಡಗುತ್ತೇವೆ; ಬದುಕಿನಲ್ಲಿ ಹೊಸ ಹೊಸ ಅನುಭವಗಳಿಗೆ ಸದಾ ತೆರೆದುಕೊಂಡಿರುತ್ತೇವೆ

ಕನ್ನಡಕ್ಕೆ: ಸದಾನಂದ ಆರ್.



ಜೀಸಸ್, ಸಾಕ್ರಟಿಸ್

ನನ್ನ ಪ್ರಕಾರ ಏಸು ಕ್ರಿಸ್ತ ಒಬ್ಬ ಅಪೂರ್ವ ಕಲಾವಿದ. ಯಾಕೆಂದರೆ ಆತ ಸತ್ಯವನ್ನೇ ಕಂಡುಕೊಂಡ ಮತ್ತು ಅದನ್ನೇ ಎಲ್ಲರಿಗೂ ಸಾರಿದ. ಆದರೆ ಕಲಾವಿದರೆಂದು ತಮ್ಮನ್ನು ಕರೆದುಕೊಳ್ಳುವ ಬಹಳಷ್ಟು ಮಂದಿಯ ಕಲಾಕೃತಿಗಳಲ್ಲಿ ಆತ್ಮೋನ್ನತಿಯ ಸೆಳೆತವಾಗಲೀ ಚಡಪಡಿಕೆಯಾಗಲೀ ಕಾಣುವುದೇ ಇಲ್ಲ. ನಿಜವಾದ ಕಲೆಯೆಂದರೆ ಆತ್ಮದ ಅನಾವರಣವೇ.

ವೈಯಕ್ತಿಕವಾಗಿ ಹೇಳುವುದಾದರೆ, ನಾನು ಹೊರಜಗತ್ತಿನ ಗೊಡವೆ ಬಿಟ್ಟು ಒಳಗಿನ ಅನುಭೂತಿಯ ನೆರವಿನಿಂದ ನಿರಾಳವಾಗಿ ಜೀವಿಸಬಲ್ಲೆ. ಹೀಗೆ ನಾನು ಕಲೆಯ ಸಾನಿಧ್ಯದಲ್ಲಿ ಬದುಕುತ್ತಿರುತ್ತೇನೆ ಎಂದು ತಿಳಿಯುವೆ. ನಾನು ಕಲಾಕೃತಿಗಳನ್ನು ರಚಿಸದಿರಬಹುದು. ಆದರೆ ನನ್ನ ಮನೆಯ ಕೋಣೆಗಳಿಗೆ ಚಿತ್ತಾರವಿಲ್ಲದಿದ್ದರೂ, ಮನೆಗೆ ಚಾವಣಿಯೇ ಇಲ್ಲದಿದ್ದರೂ ಜೀವಿಸಲು ನನಗೇನೂ ಕಷ್ಟವೆನಿಸಲಿಕ್ಕಿಲ್ಲ. ಯಾಕೆಂದರೆ ನಾನು ರಾತ್ರಿಯ ಹೊತ್ತಿನ ಚುಕ್ಕಿಗಳ ಆಕಾಶವನ್ನು ನೋಡುತ್ತ ಹೊತ್ತು ಕಳೆಯಬಲ್ಲೆ.

ಗೋಚರವಾಗುವ ಸೌಂದರ್ಯಕ್ಕಿಂತ ಅಗೋಚರ ಸೌಂದರ್ಯವನ್ನು ಕಲೆ ತಟ್ಟನೆ ಗುರುತಿಸಬಲ್ಲದು. ಕಲೆಯಲ್ಲಿ ವಿನಾಶಕಾರಿ ಕಲೆ ಹಾಗೂ ಜೀವವನ್ನು ಪೊರೆಯುವ ಕಲೆ ಎಂಬುದಾಗಿ ಎರಡು ವಿಧ. ನಿಜವಾದ ಕಲೆ ಎನ್ನುವುದು ಕಲಾವಿದರ ಭಾವನೆಗಳ ಪ್ರಾಮಾಣಿಕ ದಾಖಲೆ ಅನಿಸುವಂತಿರುತ್ತದೆ.

ಸಾಕ್ರಟಿಸ್ ತನ್ನ ಕಾಲದಲ್ಲಿ ಸತ್ಯನಿಷ್ಠೆಗೆ ಹೆಸರಾದ ವ್ಯಕ್ತಿ ಎಂದು ಕೇಳಿಬಲ್ಲೆವು. ಆತ ರೂಪಿನಲ್ಲಿ ಇಡೀ ಗ್ರೀಸ್ ದೇಶದಲ್ಲೇ ಕಳಪೆಯಾಗಿದ್ದ. ಆದರೆ ನನ್ನ ಪ್ರಕಾರ ಸಾಕ್ರಟಿಸ್ ಬಹಳ ಸುಂದರ ಮನುಷ್ಯ. ಅವನ ಸೌಂದರ್ಯವಿದ್ದುದು ಅವನ ಅಂತರಂಗದಲ್ಲಿ ; ಆತನ ಸತ್ಯಾನ್ವೇಷಣೆಯ ತಪಸ್ಸಿನಲ್ಲಿ. ಸತ್ಯಾನ್ವೇಷಣೆ ಎಲ್ಲರ ಬದುಕಿನ ಮೂಲ ಧ್ಯೇಯವಾಗಬೇಕು. ಸೌಂದರ್ಯ ಹಾಗೂ ಸತ್ವ ಆಮೇಲೆ ತಾವಾಗಿಯೇ ವ್ಯಕ್ತಿತ್ವಕ್ಕೆ ಕೂಡಿಕೊಳ್ಳುತ್ತವೆ.

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

ದಿನಾಂಕ 8.05.2025 ರಂದು ವಿನೋಬಾಜಿಯವರ ಶಿಷ್ಯೆ ಶ್ರೀಮತಿ ಕಾಳಿಂದಿ ತಾಯಿ 93 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಶ್ರೀಮತಿ ಕಾಳಿಂದಿ ತಾಯಿ ಕಳೆದ ಎರಡು ತಿಂಗಳಿನಿಂದ ಸಾವಿಗೆ ಸಿದ್ಧತೆ ನಡೆಸುತ್ತಿದ್ದರು. ಅವರು ಆಹಾರವನ್ನು ತ್ಯಜಿಸಿ ನೀರಿನ ಮೇಲೆ ಮಾತ್ರ ಅವಲಂಬಿತರಾಗಿದ್ದರು. ಅವರನ್ನು ನಾನು ಕಳೆದ ನವೆಂಬರಿನಲ್ಲಿ ಪೌನಾರ್ ಆಶ್ರಮದಲ್ಲಿ ನಡೆದ ' ಮಿತ್ರ ಮಿಲನ 'ದಲ್ಲಿ ಭೇಟಿಯಾಗಿದ್ದೆ ಅವರ ಸ್ಮರಣಶಕ್ತಿ ಚುರುಕಾಗಿತ್ತು . ಅವರು ತಮ್ಮ ಹುಟ್ಟೂರಾದ ಇಂದೋರ್ ಜೊತೆಗೆ ಇಡೀ ದೇಶದ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದರು .


ಅವರ ತಂದೆ ಸ್ವಾತಂತ್ರ್ಯ ಹೋರಾಟಗಾರ ತಾತ್ಯಾ ಸಾಹೇಬರು ತಮ್ಮ ಮಗಳು ಕಾಳಿಂದಿ ತಾಯಿಯನ್ನು ವಿನೋಬಾಗೆ ಅರ್ಪಿಸಿದರು. ದೇಶಾದ್ಯಂತ ಭೂದಾನ ಪಾದಯಾತ್ರೆಯಲ್ಲಿ ಕಾಳಿಂದಿ ತಾಯಿ ವಿನೋಬಾ ಜೊತೆಗಿದ್ದರು. ಪವಿತ್ರ ಕುರಾನ್ ಅನ್ನು ಆಳವಾಗಿ ಅಧ್ಯಯನ ಮಾಡಿದ ನಂತರ, ಅವರು 'ಇಸ್ಲಾಂ ಸಂದೇಶ' ಎಂಬ ಪುಸ್ತಕವನ್ನು ಬರೆದರು. ದೀದಿಯವರು ವಿನೋಬಾ ಅವರ ಚಿಂತನೆಗಳ ಅತ್ಯುತ್ತಮ ವ್ಯಾಖ್ಯಾನಕಾರರಾಗಿದ್ದರು. ಕೆಲವು ದಿನಗಳ ಹಿಂದೆಯಷ್ಟೇ ಅವರು ಭೂದಾನ ಯಾತ್ರೆಯ ಬಗ್ಗೆ ಒಂದು ಪುಸ್ತಕ ಬರೆದಿದ್ದರು.

ಅವರ ಜೀವನ ಕಾರ್ಯವು ನಮ್ಮೆಲ್ಲರನ್ನು ಮುಟ್ಟಲಿ ಎನ್ನುವ ಪ್ರಾರ್ಥನೆಯೊಂದಿಗೆ ಶ್ರೀಮತಿ ಕಾಳಿಂದಿ ದೀದಿ ಅವರಿಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವಿನಮ್ರ ಗೌರವ ಸಲ್ಲಿಸುತ್ತದೆ .

– ಅಬಿದಾ ಬೇಗಂ



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ
RNI No. KARBIL/2019/77950 Regd No.KA/BGGPO/2589/2023-25
Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58